ಬಿಲದ ಕೋಣೆಯಲ್ಲಿ ಯಂತ್ರಮಾನವನಂತೆ ಕುಳಿತು, ಮೇಜಿನ ಒಂದು ಭಾಗಕ್ಕೆ ಮಾತ್ರ ಪಸರಿಸುವ ದೀಪದ ಬೆಳಕಿನಲ್ಲಿ ಪಾಚಿ ರಂಗಿನ ನೋಟಿನ ಮೇಲೆ ಹಿಡಿದಿದ್ದ ಭೂತಗನ್ನಡಿಯನ್ನು ಇಳಿಸಿದ ವಾನಂಬಾಡಿ, ಸೊರಗಿ ಸುಕ್ಕು ಬಿದ್ದ ಬಲಗೆನ್ನೆಯಲ್ಲಿನ ಸ್ನಾಯುವಿನ ಒಂದು ಭಾಗ ಗಂಟೇರಿತು. ಕೆಳ ತುಟಿಯ ಬಲ ತುಡಿ ಹಿಗ್ಗಿತು.

ಇದು ಸಾಚಾ ನೋಟಲ್ಲ.....ಖೋಟಾ ಬಣ್ಣದ ಕಾಗದ!

ಬಾಗಿಲು ಬಡಿದ ಶಬ್ದ ಕೇಳಿಸಿತು. ಎಡಗೈಯಲ್ಲಿ ನೋಟು ಹಿಡಿದ ಚಿಮುಟ ಎಚ್ಚರಿಕೆಯಿಂದ ಮೊದಲು ಮೇಜಿಗಿಳಿಯಿತು. ನಂತರ ಬಲಗೈಯಲ್ಲಿನ ಭೂತಗನ್ನಡಿ.

ತುಳಿತಕ್ಕೆ ಸಿಕ್ಕಿದ ನಾಯಿಯಂತೆ ಸಿಡುಕಿನ ಕೊರಗು ಸ್ವರ ಹಾಕಿ ಮೇಲೆದ್ದು ಬಾಗಿಲಿನ ಲಾಕ್ ಸಡಿಲಿಸಿ ತೆರೆದ.

"ಮನೆಗೆ ಬೆಂಕಿ ಬಿದ್ದಿದೆಯಾ?"

ಎದುರು ನಿಂತವನ ಮೇಲೆ ಜಿಗಿಯುವಂತೆ ಕತ್ತು ಮುಂದೆ ತಂದು ಕೋಪದ ಕಂಪನದಲ್ಲಿ ಕೇಳಿದ.

ಮನೆ ಆಳು ಅಮಾಸೆ ಹೆಜ್ಜೆ ಹಿಂದಿಟ್ಟು ಕಣ್ಣು ಮುಚ್ಚಿ ದವಡೆಗಳನ್ನು ಬಿಗಿಯಾಗಿ ಕಚ್ಚಿ ಮತ್ತೆ ಸಡಿಲಿಸಿದ.

"ನೀವು ಕೆಲಸದಲ್ಲಿದ್ದೀರಿ, ನಿಮ್ಮನ್ನ ಈಗ ಕರೆಯೋದಿಲ್ಲ ಅಂತ ಹೇಳ್ದೆ ಅವನಿಗೆ"

"ಯಾರವನು?"

"ಇನ್ಸ್‌ಪೆಕ್ಟರ್ ಫಾಸ್ಟರ್ ರಿಂಗ್ ಮಾಡಿದ್ರು....."

"ಫಾಸ್ಟರ್? ಆ ಹೆಸರಿನೋನು ಯಾವನೂ ನನಗೆ ಗೊತ್ತಿಲ್ಲ. ಹೇಳು ಅವನಿಗೆ ಈಗ ನಾನು ನೋಡೋದಿಲ್ಲಾಂತ"

"ಫೋನ್‌ನಲ್ಲಿ ಕೇಳಿದ್ದು"

ಅಮಾಸೆ ಬೇಸರದ ವ್ಯಂಗ್ಯದಲ್ಲಿ ಮುಖ ಓರೆ ಮಾಡಿದ.

"ಹೇಳು ಯಾರೊಂದಿಗೂ ಮಾತಾಡೋದಿಲ್ಲಾಂತ....."

ಜೋರಾಗಿ ಕೈ ಬೀಸಿದವನು ಕೋಪದ ಧ್ವನಿಯ ಸ್ತರ ಹಾಗೆಯೇ ಇಳಿಸಿ ಮುಖ ಮತ್ತಷ್ಟು ಮುಂದು ಮಾಡಿದ.

"ಸ್ವಲ್ಪ ತಾಳು, ಇನ್ಸ್‌ಪೆಕ್ಟರ್ ಅಂದೆಯಾ?.....ಯಾವ ಇನ್ಸ್‌ಪೆಕ್ಟರ್?. ....ಕಾರ್ಪೊರೇಷನ್ ಇನ್ಸ್‌ಪೆಕ್ಟರ್? ಅಬ್ಕಾರಿ ಇನ್ಸ್‌ಪೆಕ್ಟರ್? ಕಸ್ಟಮ್ಸ್.....?"

"ಗೊತ್ತಿಲ್ಲ, ನರಹತ್ಯೆಗಳ ವಿಭಾಗದ ಇನ್ಸ್‌ಪೆಕ್ಟರ್ ಅಂತ ಹೇಳಿದ ಹಾಗಿತ್ತು"

ವಾನಂಬಾಡಿಯ ಬೆರಳುಗಳು ಕೆನ್ನೆ ಹಿಸುಕಿದವು.

"ಹೋಮಿಸೈಡಲ್ ಡಿಪಾರ್ಟ್‌ಮೆಂಟ್! ಪೊಲೀಸ್ ಇಲಾಖೆ?. ..... ನನಗೆ ಅದರೊಂದಿಗೆ ಸಂಬಂಧ ಇಲ್ಲ. ಅವರು ಇಲ್ಲಿಗೆ ಬರೋದು ಅಪರೂಪ"

ಷರಟಿನ ತೋಳಿನಲ್ಲಿ ಇಣಿಕಿದ ದಾರದ ತುದಿ ಹಿಡಿದು ತಿರುಚಿದ. ಆಳು ಬಾಯಿ ಅರ್ಧ ತೆರೆದು ನಿಂತಿದ್ದ.

"ತಾಳು, ಅವನೊಂದಿಗೆ ಮಾತಾಡ್ತೀನಿ"

ಆಳು ಪಕ್ಕಕ್ಕೆ ಸರಿದ. ಅವನ ಒಡೆಯ ಬಾಗಿಲು ದಾಟಿದವನು ಬಾಗಿಲು ಮುಚ್ಚಿ ರಂಧ್ರಕ್ಕೆ ಬೀಗದ ಕೈ ಹೂಡಿ ಬಿಗಿಸಿ ಚಿಕ್ಕ ಹಜ್ಜಿರದ ಕೊನೆಯಲ್ಲಿದ್ದ ಫೋನ್ ಕಡೆಗೆ ಹೋದ.

ಬಿಲದ ಕೋಣೆಯಿಂದ ಹೊರ ಬಂದೊಡನೆ ಅಷ್ಟು ಅಲ್ಪ ಕಾಲಕ್ಕೂ ತನ್ನ ಮುಂದೆಯೇ ಬೀಗ ಬಿಗಿಸಿದ ಯಜಮಾನನ ವಿಪರೀತದ ಎಚ್ಚರಿಕೆಯತ್ತ ತಿರಸ್ಕಾರದಲ್ಲಿ ಉಸಿರು ಹಾಕಿ, ಉರಿ ಮೊಗದಲ್ಲಿ ಹುಬ್ಬು ಗಂಟು ಹಾಕಿದ ಆಳು, ತನ್ನ ಕೆಲಸಕ್ಕೆ ತೆರಳುವ ಮೊದಲು ಪಿಸುಗುಟ್ಟಿದ.

"ಯಾವಾಗಲೂ ಬಣ್ಣದ ಕಾಗದಗಳ ಚೂರುಗಳು! ದಿನವೆಲ್ಲಾ ಸಾಯ್ತಾನೆ.....ವಣ್ಣ ಪುಳು!"

ವಣ್ಣ ಪುಳು! ಬಣ್ಣದ ಹುಳು.....ಬಣ್ಣದ ವಿದೇಶಿ ನೋಟುಗಳಲ್ಲಿ ಸದಾ ಮುಳುಗಿರುವ ಹುಚ್ಚ.....ಬಣ್ಣದ ಹುಚ್ಚ!

ಫೋನ್ ಹಿಡಿದ ವಾನಂಬಾಡಿ ಹಜಾರದ ಬಾಗಿಲ ಮೂಲಕ ನೋಡುವವರಿಗೆ ಸಪೂರ ಆಕಾರದಲ್ಲಿ ದೃಷ್ಟಿಯೆಲ್ಲಾ ಆವರಿಸುವಂತೆ ನಿಂತಿದ್ದ.

"ವಾನಂಬಾಡಿ ಮಾತಾಡ್ತಿರೋದು....."

ಇನ್ಸ್‌ಪೆಕ್ಟರ್ ಫಾಸ್ಟರ್ ತನ್ನನ್ನು ಪರಿಚಯಿಸಿಕೊಂಡು ಉಪಕಾರ ಪಡೆಯುವ ಹಿಂಜರಿತದಲ್ಲಿ ಹೇಳಿದ.

"ನಿಮ್ಮಿಂದ ತಜ್ಞ ಅಭಿಪ್ರಾಯ, ಸಲಹೆ ಪಡೆಯೊ ಸಲುವಾಗಿ ತೊಂದರೆ ಕೊಡ್ತಿದೀನಿ."

"ತಜ್ಞ ಅಭಿಪ್ರಾಯ ನನ್ನಿಂದ! ನಾನು ಯಾವುದರಲ್ಲಿ ತಜ್ಞ?"

"ನೀವೂ ಒಂದು ಕ್ಷೇತ್ರದಲ್ಲಿ ತಜ್ಞರು ಅಂತ ಕೇಳಿದೀನಿ. ಅದು ನಿಮಗೂ ಗೊತ್ತು. ನಿಮ್ಮ ಅನುಭವದ ಉಪಯೋಗ ಪಡೀಬೇಕಾಗಿದೆ ನಾನು"

ವಾನಂಬಾಡಿ ತಾನು ಬಿಟ್ಟು ಬಂದ ಕೋಣೆಯ ಬಾಗಿಲ ಮೇಲೆ ದೃಷ್ಟಿ ಹರಿಸಿದ. ಮತ್ತೆ ಬಿಲ ಸೇರಿ ತನ್ನ ಕೆಲಸ ಮುಂದುವರಿಸುವ ಆತುರ.

"ಎಸ್ಟೇಟ್ ವಿಜಂಟನಿಂದ ಅಭಿಪ್ರಾಯ? ಅದೇ ನನ್ನ ಕಸುಬು" ಮಾತು ಮೊಟಕುಗೊಳಿಸುವ ಇಚ್ಛೆ ಅವನದು" ಇನ್ಸ್‌ಪೆಕ್ಟರ್ ನಗೆ ಹಾಕಿದ.

"ನಿಮ್ಮ ಆ ಏಜೆನ್ಸಿಯಿಂದ ನನಗೆ ಉಪಯೋಗವಿಲ್ಲ. ನಿಮ್ಮ ಹವ್ಯಾಸ ಇದೆಯಲ್ಲಾ.....ಕರೆನ್ಸಿಗಳ ವಿಷಯದಲ್ಲಿ ನಾನು ಕೇಳ್ತಿರೋದು"

ಕಣ್ಣುಗಳು ಕಿರಿದಾದವು. ಕರೆನ್ಸಿಗಳ ವಹಿವಾಟು ಹವ್ಯಾಸವೇ? ಅದು ತನ್ನ ದೊಡ್ಡ ಕಸುಬೇ ಸರಿ. ಅದನ್ನು ಇನ್ಸ್‌ಪೆಕ್ಟರ್ ಹವ್ಯಾಸವೆಂದು ಹೇಳುತ್ತಿದ್ದಾನೆ. ಅಪಾಯಕಾರಿ ಹವ್ಯಾಸ!

"ನಾನು ಆ ಹವ್ಯಾಸ ಬಿಟ್ಟುಬಿಡ್ತಾ ಇದೀನಿ. ಹಾಳು ಬಣ್ಣದ ಚೂರು ಕಾಗದಗಳ ಹವ್ಯಾಸ ಕೆಟ್ಟದ್ದು, ಇನ್ಸ್‌ಪೆಕ್ಟರ್..... ತುಂಬಾ ಕೆಟ್ಟದ್ದು"

"ನೀವು ಅದನ್ನ ಪೂರ್ತಿಯಾಗಿ ಬಿಟ್ಟುಬಿಡೋ ಮೊದಲು ನಿಮ್ಮ ಸ್ನೇಹಿತನಾಗಿ ಸಹಾಯ ಕೇಳ್ತೀದೀನಿ. ಇದು ನಿಮಗೆ ಇಲಾಖೆಯ ಅಧಿಕೃತ ಸೂಚನೆ ಅಲ್ಲ. ಆತ್ಮೀಯತೆಯಲ್ಲಿ ಪಡೀತಾ ಇರೋ ಸಹಕಾರ"

"ಓ"

ಅದ್ಭುತ ರೀತಿಯಲ್ಲಿ ಮುಖ ಬದಲಾವಣೆ ಕಂಡಿತು. ಕಪ್ಪು ಕೆನ್ನೆಗಳ, ಹಣೆಯ ಸುಕ್ಕುಗಳು ಅರ್ಧದಷ್ಟು ಮಾಯವಾದವು. ಕಿರಿದಾಗಿದ್ದ ಕಣ್ಣುಗಳು ಅರಳಿ ಅವುಗಳಲ್ಲಿ ಹೊಳಪು ಕಂಡಿತು. ಧ್ವನಿಯಲ್ಲಿ ಜೀವ ಕೂಡಿತು. ಅನೇಕ ತಿಂಗಳ ನಂತರ ಆಸಕ್ತಿ ತಂದುಕೊಂಡ.

"ನನ್ನ ನೆನಪು ಹೇಗೆ ಬಂತು?"

ಅವನಲ್ಲಿ ಇನ್ನೂ ಸಂಶಯದ ವಾಸನೆ. ತಜ್ಞನೆನಿಸಿಕೊಂಡ ಹಿಗ್ಗು.

"ನಾನು ಅಂದ್ರೆ ನಮ್ಮ ಇಲಾಖೆ ಒಂದು ಕೇಸ್‌ನಲ್ಲಿ ತೊಡಗಿದೆ. ತಲೆ ಕೆಡಿಸಿಕೊಂಡಿದೀವಿ. ಕೇಸ್ ಒಂದು ದೃಷ್ಟಿಕೋನದಿಂದ ನಮ್ಮನ್ನ ಕಾಡ್ತಾ ಇದೆ. ನಮ್ಮಲ್ಲಿ ಯಾರಿಗೂ ಅಭಿಪ್ರಾಯ ಕೊಡುವಷ್ಟು ಸಾಮರ್ಥ್ಯ, ಅರ್ಹತೆ ಇಲ್ಲ. ಆ ವಿಷಯದಲ್ಲಿ ನಾವು ತಜ್ಞರಲ್ಲ..... ಆ ವಿಷಯದಲ್ಲಿ ನಾವು ನಾಸಿಕ್‌ವರೆಗೆ ಹೋಗಬೇಕಾಗತ್ತೆ. ಅದಕ್ಕೆ ಎರಡು ವಾರಗಳಷ್ಟು ಕಾಲ ಬೇಕಾಗತ್ತೆ. ಬಹಳ ವಿಳಂಬ ಆಗತ್ತೆ. ನಾವು ಅಲ್ಲಿಗೆ ಫೋನ್ ಮಾಡಿ ವಸ್ತುವಿನ ಫೋಟೊಸ್ಟಾಟ್ ಕಳುಹಿಸೋಣವೇ ಅಂತ ವಿಚಾರಿಸಿದ್ದಾಯ್ತು. ಅಲ್ಲಿಂದ ಬಂದ ಉತ್ತರ ಏನು ಗೊತ್ತೆ? ನಮ್ಮ ಸಿಟಿಯಲ್ಲೇ ಸಿಗೋ ಒಬ್ಬ

ನೋಟುಗಳ ತಜ್ಞ ಆ ಕೆಲಸ ಮಾಡಬಹುದು ಅಂತ"

"ನಾನು ನೋಟುಗಳ ತಜ್ಞ ಅಲ್ಲ. ಆ ತಜ್ಞರು ಇರೋದು ರಿಸರ್ವ್ ಬ್ಯಾಂಕಿನಲ್ಲಿ"

"ರಿಸರ್ವ್ ಬ್ಯಾಂಕ್‌ಗೆ ಹೋಗಿ ಅಧಿಕೃತವಾಗಿ ವಿಷಯ ಹೊರಕ್ಕೆ ಹಾಕಿ ಕೆಲಸ ಮಾಡಿಸಿಕೊಳ್ಳೊ ಪ್ರಕರಣ ಅಲ್ಲ ಇದು. ಅದಕ್ಕೆ ವೇಳೆ ಇಲ್ಲ. ಮೇಲಾಗಿ ಸ್ವಲ್ಪ ರಹಸ್ಯದ ವಿಷಯ. ರಿಸರ್ವ್ ಬ್ಯಾಂಕಿನ ತಜ್ಞ ಅಂತ ಕರೆಸಿಕೊಂಡಿರೋ ವ್ಯಕ್ತಿಗಿಂತ ನೂರು ಪಟ್ಟು ಹೆಚ್ಚಾಗಿ ತಿಳಿದಿರೋರು ನೀವು. ನಿಮ್ಮ ಒಂದು ಸಣ್ಣ ಅಭಿಪ್ರಾಯ ಸಾಕು ನಮಗೆ"

ನೀಳವಾಗಿ ಉಸಿರೆಳೆದುಕೊಂಡ ವಿದೇಶಿ ನೋಟುಗಳ ವ್ಯಾಪಾರಿ. ತಾನು ಅಷ್ಟು ದೊಡ್ಡ ತಜ್ಞ ಎಂದು ಕರೆಸಿಕೊಂಡ ಘಳಿಗೆಯಲ್ಲೇ ಹಿಗ್ಗಿದ್ದ.

"ಆಗಬೋದು, ಇನ್ಸ್‌ಪೆಕ್ಟರ್, ನನ್ನ ವಿಷಯದಲ್ಲಿ ಅಂತಾ ದೊಡ್ಡ ಅಭಿಪ್ರಾಯ ನಿಮಗೆ ಇರೋದಾದ್ರೆ ಖಂಡಿತ ಆಗಬೋದು. ನಾನು ತಜ್ಞ ಅಲ್ಲವಾದ್ರೂ ನನಗಿಂತ ಅಧಿಕವಾಗಿ ನೋಟುಗಳ ವಿಷಯದಲ್ಲಿ ಈ ಸಿಟಿಯಲ್ಲಿ ಬೇರೆ ಯಾರೂ ಹೇಳಲಾರರು ಅಂತ ಮಾತ್ರ ಖಚಿತವಾಗಿ ಹೇಳಬಲ್ಲೆ" ಉಸಿರು ನೀಳವಾಗಿತ್ತು.

"ಅದು ನನಗೆ ಚೆನ್ನಾಗಿ ಗೊತ್ತಿದ್ದರಂದಲೇ ನಿಮ್ಮ ಸಹಾಯ ನೇರವಾಗಿ ಕೋರ್ತಿರೋದು"

"ನನ್ನಿಂದ ಅಭಿಪ್ರಾಯ, ಸಲಹೆ ಏನು ಬೇಕು?"

"ಅದು ಫೋನ್‌ನಲ್ಲಿ ಹೇಳೋದಲ್ಲ. ನೀವೇ ಪ್ರತ್ಯಕ್ಷವಾಗಿ ನೋಡಿ, ಪರೀಕ್ಷೆ ಮಾಡಿ ಅಭಿಪ್ರಾಯ ಸೂಚಿಸಬೇಕಾಗತ್ತೆ"

"ಹೌದು, ನೋಟುಗಳ ವಿಷಯದಲ್ಲಿ ಹಾಗೇ ಮಾಡಬೇಕಾಗತ್ತೆ. ಅದರಲ್ಲೂ ಅದು ಖೋಟಾ ನೋಟು ಆಗಿದ್ರೆ ನಾಲ್ಕು ಕಣ್ಣುಗಳಿಂದ ನೋಡಿದ್ರೂ ಸಾಲದು"

"ಖೋಟಾ ನೋಟಿಗಿಂತ ಕ್ಲಿಷ್ಟವಾದ್ದು ಆಗಿರಬೋದು.....ಮಿಸ್ಟರ್

ವಾನಂಬಾಡಿ, ಇದೊಂದು ಕೊಲೆಯ ಪ್ರಕರಣ, ನಾವು ಮುಖ್ಯವಾಗಿ ತಿಳಿಬೇಕಾಗಿರೋದು....."

ಫೋನ್ ಒಡನೆ ಅಡಿಗಿಳಿಯಿತು. ಮೈ ಅದುರಿತು.

"ಓ ಇನ್ಸ್‌ಪೆಕ್ಟರ್.....ಇಂತಾದ್ದು ನನಗೆ ಸಂಬಂಧಿಸಿದ್ದಲ್ಲ"

"ಹೌದು, ಇದು ಸಂಬಂಧಿಸಿರೋದು ಪೊಲೀಸ್‌ಗೆ.....ನರಹತ್ಯೆ ವಿಭಾಗಕ್ಕೆ. ಆದರೆ ಅದರಲ್ಲಿ ನಿಮ್ಮ ಪಾತ್ರ ನೋಟುಗಳಿಗೆ ಸಂಬಂಧಗಳಿಗೆ ಸಂಬಂಧ ಪಡತ್ತೆ ಅಷ್ಟೇ"

ಮತ್ತೊಂದು ನೀಳವಾದ ಉಸಿರು ಹೊರಬಂತು.

"ಸರಿ, ನಾನು ಎಲ್ಲಿಗೆ ಬರಬೇಕೂಂತ ಹೇಳ್ತೀರಿ, ಹೆಡ್‌ಕ್ವಾರ್ಟರ್ಸ್‌ಗೆ?"

"ಅಷ್ಟು ದೂರ ನೀವು ಬರೋದು ಬೇಡ. ನಿಮಗೆ ತೊಂದರೆ ಆಗೋದಿಲ್ಲವಾದರೆ ಆಳಗಪ್ಪನ್ ಬೀದಿ, ಮುನ್ನೂರ ಇಪ್ಪತ್ತೆರಡನೆ ನಂಬರ್ ಮನೆಗೆ ಬರೋದಿಕ್ಕೆ ಸಾಧ್ಯವೆ? ನಮ್ಮ ಪೊಲೀಸ್ ಕಾರು ಕಳಿಸಿಕೊಡ್ತೀನಿ"

"ಬೇಡ, ಇನ್ಸ್‌ಪೆಕ್ಟರ್, ಅದರ ಅಗತ್ಯ ಇಲ್ಲ. ನನ್ನ ಕಾರಿನಲ್ಲೇ ಬರ್ತೀನಿ"

"ಥ್ಯಾಂಕ್ಸ್, ಮಿಸ್ಟರ್ ವಾನಂಬಾಡಿ, ನಿಮ್ಮ ಸಹಕಾರಕ್ಕೆ ನಾನು ಕೃತಜ್ಞತೆ ಹೇಗೆ ಹೇಳಬೇಕೋ ಗೊತ್ತಿಲ್ಲ "

ಧ್ವನಿಯಲ್ಲಿ ಕೃತಜ್ಞತೆ ಉಕ್ಕಿ ಹರಿದಿತ್ತು. ಸಹಕಾರ ಪಡೆಯುವ ಮೊದಲೇ ಇನ್ಸ್‌ಪೆಕ್ಟರ್ ಕೃತಜ್ಞತೆ ಅರ್ಧ ಸೂಚಿಸಿದ್ದ.

"ಹಾಗೇನಿಲ್ಲ. ಈ ಪ್ರಕರಣದಲ್ಲಿ ನಾನು ಸಲಹೆ ಕೊಡೋ ಭಾಗ ಏನಿದೆ ಅಂತ ಆಸಕ್ತಿ, ಕುತೂಹಲ ಉಂಟಾಗಿದೆ. ಈಗ ನೇರವಾಗಿ ಅಲ್ಲಿಗೇ ಬರ್ತಿದೀನಿ"

ಇನ್ಸ್‌ಪೆಕ್ಟರ್ ಮತ್ತೊಮ್ಮೆ ವಿಳಾಸ ತಿಳಿಸಿದ.

"ಬರ್ತಿದೀನಿ"

ವಾನಂಬಾಡಿ ಫೋನ್ ಅಡಿಗಿಟ್ಟು ಬಾಗಿಲ ಬೀಗ ತೆಗೆದು ಬಿಲದ

ಕೋಣೆಗೆ ಹಿಂತಿರುಗಿದ. ಮೇಜಿನ ಮೇಲಿದ್ದ ಕಸುಬಿನ ವಸ್ತುಗಳನ್ನೆಲ್ಲಾ ಉಕ್ಕಿನ ಬೀರುವಿಗೆ ಸೇರಿಸಿ ಬೀಗ ಹಾಕಲು ಐದು ನಿಮಿಷಗಳು ಹಿಡಿದವು.

ಕೋಣೆ ಬಾಗಿಲಿಗೆ ಬೀಗ ಹಾಕಿ ಬೀಗದ ಕೈ ಜೇಬಿಗೆ ಸೇರಿಸಿ ಹೊರ ಬಂದಾಗ ಅವನು ಧರಿಸಿದ್ದುದು ಅಗಸನ ಅಂಗಡಿ ಬಹು ತಿಂಗಳಿಂದ ಕಾಣದೆ ಗುಂಡಾಗಿದ್ದ ಕಪ್ಪು ಪ್ಯಾಂಟು. ಅಂತಹದೇ ಸ್ಥಿತಿಯಲ್ಲಿದ್ದ ಕಂದು ಪಟ್ಟೆಗಳ ಬಿಳುಪು ಷರಟು. ಅದರ ಮೇಲೊಂದು ಹಳೆಯ ನೀಲಿ ಸ್ವೆಟರ್. ತಲೆಗೆ ಗುಂಡನೆಯ ಕಪ್ಪು ಟೋಪಿ.

ವಾನಂಬಾಡಿ ತಲೆಯ ಟೋಪಿ ಸವರಿಕೊಂಡ.

ಅಳಗಪ್ಪನ್ ಬೀದಿಯ ಮುನ್ನೂರ ಇಪ್ಪತ್ತೆರಡನೆ ನಂಬರ್ ಮನೆ. ಅಲ್ಲಿ ಯಾರಿದ್ದಾರೆ? ಈವರೆಗೆ ಆ ಬೀದಿ ತಾನು ನೋಡಿಲ್ಲ.

"ಭದ್ರ.....ನನಗೆ ಕಾಯ್ಪೇಡ"

ಕನಿಷ್ಠ ಮೂವತ್ತು ವರ್ಷಗಳಷ್ಟು ಹಳೆಯದಾದ ಮಾರಿಸ್ ಮೈನರ್ ಕಾರು ಏರಿ ಸೇವಕನಿಗೆ ಹೇಳಿದ. ವಿನಯದಿಂದ ಹೊರ ಬಾಗಿಲು ಮುಚ್ಚಿದ ಅಮಾಸೆ ತಿರಸ್ಕಾರದಲ್ಲಿ ತುಟಿ ಪಿಟಿಗಿಸಿದ.

"ಇವನು! ಇವನ ಬಣ್ಣದ ಕಾಗದದ ಚೂರುಗಳು! ವಜ್ರಗಳ ಹಾಗೆ ಭದ್ರ ಮಾಡ್ತಾನೆ.....ವಣ್ಣ ಪುಳು!"

ವಾನಂಬಾಡಿ ಹುಳುವಿನಂತೆಯೇ ವಾಸಿಸುತ್ತಿದ್ದ. ಇದ್ದಲ್ಲಿಯೇ ನಿಶ್ಶಬ್ದವಾಗಿ ಎಡಬಲ ಹೊರಳಿ ನಡೆಸುವ ಒಂದು ಸತ್ವಹೀನ ಬದುಕು ಅವನದು. ಅವನಿದ್ದ ಮನೆ ಸುಲಭವಾಗಿ ಗುರುತಿಸುವಂತಹುದಲ್ಲ. ಮದ್ರಾಸ್ ಸೆಂಟ್ರಲ್ ರೈಲ್ವೆ ನಿಲ್ದಾಣದ ವಾಲ್‌ಟ್ಯಾಕ್ಸ್ ರಸ್ತೆ ದಾಟಿ ತುಸು ಉತ್ತರಕ್ಕೆ ನಡೆದರೆ ಮಿಂಟ್ ಸ್ಟ್ರೀಟ್, ರತನ್ ಬಜಾರ್, ಚೈನಾ ಬಜಾರ್‌ಗಳ ಜನಜಂಗುಳಿಯ ಗಲಿಬಿಲಿ ಸಂಗಮಗಳು. ಅವುಗಳಿಂದ ಮುಂದೆ ಸಂದಿನಲ್ಲಿ ಕಾಶಿಚೆಟ್ಟಿ ಬೀದಿ. ವಿದೇಶಿ ಸರಕುಗಳ ಬಗ್ಗೆ ವ್ಯಾಮೋಹ ಹೊಂದಿದವರಿಗೆ ಅದೊಂದು ಚಿಕ್ಕ ಕಾಶಿ. ಎರಡು ಕಡೆ ಉದ್ದ ಅಗಲಗಳಲ್ಲಿ ಚಾಚಿದ ಆ

ಬೀದಿಯ ಹಿಂದೆ ವಾನಂಬಾಡಿ ವಾಸಿಸುವ ಹಳೆಯ ಮನೆ. ಅದು ಸಾಕಷ್ಟು ಮರೆಯಲ್ಲಿದ್ದರೂ ವಿದೇಶಿ ನೋಟುಗಳನ್ನು ಮಾರುವವರಿಗೆ, ಕೊಳ್ಳುವವರಿಗೆ ಅದು ಚೆನ್ನಾಗಿ ಪರಿಚಿತವಾದ ತಾಣ. ಎಲ್ಲಾ ಮುಖ್ಯ ದೇಶಗಳ ನೋಟುಗಳಲ್ಲಿ ಎಚ್ಚರಿಕೆಯಿಂದ ವಹಿವಾಟು ನಡೆಸುತ್ತಿದ್ದ ವಾನಂಬಾಡಿ.

* * *

ಮನೆಯ ಮುಂದೆ ತೂಗುತ್ತಿದ್ದ 'ಎಸ್ಟೇಟ್ ಏಜೆನ್ಸಿ' ಫಲಕ ಯಾವತ್ತೂ ತನ್ನ ಹೆಸರಿನ ಸಾರ್ಥಕತೆ ಪಡೆದಿರಲಿಲ್ಲ. ಅವನು ಆ ಕಸುಬು ನಡೆಸುತ್ತಿರಲಿಲ್ಲ. ಅವನನ್ನು ಶ್ರೀಮಂತಗೊಳಿಸಿದ್ದುದು ಹವ್ಯಾಸವೆನಿಸಿದ ವಿದೇಶಿ ನೋಟುಗಳ ವ್ಯವಹಾರ.

ಹನ್ನೆರಡು ನಿಮಿಷಗಳಲ್ಲಿ ಅಳಗಪ್ಪನ್ ಬೀದಿಯಲ್ಲಿದ್ದ ವಾನಂಬಾಡಿ, ಬೀದಿ ವಿಶಾಲವಾಗಿದ್ದರೂ ಕೊಳಕಾಗಿದ್ದ ಭಾಗ. ಜನ ಸಂಚಾರವೇ ಇಲ್ಲ. ಕೊಲೆ ಮಾಡಲು ಹೇಳಿ ಮಾಡಿಸಿದ ಸ್ಥಳ ಎಂದುಕೊಂಡ. ಇಲ್ಲಿಯೇ ಕೊಲೆ ಆದದ್ದು!

ಬಾಗಿಲುಗಳ ಮೇಲಿನ ನಂಬರುಗಳನ್ನು ನೋಡುತ್ತಾ ನಿಧಾನವಾಗಿ ಚಲಿಸಿದ.

ಮುನ್ನೂರ ಇಪ್ಪತ್ತೆರಡನೇ ನಂಬರ್ ಮನೆಯ ಮುಂದೆ ಬಂದಾಗ ಅಲ್ಲೇನೂ ವಿಶೇಷವಿರಲಿಲ್ಲ. ಕುತೂಹಲದಿಂದ ಕೊಡಬಹುದಾದ ಜನ ಗುಂಪು, ವಾಹನಗಳ ಸರಿದಾಟ ಯಾವುದೂ ಇಲ್ಲ. ಹಾಳು ಸುರಿಯುವ ಬೀದಿ.

ಕಾರು ಪಕ್ಕಕ್ಕೆ ನಿಲ್ಲಿಸಿ ಬಂದವನು ಮೆದುವಾಗಿ ಕೆಮ್ಮಿ ಬಾಗಿಲ ಕರೆಗಂಟೆಯ ಗುಂಡಿ ಒತ್ತಿದ.

ಬಾಗಿಲು ತೆರೆದವಳು ತುಂಬು ಸ್ವೆಟರ್ ಧರಿಸಿದ, ಜಗಳ ಗಂಟಿ ಲಕ್ಷಣದ ಮುಖದ ಹೆಂಗಸು, ಅವನನ್ನೇ ಏರಿಸಿದ ಕಣ್ಣುಗಳಲ್ಲಿ ಇರಿಯುತ್ತಾ ನಿಂತಳು.

"ವಾನಂಬಾಡಿ ಬಂದಿದಾನೆ ಅಂತ ಇನ್ಸ್‌ಪೆಕ್ಟರ್ ಫಾಸ್ಟರ್‌ಗೆ ಹೇಳು"ಎಂದ. ಬಾಗಿಲ ಮೇಲಿನ ಅವಳ ಹಿಡಿತ ಬಿಗಿಯಾಯಿತು. ಉರಿ ಮುಖ ಮುಂದೆ ಬಂತು.

"ಯಾರು ಬಂದಿದಾರೇಂತ ಯಾರಿಗೆ ಹೇಳ್ಬೇಕು?"

ದಪ್ಪ ಗಂಟಲು ಅದು. ವಾನಂಬಾಡಿ ಕೆಳ ದವಡೆ ಜೋಲಿಸಿದ.

"ನಾನು ವಾನಂಬಾಡಿ.....ಇನ್ಸ್‌ಪೆಕ್ಟರ್ ಫಾಸ್ಟರ್‌ಗೆ ಹೇಳು"

ವಾನಂಬಾಡಿ! ಫಾಸ್ಟರ್! ಅವರೆಡೂ ಅವಳಿಗೆ ವಿಚಿತ್ರವಾದ, ಅಪರಿಚಿತ ಹೆಸರುಗಳು.

"ಫಾಸ್ಟರ್ ಹೆಸರಿನೋನು ಯಾವನೂ ಇಲ್ಲಿ ವಾಸ ಮಾಡೋದಿಲ್ಲ"

ಸಿಡುಕು ಮೋರೆ ಉತ್ತರಿಸಿತು.

ವಾನಂಬಾಡಿಯ ಕೆಳ ದವಡೆ ಅಚ್ಚರಿಯಲ್ಲಿ ಕುಸಿಯಿತು. ಎರಡು ಹೆಜ್ಜೆ ಹಿಂದಕ್ಕೆ ಸರಿದು ಬಾಗಿಲ ಪಕ್ಕದಲ್ಲಿದ್ದ ನಂಬರು ನೋಡಿ ಮತ್ತೆ ಮುಂದಕ್ಕೆ ಅಡಿಯಿಟ್ಟ.

"ಮುನ್ನೂರ ಇಪ್ಪತ್ತೆರಡು ನಂಬರು ಸರಿಯಾಗಿದೆ.....ನನಗೆ ಇನ್ಸ್‌ಪೆಕ್ಟರ್ ಸರಿಯಾಗಿ ಹೇಳಿದಾನೆ. ಎರಡು ಸಾರಿ ಹೇಳ್ದ.....ಅಳಗಪ್ಪನ್ ಬೀದಿ, ಮನೆ ನಂಬರ್ ಮುನ್ನೂರ ಇಪ್ಪತ್ತೆರಡು"

"ಇದು ಅದೇ ನಂಬರ್ ಮನೆ, ಅದೇ ಹೆಸರಿನ ಬೀದಿ. ಆದರೆ ಫಾಸ್ಟರ್ ಅನ್ನೋನು ಇಲ್ಲಿಲ್ಲ. ಅಂತಾ ಹೆಸರಿನೋನು ಈ ಬೀದಿಯಲ್ಲಿ ಆ ಕಡೆ, ಈ ಕಡೆ ಯಾವನೂ ಇಲ್ಲ....."

ಅವನು ಬಾಯಿ ತೆರೆಯುವ ಮೊದಲೇ ಅವಳದೇ ಮಾತು ಸಾಗಿತು.

"ನಾನು ಹೊಸಬಳಲ್ಲ. ಇಲ್ಲಿ ಐದು ವರ್ಷದಿಂದ ವಾಸ ಮಾಡ್ತಾ ಇದೀನಿ. ಯಾರೊ ನಿಮಗೆ ಸುಳ್ಳು ಹೇಳಿದಾರೆ"

ಪೆಚ್ಚಾದ ವಾನಂಬಾಡಿ ಫಾಸ್ಟರ್ ಸುಳ್ಳು ಹೇಳುವ ಅಗತ್ಯವೇನು?

ಫಾಸ್ಟರ್ ಹೆಸರಿನಲ್ಲಿ ಯಾವನಾದರೂ ಫೋನ್ ಮಾಡಿದನೆ? ಇನ್ಸ್‌ಪೆಕ್ಟರ್ ಫಾಸ್ಟರ್‌ನನ್ನು ತಾನು ಈವರೆಗೆ ನೋಡಿಲ್ಲ.

ಆ ಹೆಂಗಸು ಕತ್ತು ಹಿಂತಿರುಗಿಸುವ ಹೊತ್ತಿಗೆ ಅವಳ ಹಿಂದೆ ಯಾವನೋ ಗಂಡಸು ಕಾಣಿಸಿಕೊಂಡ. ವಾನಂಬಾಡಿ ಒಳಗೆ ಹೆಜ್ಜೆ ಇಡುವ ಪ್ರಯತ್ನ ಮಾಡಲಿಲ್ಲ.

"ಪಳನಿ, ಒಂದು ನಿಮಿಷ ಬಾ ಇಲ್ಲಿ. ಇವರು ಏನೋ ಕೇಳ್ತಿದಾರೆ"

ವಾನಂಬಾಡಿಗೆ ಅನಿರೀಕ್ಷಿತವಾಗಿತ್ತು ಅವಳ ಅಷ್ಟು ಮಾತ್ರದ ಸೌಜನ್ಯದ ಮಾತು.

ಬಹುಶಃ ಅವನು ಹೆಂಗಸಿನ ಗಂಡನಿರಬೇಕು. ಅವಳಿಗಿಂತಲೂ ನಮ್ರವಾಗಿದ್ದ. ಆದರೆ ಅವಳಷ್ಟೇ ಅಪ್ರಯೋಜಕನಾಗಿದ್ದ. ವಾನಂಬಾಡಿ ಮತ್ತೆ ಪ್ರಶ್ನಿಸಿದಾಗ ಅವನದೂ ಅಂತಹದೇ ಉತ್ತರ.

"ಇಲ್ಲ, ಈ ಬೀದಿಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರಿಗೆ ಯಾರೂ ಬರಹೇಳಿಲ್ಲ. ಇಲ್ಲೇನೂ ಗಲಾಟೆ, ಹೊಡೆದಾಟ ನಡೆದಿಲ್ಲ"

ವಾನಂಬಾಡಿ ತಲೆ ಕೊಡವಿ ಗೊಣಗಿದ.

"ಚೆನ್ನಾಯ್ತು. ಯಾವನೋ ಅಯೋಗ್ಯ ಸುಮ್ಮನೆ ಕೂತಿದ್ದ ನನ್ನ ಮನೆಯಿಂದ ಎಳೆದು ಇಲ್ಲಿಗೆ ಹಾಕ್ದ. ತೊಂದರೆ ಕೊಡೋದಿಕ್ಕೆ, ತಮಾಷೆ ಮಾಡೋದಿಕ್ಕೆ ಹೀಗೆಲ್ಲಾ ಮಾಡಿದ್ರೆ....."

ಮಾತು ನಿಲ್ಲಿಸಿ ಮುಖ ಎತ್ತಿ ಕೇಳಿದ.

"ಒಂದು ನಿಮಿಷ ನಿಮ್ಮ ಫೋನ್ ಉಪಯೋಗಿಸ್ತೀನಿ. ನಾನು ಫೋನ್ ಚಾರ್ಜ್ ಕೊಡ್ತೀನಿ. ಹೆಡ್‌ಕ್ವಾರ್ಟರ್ಸ್‌ಗೆ ರಿಂಗ್ ಮಾಡಿ ಫಾಸ್ಟರ್‌ನ ಕೇಳ್ತೀನಿ"

ಆ ಗಂಡಸು ತಬ್ಬಿಬ್ಬಾದಂತೆ ಕಂಡ. ಕೇಳಿಕೆ ನಿರಾಕರಿಸಿದ.

"ಮುಂದಿನ ಬೀದಿಯಲ್ಲಿ ಔಷಧಿ ಅಂಗಡಿ ಇದೆ. ಅಲ್ಲಿಂದ ಫೋನ್ ಮಾಡಿ"

ಬಾಗಿಲು ಮುಚ್ಚಿತು. ಅತೀವ ಬೇಸರಗೊಂಡಿದ್ದ ವಾನಂಬಾಡಿ. ತಾನು ಚುಟ್ಟಾಗೆ ಬಳಸುವ ಆರು ತಿಂಗಳ ಹಣದಲ್ಲಿ ಆ ಇಡೀ ಮನೆಯನ್ನು ಕೊಳ್ಳುವ ಸಾಮರ್ಥ್ಯ ಹೊಂದಿದ್ದ ಬಣ್ಣದ ನೋಟುಗಳ ಶ್ರೀಮಂತ ಹುಳು ಮುಸುಗುಟ್ಟುತ್ತಾ ಹಿಂದಕ್ಕೆ ಸರಿದು ಕಾರು ಏರಿತು .

ಯಂತ್ರ ಶಬ್ದ ಮಾಡುವ ಹೊತ್ತಿಗೆ ಬಾಗಿಲು ಮತ್ತೆ ತೆರೆಯಿತು. ಗಂಡಸು ಹೊರ ಬಂದು ಎರಡು ಹೆಜ್ಜೆ ಮುಂದಿಟ್ಟ.

"ಓಯ್! ಒಂದು ನಿಮಿಷ ತಾಳು. ನನಗೂ ಈಗ ಹೊಳೀತು. ನಿಮಗೆ ಅಳಗಪ್ಪನ್ ಬೀದಿ ಅಂತ ಹೇಳಿದನೆ ಆ ಮನುಷ್ಯ ? ..... ಅಳಗಪ್ಪನ್ ಬೀದಿ?"

ವಾನಂಬಾಡಿ ಯೋಚಿಸುವವನಂತೆ ಮುಖ ಕಿವಿಚಿದ. ಫಾಸ್ಟರ್ ಹಾಗೆ ಹೇಳಿದ್ದನೆ? ಹೌದು, ಹಾಗೆಯೇ ಹೇಳಿದ್ದ.

"ಬಹುಶಃ ಹಾಗೇ ಹೇಳ್ದ"

"ನನಗೂ ಈಗ ನೆನಪಿಗೆ ಬಂತು. ಪೊಟ್ಟಿ ಅಳಗಪ್ಪನ್ ಬೀದಿ ಅಂತಲೂ ಒಂದಿದೆ. ಪಾರ್ಕ್‌ಟೌನ್ ಪ್ರದೇಶಕ್ಕೆ ಬರತ್ತೆ. ಇಲ್ಲಿಗೆ ಎರಡು ಮೈಲಿ ಆಗಬೋದು. ಎಷ್ಟೋ ಸಾರಿ ನಮ್ಮ ಕಾಗದಗಳು ಅಲ್ಲಿಗೆ ಹೋಗತ್ವೆ. ಅಲ್ಲಿಂದ ಇಲ್ಲಿಗೆ ಬರುತ್ವೆ.....ಹಾಗೆ ಹೇಳಿರಬೋದು ನಿಮಗೆ ಆ ಮನುಷ್ಯ"

ಆ ಗಂಡಸು ವಾನಂಬಾಡಿಗೆ ಆ ಬೀದಿ ತಲುಪುವ ಸಂಕ್ಷಿಪ್ತ ವಿವರ ಕೊಟ್ಟ.

ವಾನಂಬಾಡಿ ಅರ್ಧ ಸಾಗಿ ಮತ್ತೊಬ್ಬ ಕಾರಿನವನೊಂದಿಗೆ ವಿಚಾರಿಸಿದ ಮೇಲೆ ಕಾರು ವೇಗವಾಗಿ ಓಡಿಸಿದ. ಮತ್ತೊಮ್ಮೆ ಆ ಬೀದಿ ಮತ್ತು ಮನೆ ಸಿಗುವುದರಲ್ಲಿ ತೊಂದರೆಯಾದರೆ ನೇರವಾಗಿ ಮನೆಗೆ ಹಿಂತಿರುಗುವುದೆಂದು ನಿಶ್ಚಯಿಸಿಕೊಂಡ.

ಇಪ್ಪತ್ತು ನಿಮಿಷಗಳ ಓಟದ ನಂತರ ಪೊಟ್ಟಿ ಅಳಗಪ್ಪನ್ ಬೀದಿಯ

ಮುನ್ನೂರ ಇಪ್ಪತ್ತೆರಡನೆ ನಂಬರ್ ಮನೆಯ ಮುಂದೆ ಕಾರು ನಿಲ್ಲಿಸಿ ಎದೆ ಜೋರಾಗಿ ಸವರಿಕೊಂಡ. ಆ ಬೀದಿ ಅಳಗಪ್ಪನ್ ಬೀದಿಯಂತಿರಲಿಲ್ಲ. ವಿಶಾಲವಾದ ಬೀದಿಯಲ್ಲಿ ಸೊಗಸಾದ ಮನೆಗಳ ಸಾಲು. ಸರಿ ಸುಮಾರು ಎಲ್ಲಾ ಮನೆಗಳ ಮುಂದೆಯೂ ವಿಶಾಲವಾದ ತೆರೆದ ಭಾಗಗಳು, ಕೆಲವು ಬಂಗಲೆಗಳು ಪುಟ್ಟ ಎಸ್ಟೇಟ್‌ಗಳಂತೆ ಇದ್ದವು. ಮುನ್ನೂರ ಇಪ್ಪತ್ತೆರಡನೆ ನಂಬರ್ ಮನೆಯೂ ಸಾಕಷ್ಟು ದೊಡ್ಡದಾಗಿದ್ದ ಮಹಡಿ ಮನೆ, ಮುಂಭಾಗದಲ್ಲಿ ಎರಡು ಕಾರುಗಳು ನಿಂತಿದ್ದವು.

ವರಾಂಡದ ಯಾವುದೊ ಭಾಗದಿಂದ ಆವರೆಗೆ ಗೋಚರಿಸದಿದ್ದ ವ್ಯಕ್ತಿಯೊಬ್ಬ ತಟ್ಟನೆ ಕಾಣಿಸಿಕೊಂಡ. ಪೊಲೀಸ್ ಸಮವಸ್ತ್ರ ಧರಿಸಿದ್ದವ,

ಅವನು ವಾನಂಬಾಡಿಯ ನಡಿಗೆಗೆ ತಡೆ ಕೊಟ್ಟ.

"ಇನ್ಸ್‌ಪೆಕ್ಟರ್ ಫಾಸ್ಟರ್ ಇದ್ದಾರಾ?"

ಬಹು ಹೊತ್ತಿನಿಂದ ಬೇಸರದಲ್ಲಿದ್ದವನ ಪ್ರಶ್ನೆ ಅದು.

"ಯಾರು ನೀವು?" ಪೇದೆ ಕೇಳಿದ.

"ವಾನಂಬಾಡಿ"

"ಹಾಂ, ಒಳಗಡೆ ಇದಾರೆ. ನಿಮಗೆ ಕಾಯ್ತಾ ಇದಾರೆ. ನೇರವಾಗಿ ಒಳಗೆ ಹೋಗಿ"

ಹಜಾರದ ಮಾರ್ಗದಲ್ಲಿ ಬೆಳಕಿತ್ತು. ಆದರೆ ಅದು ಖಾಲಿಯಾದ ಭಾಗ. ಬೆಳ್ಳನೆಯ ಬಣ್ಣದ ಸುತ್ತಿನ ಪಾವಟಿಗೆಯ ಮೇಲು ಭಾಗದಲ್ಲಿ ಎಲ್ಲೋ ಒಂದೆಡೆಯಿಂದ ಕುಸುಕು ಕೇಳಿಸಿತು. ಹೆಣ್ಣಿನ ಮೆದುವಾದ ಅಳು ಸ್ವರ.

ವಾನಂಬಾಡಿ ಜೋಡಿ ಬಾಗಿಲುಗಳಿದ್ದ ಬೆಳಕಿನ ಭಾಗದ ಕಡೆಗೆ ತಿರುಗಿ ಕೋಣೆ ಪ್ರವೇಶಿಸಿದ. ಅಲ್ಲಿದ್ದವರು ಮೂರು ಮಂದಿ. ಒಬ್ಬ ತೆರೆದ ದೊಡ್ಡ ಕಪಾಟಿನ ಮುಂದೆ ನಿಂತು ಕಾಗದಗಳನ್ನು ಓದುವುದರಲ್ಲಿ ತಲ್ಲೀನನಾಗಿದ್ದ. ಎರಡನೆಯವ ಮೇಜಿನ ಮುಂದೆ ಕುಳಿತಿದ್ದ. ಮೇಜಿನ

ಮೇಲೆ ತೆರೆದಿದ್ದ ದಪ್ಪನೆಯ ಆಲ್ಬಮ್‌ಗಳು. ಚರ್ಮದ ಹೊದಿಕೆಗಳ, ಚಿನ್ನದ ರಂಗಿನ ಮೋಹಗಳಿಂದ ಅಂಚುಗಟ್ಟಿದ ಬೆಲೆ ಬಾಳುವ ಆಲ್ಬಮ್‌ಗಳು ಅವು. ಅದರಲ್ಲಿನ ದಪ್ಪನೆಯ ಪುಟಗಳನ್ನು ತಿರುವುತ್ತಿದ್ದವನ ಕಣ್ಣುಗಳಲ್ಲಿ ಏನೂ ಅರ್ಥ ಮಾಡಿಕೊಳ್ಳದವನ ಶೂನ್ಯ ಭಾವ ತುಂಬಿತ್ತು. ಮೂರನೆಯವ ಏನೂ ಮಾಡದೆ, ಕಾಲ ಮೇಲೆ ಕಾಲು ಹಾಕಿ ಕುಳಿತು ಆರಾಮವಾಗಿ ಸಿಗರೇಟು ಸೇದುತ್ತಾ ಮುಂದಿದ್ದ ಇಬ್ಬರು ಹೇಳಲಿರುವುದನ್ನು ಕೇಳಲು ಕಾತರನಾಗಿದ್ದ.

"ಮಿಸ್ಟರ್ ಫಾಸ್ಟರ್?....."

ಇನ್ಸ್‌ಪೆಕ್ಟರ್ ಫಾಸ್ಟರ್ ಯಾರು ಎಂಬುದನ್ನು ತಿಳಿಯದ ವಾನಂಬಾಡಿ ಆಲ್ಬಮ್‌ಗಳಲ್ಲಿ ದೃಷ್ಟಿ ನೆಟ್ಟವನ ಕಡೆಗೆ ಮೆಲ್ಲನೆಯ ಕರೆ ಕೊಟ್ಟ.

ಕುರ್ಚಿಯಲ್ಲಿ ಆರಾಮವಾಗಿ ಸಿಗರೇಟು ಸೇದುತ್ತಿದ್ದ, ಅಧಿಕಾರಿಯ ಲಕ್ಷಣಗಳನ್ನು ತೋರಿದ ಯುವಕ ಸರಕ್ಕನೆ ಮೇಲೆದ್ದು ಅವನತ್ತ ಬಂದ.

"ನಾನೇ ಫಾಸ್ಟರ್. ನೀವು ಯಾಕೆ ಇನ್ನೂ ಬರಲಿಲ್ಲಾಂತ ನಾವೆಲ್ಲಾ ಯೋಚನೆ ಮಾಡ್ತಾ ಇದ್ವಿ."

ಫಾಸ್ಟರ್‌ನ ಕೈ ಕುಲುಕಿದ ವಾನಂಬಾಡಿ.

"ಸಾರಿ, ಮಿಸ್ಟರ್ ಫಾಸ್ಟರ್. ನನ್ನಿಂದ ವಿಳಂಬ ಆಯ್ತು. ನಾನು ತಪ್ಪು ವಿಳಾಸಕ್ಕೆ ಹೋಗ್ಬಿಟ್ಟಿದ್ದೆ. ಇಲ್ಲಿಗೆ ಬರೋದು ಸ್ವಲ್ಪ ಕಷ್ಟವೇ ಆಯ್ತು."

ಫಾಸ್ಟರ್ ಪರಿತಾಪದ ಭಾವ ಪ್ರಕಟಿಸಿದ.

"ನಾನೂ ಬೀದಿಯ ಹೆಸರು ಸರಿಯಾಗಿ ಹೇಳದೆ ತಪ್ಪು ಮಾಡ್ದೆ. ನಿನ್ನೆ ರಾತ್ರಿ ನಮಗೆ ಫೋನ್ ಬಂದಾಗ ನಾವೂ ಅದೇ ತಪ್ಪು ಮಾಡಿದ್ವಿ. ಆಮೇಲೆ ಗೊತ್ತಾಯ್ತು ಸರಿಯಾದ ವಿಳಾಸ. ನಾನು ಫೋನ್‌ನಲ್ಲಿ ಸ್ವಲ್ಪ ಸ್ಪಷ್ಟವಾಗಿಯೇ ಹೇಳಬೇಕಾಗಿತ್ತು. ಆದರೆ ನಮಗೆಲ್ಲಾ ಏನೋ ಧಾವಂತ. ನಾವೆಲ್ಲಾ ದಿನ ಪೂರ್ತಿ ಎತ್ತಿನ ಹಾಗೆ ದುಡೀತಾ ಇದೀವಿ. ಆಯಾಸ, ಆತುರದಲ್ಲಿ ನನ್ನ ಬುದ್ಧಿಗೆ ಅದು ಹೊಳೀಲೇ ಇಲ್ಲ"

"ಅಂದರೆ ಕೊಲೆ ಆಗಿದ್ದು ನಿನ್ನೆ ರಾತ್ರಿಯೆ?"

"ಹೌದು, ನಿನ್ನೆ ರಾತ್ರಿ ಒಂಭತ್ತು ಗಂಟೆಗೂ ಮಧ್ಯ ರಾತ್ರಿಗೂ ನಡುವೆ ಸಂಭವಿಸಿದ್ದು....."

"ಎಲ್ಲಿ"

"ಇದೇ ಮನೆಯಲ್ಲಿ"

"ಓಹ್!"

ಬಡಿತ ಏರಿದ ಎದೆಯನ್ನು ಒತ್ತಿಕೊಂಡ.

ಫಾಸ್ಟರ್ ಸಹೋದ್ಯೋಗಿಗಳನ್ನು ಪರಿಚಯಿಸಿದ.

"ಇವರು ಅರ್ಥನಾರಿ.....ಇವರು ನಬಿ.....ದಯವಿಟ್ಟು ಕೂತ್ಕೊಳಿ. ಮಿಸ್ಟರ್ ವಾನಂಬಾಡಿ. ನಾವು ಈವರೆಗೆ ತಿಳಿದಿರೋದೇನು ಅನ್ನೋದನ್ನ ನಿಮಗೆ ಹೇಳೋದು ಒಳ್ಳೇದು"

ಒಡನೆ ಅರ್ಥನಾರಿ ವಾನಂಬಾಡಿಯ ಕಡಗೆ ತಿರುಗಿ ಬೆರಳಿನಿಂದ ಗಾಳಿಯಲ್ಲಿ ಒಂದು ಸೊನ್ನೆ ಸುತ್ತಿ ತೋರಿದ.

ಫಾಸ್ಟರ್ ಮುಂದುವರಿಸಿದ.

"ಅವರು ಸೂಚಿಸಿದ ಹಾಗೆ ನಾವು ಈತನಕ ಇಲ್ಲಿ ಗೊತ್ತು ಮಾಡಿರೋದು ಅಷ್ಟೇ.....ಸೊನ್ನೆ!.....ಈ ಮನುಷ್ಯ ಸಭಾಪತಿ ಒಬ್ಬ....."

"ಸಭಾಪತಿ ಅಂದ್ರೆ ಕೊಲೆಯಾದ ಮನುಷ್ಯ?"

"ಹೌದು"

ವಾನಂಬಾಡಿಗೆ ಈಗ ತಾನಿರುವ ಮನೆ ಸಭಾಪತಿಯದು ಎಂಬುದು ಅರ್ಥವಾಗಿತ್ತು.

"ಅಂದರೆ ಈಗ ನಾವು ಇರೋ ಈ ಮನೆ.....?"

"ಕೊಲೆಯಾದ ಸಭಾಪತಿಯ ಮನೆ. ಸಭಾಪತಿ ಒಬ್ಬ ಭಾರೀ ಶ್ರೀಮಂತ.

ಕಸುಬಿನಿಂದ ಒಬ್ಬ ಎಸ್ಟೇಟ್ ಏಜೆಂಟ್.....ನಿಮ್ಮ ಹಾಗೆ, ಹವ್ಯಾಸ ವಿದೇಶಿ ನೋಟುಗಳನ್ನ ಸಂಗ್ರಹಿಸೋದು. ಅದೂ ನಿಮ್ಮ ಹಾಗೆ, ವ್ಯತ್ಯಾಸ ಇಷ್ಟೆ ಅವನು ಕೇವಲ ನೋಟುಗಳ ಸಂಗ್ರಹಕಾರನಾಗಿದ್ದ. ನೀವು ನೋಟುಗಳ ವ್ಯವಹಾರ ನಡೆಸ್ತೀರಿ. ಆತಂಕಬೇಡ, ನಾವು ನಿಮ್ಮ ಆ ವ್ಯವಹಾರದಲ್ಲಿ ಆಸಕ್ತರಲ್ಲ. ನಿಮಗೆ ಗೊತ್ತಿರಲಾರದು, ಆ ಮನುಷ್ಯನಿಗೆ ನೋಟುಗಳ ಸಂಗ್ರಹದ ಕೆಲಸ ಅವನ ನಿಜವಾದ ಉದ್ಯೋಗಕ್ಕಿಂತ ಹೆಚ್ಚಿನ ಕಾಲ ತೊಗೊಳ್ತಿತ್ತು. ಬಣ್ಣದ ಕಾಗದಗಳ ಹುಚ್ಚ!"

ಉಗುಳು ನುಂಗಿತು ಬಣ್ಣದ ಹುಳು. ಮುಂದುವರಿಯಿತು ಫಾಸ್ಟರ್‌ನ ಹೇಳಿಕೆ.

"ವರ್ಷಗಟ್ಟಲೆ ಕೆಲಸ ಮಾಡ್ದೊನು ವಿಶ್ರಾಂತಿ ಪಡೆಯೋ ಗೋಜಿಗೆ ಹೋಗ್ಲಿಲ್ಲ. ಅವನೊಬ್ಬ ವಿಧುರ. ಅವನೊಂದಿಗೆ ಈ ಮನೇಲಿ ಇದ್ದೋರು ಗಂಡ, ಹೆಂಡತಿಯ ಒಂದು ಜೋಡಿ. ಅವನು ಕಾರಿನ ಚಾಲಕ. ಅವಳು ಅಡಿಗೆ ಆಳು. ನಿನ್ನೆ ರಾತ್ರಿ ಅವರಿಬ್ಬರೂ ಎಲ್ಲಿಗೋ ಹೋಗಿದ್ರು. ಸಭಾಪತಿ ಮನೇಲಿ ಒಬ್ಬನೇ ಇದ್ದ. ಆ ಜೋಡಿ ಮನೆಯಿಂದ ಒಂಭತ್ತು ಗಂಟೆಗೆ ಹೊರಟಾಗ ಸಭಾಪತಿ ಇದೇ ಕುರ್ಚಿಯಲ್ಲಿ, ನೀವು ಈಗ ಕುಳಿತಿರೋ ಕುರ್ಚಿಯಲ್ಲಿ ಕುಳಿತಿದ್ದ"

ದವಡೆಗಳನ್ನು ಕಚ್ಚಿದ ವಾನಂಬಾಡಿ ತಾನು ಕುಳಿತಿದ್ದ ಕುರ್ಚಿಯ ಎಡಬಲದ ಪಿಡಿಗಳನ್ನು ನೋಡಿ "ಸರಿ" ಎಂದ.

"ಸಭಾಪತಿ ವಿದೇಶಿ ಕರೆನ್ಸಿಗಳ ಆಲ್ಬಮ್‌ಗಳನ್ನು ತನ್ನ ಸುತ್ತಲೂ ಹರಡಿಕೊಂಡು ಕುಳಿತಿದ್ದ. ಆ ಇಬ್ಬರು ಗಂಡ, ಹೆಂಡತಿ ರಾತ್ರಿ ಹನ್ನೆರಡಕ್ಕೆ ವಾಪಸ್ ಬಂದ್ರು. ಸಭಾಪತಿಗೆ ತಿನ್ನೋದಿಕ್ಕೆ ಏನಾದ್ರೂ ಬೇಕೆ ಅಂತ ವಿಚಾರಿಸೋದಿಕ್ಕೆ ಹೆಂಗಸು ಹತ್ತಿರ ಬಂದಾಗ ಸಭಾಪತಿ ಕುರ್ಚಿಯಲ್ಲಿ ಪ್ರತಿಮೆ ಹಾಗೆ ಕೂತಿದ್ದ. ಮೇಜಿನ ಮೇಲೆ ತೆರೆದ ಆಲ್ಬಮ್‌ಗಳು ಹರಡಿದ್ವು..... ಸಭಾಪತಿ ಸತ್ತು ಹೋಗಿದ್ದ ! ಅವನ ಮೂಗು ಮತ್ತು ಬಾಯಿ ಬಲವಾಗಿ ಒತ್ತುವ ಹಾಗೆ ಕರವಸ್ತ್ರ ಹಿಡಿದು ಉಸಿರು ಕಟ್ಟಿಸಿದ್ದರಿಂದ

ಅವನ ಪ್ರಾಣ ಹೋಗಿತ್ತು.....ಅದು ನಮಗೆ ಅವನ ತುಟಿ ಮೂಗಿನ ಹೊಳ್ಳೆಗಳಲ್ಲಿ ಸಿಕ್ಕಿದ ಬಟ್ಟೆಯ ಹತ್ತಿ ಚೂರುಗಳಿಂದ ಗೊತ್ತಾಯ್ತು"

"ಆ ಕರವಸ್ತ್ರದಿಂದ ನಿಮಗೆ ಸುಳಿವು ಸಿಕ್ಕಬೋದು. ಅದು ಯಾರ ಕರವಸ್ತ್ರ ಅಂತ ಗೊತ್ತು ಮಾಡೋದು ಸಾಧ್ಯ. ನೀವು ಪೊಲೀಸ್ ಮಂದಿ ಅಂತಾ ವಿಷಯಗಳಲ್ಲಿ ಬಹಳ ಬುದ್ಧಿವಂತರು"

ಪ್ರಕರಣದಲ್ಲಿ ತಾನು ವಹಿಸಬೇಕಾದ ಪಾತ್ರವೇನು ಎಂಬ ಕುತೂಹಲ, ಆತಂಕ ಅವನಿಗೆ ತಪ್ಪಿರಲಿಲ್ಲ. ವ್ಯಥೆಪಡುವಂತೆ ಮುಖ ಮಾಡಿದ ಇನ್ಸ್‌ಪೆಕ್ಟರ್.

"ಕರವಸ್ತ್ರ ಯಾರದು ಅಂತ ಗೊತ್ತಾಯ್ತು"

"ಹಾಂ?"

"ಅದು ಸಭಾಪತಿಯದೇ ಕರವಸ್ತ್ರ. ಸಭಾಪತಿಯ ಕರವಸ್ತ್ರದಿಂದಲೇ ಅವನ ಕೊಲೆ ಮಾಡಿದಾರೆ. ಕೊಲೆ ಪ್ರಕರಣವನ್ನ ನಮ್ಮ ರೀತಿಯಲ್ಲಿ ಹೀಗೆ ಬಿಡಿಸಿದೀವಿ. ಸಭಾಪತಿ ಕೊಲೆಗಾರನನ್ನ ಸ್ವಲ್ಪವೂ ಸಂಶಯ ಪಡದೆ ಒಳಗೆ ಬರೋದಿಕ್ಕೆ ಅವಕಾಶ ಕೊಟ್ಟಿದಾನೆ. ಮನೆಯಲ್ಲಿ ಕಳ್ಳತನದಿಂದ ಅಥವಾ ಬಲವಂತವಾಗಿ ವ್ಯಕ್ತಿ ಒಳ ಬಂದಿರೋದಿಕ್ಕೆ ಯಾವ ಗುರುತೂ ಇಲ್ಲ. ವ್ಯಕ್ತಿ ಬಹುಶಃ ಸಭಾಪತಿಗೆ ಗೊತ್ತಿರೋನು ಆಗಿರ್ಬೇಕು. ಅನಿರೀಕ್ಷಿತವಾಗಿ ಬಂದಿದಾನೆ. ಸಭಾಪತಿಯ ವಿಶ್ವಾಸದ ವ್ಯಕ್ತಿ. ಒಳಗೆ ಬಂದ ಮೇಲೆ ಅವನಿಗೆ ಕೋಣೆಯಲ್ಲಿ ಕರೆನ್ಸಿಗಳ ಸಂಗ್ರಹ ನೋಡುವ ಅವಕಾಶ ಸಿಕ್ಕಿದೆ. ಆ ವ್ಯಕ್ತಿ ಯಾವುದಾದರೂ ವಿದೇಶಿ ನೋಟುಗಳನ್ನು ಮಾರೋದಿಕ್ಕೆ ಬಂದಿರಲೂ ಸಾಧ್ಯ."

"ಸಂಗ್ರಹಕಾರರು ಎಷ್ಟು ಬೆಲೆಯಾದರೂ ವಸ್ತುಗಳನ್ನ ಕೊಳ್ತಾರೆ"

"ಸಭಾಪತಿಗೆ ಸ್ವಲ್ಪ ನೆಗಡಿಯೂ ಇದ್ದಿರಬೇಕು. ಬಾಗಿಲವರೆಗೆ ಹೋಗಿ ವ್ಯಕ್ತಿಯನ್ನು ಕರೆತಂದಾಗ ಶೀತ ಹತ್ತಿರಬೇಕು. ಕುರ್ಚಿಯಲ್ಲಿ ಕೂತು ಸೀನು ಹಾಕಿದಾನೆ. ಕರವಸ್ತ್ರ ತೆಗೆದು ಮೂಗಿಗೆ ಒತ್ತುವ ಹೊತ್ತಿಗೆ ಆ ವ್ಯಕ್ತಿ ತಕ್ಷಣ ಹಿಂದಿನಿಂದ ಕರವಸ್ತ್ರದೊಂದಿಗೆ ಮೂಗು ಬಾಯಿ ಒಟ್ಟಾಗಿ ಒತ್ತಿ ಉಸಿರು

ಕಟ್ಟಿಸಿದಾನೆ. ನಮಗೆ ಸಿಕ್ಕಿದ ಕರವಸ್ತ್ರದಲ್ಲಿ ಆ ಗುರುತುಗಳಿವೆ.....ಆಮೇಲೆ ಕೊಲೆಗಾರ ಇಲ್ಲಿ ಯಾವ ವಸ್ತುವನ್ನೂ ಮುಟ್ಟದೆ ಹೊರಟು ಹೋಗಿದಾನೆ. ಯಾವ ವಸ್ತುವನ್ನೂ ಕದಲಿಸಿಲ್ಲ, ಯಾವ ಸುಳಿವನ್ನೂ ಬಿಟ್ಟು ಹೋಗಿಲ್ಲ. ಮೇಜು, ಕುರ್ಚಿ, ಬಾಗಿಲ ಪಿಡಿ, ಆಲ್ಬಮ್ ಯಾವುದರ ಮೇಲೂ ಬೆರಳು ಗುರುತು ಮೂಡಿಸಿಲ್ಲ"

"ಬಹಳ ಎಚ್ಚರಿಕೆಯ ಮನುಷ್ಯ"

ಹುಬ್ಬೇರಿಸಿದ ವಾನಂಬಾಡಿ.

"ಅವನು ಎಚ್ಚರಿಕೆಯ ಮನುಷ್ಯ ಆಗಿದ್ದಿದ್ದರಿಂದಲೇ ನಾವು ಇಪ್ಪತ್ತ ನಾಲ್ಕು ಗಂಟೆ ಶ್ರಮ ಪಟ್ಟರೂ ಏನೂ ಕಂಡು ಹಿಡಿಯೋದಿಕ್ಕೆ ಆಗಿಲ್ಲ. ಎಲ್ಲಕ್ಕೂ ಮೊದಲು ಕೊಲೆಯ ಉದ್ದೇಶ ಏನು ಅನ್ನೋದು ತಿಳಯಬೇಕಾಗಿದೆ. ಈ ಹೊತ್ತಿನವರೆಗೆ ಒಬ್ಬ ಸಂದೇಹಿಯನ್ನೂ ಗೊತ್ತು ಪಡಿಸೋದಿಕ್ಕೆ ಆಗಿಲ್ಲ. ವ್ಯಕ್ತಿ ಬಂದ, ಕೊಂದ, ಹೋದ ಅಷ್ಟೇ. ಅವನು ಯಾವ ಮಾನವ ಕಣ್ಣಿಗೂ ಬಿದ್ದಿಲ್ಲ. ಅವನು ಕಳ್ಳ ಅಥವಾ ಲೂಟಿಗಾರ ಅಲ್ಲ. ಯಾಕೇಂದ್ರೆ ಈ ಮನೇಲಿ ವಸ್ತು, ಹಣ ಯಾವುದೂ ಕಳುವಾಗಿಲ್ಲ"

"ವಿಚಿತ್ರ !"

ಟೋಪಿ ಸವರಿಕೊಂಡ ನೋಟುಗಳ ತಜ್ಞ.

"ಕೊಲೆಯ ಉದ್ದೇಶ ದ್ವೇಷ ಅಥವಾ ಶತ್ರುತ್ವವು ಅಲ್ಲ. ಸಭಾಪತಿಗೆ ವಿರೋಧಿ ಯಾವನೂ ಇರ್ಲಿಲ್ಲ. ನಾವು ಅವನ ಇಪ್ಪತ್ತು ವರ್ಷಗಳ ಹಿಂದಿನ ಚರಿತ್ರೆಯ ವಿವರಗಳನ್ನ ಪಡೆದಿದ್ದಾಯ್ತು. ಸಭಾಪತಿಯ ಮೇಲೆ ದ್ವೇಷ, ಶತ್ರುತ್ವ ಸಾಧಿಸೊ ಯಾವ ವ್ಯಕ್ತಿಯೂ ಇಲ್ಲ. ಅವನು ಆಳುಗಳನ್ನ ಕೆಲಸದಿಂದ ತೆಗೆದು ಹಾಕಿಲ್ಲ. ಅವನಿಗೆ ಮೊದಲಿನಿಂದ ಆಳು ಅನ್ನೋನು ಯಾರೂ ಇರ್ಲಿಲ್ಲ. ಇದ್ದೋರು ಆ ಇಬ್ಬರೇ ಗಂಡ, ಹೆಂಡತಿ ಜೊತೆ. ಗಂಡ ಕಾರು ಚಾಲಕ. ಜೊತೆಗೆ ಆಳಿನ ಕೆಲಸವೂ ಮಾಡ್ತಿದ್ದ. ಹೆಂಡತಿಗೆ ಅಡಿಗೆ ಆಳು. ಚಾಲಕನ ಹಿನ್ನೆಲೆಯೂ ಶುದ್ಧವಾಗಿದೆ. ಈ ತನಕ ಒಂದು ಅಪಘಾತ

ನಡೆಸಿಲ್ಲ. ಯಾರೊಂದಿಗೂ ಜಗಳ ಆಡಿದೋನಲ್ಲ. ಎಸ್ಟೇಟ್ ಏಜೆನ್ಸಿ ಕಸುಬಿನಲ್ಲಿ ಸಭಾಪತಿ ಯಾರೊಂದಿಗೂ ಮನಸ್ತಾಪ ಕಟ್ಟಿಕೊಂಡಿಲ್ಲ, ಪೈಪೋಟಿ ನಡೆಸಿಲ್ಲ. ಅವನು ವಹಿವಾಟು ನಡೆಸಿರೋದೂ ಸಿಟಿ ಹೊರಗಿನ ಪ್ರದೇಶಗಳ ಸ್ವತ್ತುಗಳ ವಿಷಯದಲ್ಲಿ. ಸಭಾಪತಿ ಉಯಿಲು ಮಾಡಿಲ್ಲ. ಅದ್ದರಿಂದ ಕೊಲೆಗೆ ಲಾಭದ ಉದ್ದೇಶವೂ ಇಲ್ಲ"

"ಒಂದು ಶುದ್ಧವಾದ, ಆದರೆ ತೊಡಕಿನ ಪ್ರಕರಣ"

ದನಿಗೂಡಿಸಿದ ಅರ್ಥನಾರಿ.

* * *

ಕೆವಿ ಓರೆ ಮಾಡಿದ ವಾನಂಬಾಡಿ. ಈಗ ಮಹಡಿಯಿಂದ ಅಳುವಿನ ಮೆದು ಶಬ್ದ ಕೇಳಿಬರುತ್ತಿರಲಿಲ್ಲ.

"ಏನು ಗಮನಿಸ್ತಿದೀರಿ?" ಫಾಸ್ಟರ್ ಕೇಳಿದ.

"ನಾನು ಇಲ್ಲಿಗೆ ಬಂದಾಗ ಮೇಲುಗಡೆಯಲ್ಲಿ ಯಾರೊ ಹೆಂಗಸು ಮೆಲ್ಲಗೆ ಅಳ್ತಾ ಇರೊ ಹಾಗೆ ಕೇಳಿಸ್ತು"

"ಓ, ಅದು ಸಭಾಪತಿಯ ಮಗಳು ವಲ್ಲಿಯಮ್ಮ. ಅವಳೊಬ್ಬಳೇ ಅವನ ಉಳಿದಿರೊ ಬಂಧು"

ವಾನಂಬಾಡಿ ಏನೂ ಹೇಳಲಿಲ್ಲ. ಆದರೆ ಫಾಸ್ಟರ್ ಅವನ ಯೋಚನೆ ಗ್ರಹಿಸಿ ಹೇಳಿದ.

"ಸಭಾಪತಿಯ ಮಗಳು ಉತ್ತರ ಆರ್ಕಾಟ್‌ನಿಂದ ಈ ದಿನ ಬೆಳಗ್ಗೆ ಬಂದಳು. ಅವಳು ಬಂದ ಮೇಲೆ ದೇಹದ ಸಂಸ್ಕಾರ ಆಯ್ತು. ವಲ್ಲಿಯಮ್ಮ ಭಾರಿ ಶ್ರೀಮಂತನ್ನ ಮದುವೆ ಆಗಿದಾಳೆ. ಗಂಡ ದೊಡ್ಡ ಕೈಗಾರಿಕೋದ್ಯಮಿ. ಸಭಾಪತಿ ಉಯಿಲು ಮಾಡಿಲ್ಲ ಅಂದೆ. ಅವನು ಪೈಸಾ ಇನ್ಷೂರೆನ್ಸೂ ಮಾಡಿಲ್ಲ. ನಿಜವಾಗಿಯೂ ಹಳೇ ಕಾಲದ ಬಾತು ಕೋಳಿ! ಮತ್ತೆಲ್ಲಾದ್ರೂ ಹಣ ಹೂಡಿದ್ರೆ ಅದು ಸದ್ಯಕ್ಕೆ ನಮಗೆ ಸಂಬಂಧಿಸಿದ್ದಲ್ಲ. ವೈಯಕ್ತಿಕವಾದ ಯಾವ ಉದ್ದೇಶವೂ ಪ್ರಕರಣದಲ್ಲಿ ಕಂಡು ಬರ್ತಾ ಇಲ್ಲ..... ನಮಗೆ ಇಲ್ಲಿ

ಮುಖ್ಯವಾಗಿ ಕಂಡು ಬಂದ ಅಂಶ ಇಷ್ಟು. ಒಂದು ಪೈಸಾ ಅಥವಾ ಒಂದು ಚಮಚ ಈ ಮನೆಯಿಂದ ಕಾಣೆಯಾಗಿಲ್ಲ"

ಕಣ್ಣುಗಳನ್ನೇರಿಸಿದ ವಾನಂಬಾಡಿ.

"ಮತ್ತೆ ಈ ಪ್ರಕರಣದಲ್ಲಿ ನನ್ನ ಪಾತ್ರ ಏನಿದೆ ನಿಮಗೆ, ಇನ್ಸ್‌ಪೆಕ್ಟರ್?"

ಇನ್ಸ್‌ಪೆಕ್ಟರ್ ಅವನತ್ತ ಬೆರಳು ಮಾಡಿ ಮನದಟ್ಟು ಮಾಡುವಂತೆ ನುಡಿದ.

"ಅದೇ ವಿಷಯಕ್ಕೆ ಬರ್ತಿದೀನಿ. ಇಲ್ಲಿ ನಮ್ಮ ಸಹಾಯಕ್ಕೆ ನೀವು ಕೈ ಕೂಡಿಸಿಕೊಡಬೇಕಾದ ವಿಷಯ ಇದೆ.....ಈ ಪ್ರಕರಣದಲ್ಲಿ ಕೊಲೆಯ ಉದ್ದೇದರೋಡೆ ಅಂತ ನಮ್ಮ ಭಾವನೆ. ದರೋಡೆ ಅಂದ್ರೆ ಹಣ ಅಥವಾ ಆಭರಣಗಳಿಗೆ ಸಂಬಂಧಿಸಿದ್ದಲ್ಲ....."

"ಮತ್ತೆ ?"

ಫಾಸ್ಟರ್‌ನ ತೋರು ಬೆರಳು ಮೇಜಿನ ಮೇಲಿದ್ದ ಭಾರವಾದ ಕರೆನ್ಸಿ ಆಲ್ಬಮ್‌ಗಳತ್ತ ತಿರುಗಿತು.

"ಸಭಾಪತಿ ಕುರ್ಚಿಯಲ್ಲಿ ಕೊಲೆಯಾದಾಗ ಅವನ ಮುಂದೆ ಈ ನೋಟುಗಳ ಆಲ್ಬಮ್‌ಗಳು ಬಿದ್ದಿದ್ದವು ಅಂತ ಆಗಲೇ ಹೇಳ್ದೆ. ನಾವು ಈ ಆಲ್ಬಮ್‌ಗಳನ್ನ ಒಂದು ಸಾರಿ ಅಲ್ಲ, ಹತ್ತಾರು ಸಾರಿ ತಿರುವಿ ಹಾಕಿ ನೋಡಿದ್ವಿ. ನಾವಿನ್ನೂ ಕತ್ತಲಲ್ಲೇ ಇದೀವಿ. ಆಲ್ಬಮ್‌ನಲ್ಲಿ ಅನೇಕ ಪುಟಗಳು ಖಾಲಿ ಇವೆ. ಆ ಭಾಗಗಳಲ್ಲಿದ್ದ ನೋಟುಗಳನ್ನ ತೆಗೆದುಕೊಂಡಿದ್ದಾರೊ ಅಥವಾ ಆ ಭಾಗಗಳಿಗೆ ನೋಟುಗಳು ಅಸಲಿ ನೋಟುಗಳೊ, ಖೋಟಾಗಳೊ ಗೊತ್ತಿಲ್ಲ .....ಕೊಲೆ ಮಾಡುವಷ್ಟು ಬೆಲೆ ಬಾಳೊ ವಸ್ತುಗಳೇ ಅವು? ಆಲ್ಬಮ್‌ನಲ್ಲಿರೊ ನೋಟುಗಳ ಸಲುವಾಗಿ ಕೊಲೆ ನಡೆದಿದೆ ಅನ್ನೊ ಶಂಕೆ ನಮಗಿದೆ. ನಾನು ಹೇಳೋದೆಲ್ಲಾ ಅರ್ಥಮಾಡಿ ಕೊಂಡ್ರಲ್ಲ? ನೀವು ಈ ಆಲ್ಬಮ್‌ಗಳಲ್ಲಿರೊ ನೋಟುಗಳನ್ನ ನೋಡಿ, ಕೊಲೆಯ ಉದ್ದೇಶ ಏನಿರಬೋದು ಅನ್ನೋದನ್ನ ತೋಡಿ ಪ್ರಕರಣದ

ಒಂದು ಭಾಗಕ್ಕಾದರೂ ಬೆಳಕು ಹಾಕ್ಬೋದು"

"ಹೇಗೆ ?"

"ನಾವು ಅಪರಾಧಿನ ಹುಡುಕೊ ಕೆಲಸ ಕಡಿಮೆ ಆಗತ್ತೆ. ಈ ಕರೆನ್ಸಿ ಗಳಿಗೋಸ್ಕರವೇ ಕೊಲೆ ನಡೆದಿದ್ರೆ ನಮ್ಮ ಸಂಶಯ ಕರೆನ್ಸಿಗಳ ಸಂಗ್ರಹಕಾರರ ಮೇಲೆ ಸೀಮಿತವಾಗತ್ತೆ. ಸಭಾಪತಿ ವಿದೇಶಿ ನೋಟುಗಳ ಸಂಗ್ರಹಕಾರ ಅನ್ನೋದನ್ನ ತಿಳಿದಂತ, ಅವನ ಸಂಗ್ರಹವನ್ನು ನೋಡಿರುವಂತ ಇನ್ನೊಬ್ಬ ನೋಟುಗಳ ಸಂಗ್ರಹಕಾರ ಸಂಶಯಿ ಆಗ್ತಾನೆ"

ವಾನಂಬಾಡಿ ತಲೆ ತಟ್ಟಿಕೊಂಡ.

"ಹಾಗಾದ್ರೆ ನಾನೂ ಒಬ್ಬ ಸಂಶಯಿ ಆಗಬೋದು"

ಸ್ವೆಟರ್ ಎಳೆದು ಕುತ್ತಿಗೆಗೆ ಗಾಳಿ ಊದಿಕೊಂಡ.

"ನೀವು ಈ ಮೊದಲು ಸಭಾಪತಿನ ನೋಡಿದ್ರಾ ?"

"ನೋಡಿರ್ಲಿಲ್ಲ. ಸಭಾಪತಿ ಅನ್ನೊ ಹೆಸರಿನ ನೋಟುಗಳ ಸಂಗ್ರಹಕಾರ ಒಬ್ಬ ಇದಾನೆ ಅನ್ನೋದೂ ಗೊತ್ತಿರ್ಲಿಲ್ಲ"

"ಸಭಾಪತಿನ ನೋಡಿರ್ಲಿಲ್ಲ. ಅವನ ನೋಟುಗಳ ಸಂಗ್ರಹವನ್ನೂ ನೋಡಿರ್ಲಿಲ್ಲ.....?"

"ಇಲ್ಲ "

"ನೀವು ಹೇಗೆ ಸಂಶಯಿ ಆಗ್ತೀರಿ ? .....ಅಲ್ಬಮ್‌ಗಳಲ್ಲಿ ಚೆನ್ನಾಗಿ ನೋಡಿ ಯಾವುದಾದ್ರೂ ಬೆಲೆಬಾಳೊ ನೋಟು ಕಾಣೆಯಾಗಿದೆಯಾ ಅನ್ನೋದನ್ನ ಪತ್ತೆ ಮಾಡಿ. ಆಮೇಲೆ ನಾವು ಅಂತಹ ನೋಟು ಎಲ್ಲಿ ಸೇರಿದೆ ಅನ್ನೋದರ ಪತ್ತೆ ಕಾರ್ಯ ನಡೆಸ್ತೀವಿ. ನೀವು ಈ ವಿಷಯದಲ್ಲಿ ಬೆಳಕು ಹಾಕದೆ ಹೋದ್ರೆ ಉದ್ದೇಶವೇ ಇಲ್ಲದ ಕೊಲೆ ಅನ್ನಿಸಿಕೊಳ್ಳುತ್ತೆ. ನಾವು ಈ ಪ್ರಕರಣ ಕೈಬಿಡಬೇಕಾಗತ್ತೆ.....ನಿಮ್ಮ ಸಹಾಯ ಬೇಕು, ಮಿಸ್ಟರ್ ವಾನಂಬಾಡಿ"

"ಸಹಾಯ ಮಾಡಬಲ್ಲೆ ಅಂತ ತಿಳೀತೀನಿ. ಸಭಾಪತಿ ನೋಟುಗಳನ್ನ

ಸಂಗ್ರಹಿಸೋದಿಕ್ಕೆ ಯಾವುದಾದರೂ ಕ್ರಮ ಅನುಸರಿಸ್ತಾ ಇದ್ದನೆ, ಅನ್ನೋದನ್ನ ನೋಡಬೇಕಾಗತ್ತೆ. ಪ್ರಯತ್ನ ಪಡ್ತೀನಿ"

ಮೇಜಿಗೆ ಸಮೀಪವಾಗಿ ಕುರ್ಚಿ ಎಳೆದು ಕುಳಿತು ಕುತ್ತಿಗೆಯ ಬಳಿ ಗಾಳಿ ಆಡುವಂತೆ ಸ್ವೆಟರ್ ಹಿಗ್ಗಿಸಿಕೊಂಡು ಕೇಳಿದ.

"ನೀವು ಹೇಳಿದ್ರಿ ಸಭಾಪತಿಯ ಮೃತ ದೇಹನ ನೀವು ಇಲ್ಲಿ ನೋಡಿದಾಗ ಅವನ ಮುಂದೆ ಆಲ್ಬಮ್‌ಗಳು ಇದ್ದವು ಅಂತ. ಅವು ತೆರೆದಿದ್ದವೆ, ಮುಚ್ಚಿದ್ದವೆ?"

ಫಾಸ್ಟರ್ ಮೇಜಿನತ್ತ ಬೆರಳು ಮಾಡಿದ.

"ಅವೆರಡು ಆಲ್ಬಮ್‌ಗಳು ಮುಚ್ಚಿದ್ವು. ಒಂದರ ಮೇಲೊಂದು ಇದ್ವು. ಈ ಮೂರನೆದು ಅವನ ಮುಂದೆ ಮೇಜಿನ ಮೇಲೆ ತೆರೆದಿತ್ತು."

"ತೆರೆದಿದ್ದ ಪುಟ ಯಾವುದೂಂತ ಹೇಳೋದಿಕ್ಕೆ ಆಗತ್ತಾ ?"

ಈಗ ಫಾಸ್ಟರ್‌ಗೆ ತಾನು ತೃಪ್ತನಾಗಿರುವುದನ್ನು ಸೂಚಿಸುವ ಸರದಿ.

"ಅದು ಹೇಳೋದಿಕ್ಕೆ ಆಗತ್ತೆ ಅಂದ್ರೆ ನಿಮಗೆ ಆಶ್ಚರ್ಯ ಆಗಬೋದು. ನನಗೆ ವಿದೇಶಿ ನೋಟುಗಳ, ಅವುಗಳ ಸಂಗ್ರಹದ ವಿಷಯಗಳು ಗೊತ್ತಿಲ್ಲದೆ ಇರಬೋದು. ಆದರೆ ನೀವು ಕೇಳಿದ್ರಲ್ಲಾ ಅಂತಾ ವಿಷಯಗಳನ್ನ ಗಮನಿಸೋದು, ನೆನಪಿನಲ್ಲಿಡೋದು ನನಗೆ ಮೊದಲಿನಿಂದ ಬಂದದ್ದು..... ಆಲ್ಬಮ್‌ನಲ್ಲಿ ತೆರೆದಿದ್ದ ಆ ಪುಟಗಳ ಮಧ್ಯೆ ನಾನೊಂದು ಗುರುತಿನ ಕಾಗದ ಉದ್ದಕ್ಕೇ ಮಡಿಸಿ ಇಟ್ಟಿದ್ದೀನಿ"

ಫಾಸ್ಟರ್ ಆ ಪುಟಗಳನ್ನು ತೋರಿದ. ವಾನಂಬಾಡಿ ಪುಟಗಳನ್ನು ವಿಶಾಲವಾಗಿ ತೆರೆದಿಟ್ಟುಕೊಂಡು ನೋಡತೊಡಗಿದ.

"ಅಬಿಸೀನಿಯಾ....."

"ಪುಟದಲ್ಲಿ ಖಾಲಿ ಬಿದ್ದಿರೊ ಚೌಕಟ್ಟುಗಳನ್ನು ನೋಡಿ, ಅವುಗಳ ಬಗ್ಗೆ ಏನು ಹೇಳ್ತೀರಿ ? ಅವನ್ನ ನೋಡಿದ್ರೆ....."

ಫಾಸ್ಟರ್ ನೋಟಿನ ಮೇಲಿದ್ದ ತೆಳುವಾದ ಪಾರದರ್ಶಕ ಅಂಟು ಕಾಗದದ ಕಡೆ ಬೆರಳಿನ ಉಗುರು ಸೋಕಿಸಿದ.

"ಹಾಂ, ಹಾಗೆ ಮುಟ್ಟಬೇಡಿ, ನೋಟುಗಳು ಹಾಳಾಗತ್ವೆ. ಹಾಳಾಗ ಬಾರದು ಅಂತಲೇ ಅದರ ಮೇಲೆ ತೆಳುವಾದ ರಕ್ಷಣೆ ಹೊದಿಕೆ ಹಾಕಿದಾರೆ .....ಆ ಗಾಜು ಕೊಡಿ ಇಲ್ಲಿ"

ಭೂತಗನ್ನಡಿಯ ಮೂಲಕ ಎರಡು ಕ್ಷಣ ನೋಡಿ ಅಧಿಕಾರಯುತ ವಾಗಿ ಹೇಳಿದ.

" ಆ ಖಾಲಿ ಚೌಕಟ್ಟುಗಳಿವೆಯಲ್ಲಾ ಅವುಗಳಿಂದ ನೋಟುಗಳನ್ನು ತೆಗೆದಿಲ್ಲ. ಆ ಜಾಗಗಳಿಗೆ ಇನ್ನೂ ನೋಟುಗಳು ಸಿಕ್ಕಿಲ್ಲ..... ಇಂತಾ ಸಂಗ್ರಹವನ್ನ ನಾನು ಈವರೆಗೆ ನೋಡಿರ್ಲಿಲ್ಲ. ನೀವೂ ನೋಡಿರಲಾರಿರಿ"

"ಪೊಲೀಸ್ ಹುದ್ದೆಗೆ ಸೇರಿದ ಮೇಲೆ ಈ ಪ್ರಕರಣದಲ್ಲೇ ಇಂತಾದ್ದು ನೋಡ್ತಿರೋದು"

"ಇವು ಬೆಲೆ ಬಾಳೊ ಫೋಟೊ ಆಲ್ಬಮ್‌ಗಳ ಹಾಗೆ ಇವೆ. ನೋಟುಗಳನ್ನ ಪುಟಗಳಿಗೆ ಪಿನ್ ಮಾಡೋದು ಹಳೇ ವಿಧಾನ. ಇದರಲ್ಲಿ ನೋಟುಗಳನ್ನ ಪುಟಗಳ ಚೌಕಟ್ಟಿನಲ್ಲಿಟ್ಟು ಅವುಗಳ ಮೇಲೆ ಪಾರದರ್ಶಕ ಅಂಟು ಕಾಗದವನ್ನು ಎಳೆದು ಒತ್ತಿ ಬಿಗಿ ಮಾಡಿದಾರೆ. ಸಭಾಪತಿ ಬಳಸಿರೋದು ವಿದೇಶಿ ಆಲ್ಬಮ್‌ಗಳು"

ಮೂರು ತಲೆಗಳೂ ಮೆಚ್ಚುಗೆಯಿಂದ ಆಡಿದವು.

"ಹೌದು, ನೋಟುಗಳನ್ನು ಹಾಳು ಮಾಡದ ಹಾಗೆ ಕಾಪಾಡಬೋದು. ಅಗತ್ಯ ಬಿದ್ದಾಗ ಅವುಗಳನ್ನ ಸ್ವಲ್ಪವೂ ಹರಿಯದ ಹಾಗೆ ತೆಗೆದುಬಿಡಬೋದು" ನಬಿ ಹೇಳಿದ.

"ಚೌಕಟ್ಟುಗಳಲ್ಲಿ ಹಳೆಯ ಗುರುತು ಸ್ವಲ್ಪವೂ ಇಲ್ಲ. ಭೂತಗನ್ನಡಿಯಲ್ಲಿ ಚೆನ್ನಾಗಿ ಕಾಣ್ತಾ ಇದೆ. ಅಂದರೆ ಅವುಗಳನ್ನು ಭರ್ತಿ ಮಾಡೊ ನೋಟುಗಳು ಇನ್ನೂ ಸಿಕ್ಕಿಲ್ಲ ಅನ್ನಬೋದು"

"ಒಂದು ಉಪಯುಕ್ತ ಅಭಿಪ್ರಾಯ"

ಕೃತಜ್ಞತೆ ಸೂಚಿಸಿದ ಫಾಸ್ಟರ್.

"ಅದ್ಭುತ ಸಂಗ್ರಹ ! ಸಭಾಪತಿ ಬಹಳ ವರ್ಷಗಳಿಂದ ತುಂಬಾ ಆಸ್ಥೆಯಿಂದ ಇವನ್ನ ಕೂಡಿಹಾಕಿರಬೇಕು. ಆಶ್ಚರ್ಯ ಅಂದರೆ ಸಭಾಪತಿಯಂತ ನೋಟುಗಳ ಸಂಗ್ರಹಕಾರ ಈ ಸಿಟಿಯಲ್ಲಿರೋದು ನನಗೆ ಗೊತ್ತೇ ಇರ್ಲಿಲ್ಲ. ನಮ್ಮಿಬ್ಬರದೂ ವ್ಯವಹಾರದ ಸರಕು ಒಂದೇ ಆಗಿದ್ರೂ ವ್ಯವಹಾರದ ರೀತಿಗಳೇ ಬೇರೆ. ಇಂತಾ ನೋಟುಗಳ ಸಂಗ್ರಹಕಾರರು ಸಿಟಿಯಲ್ಲಿ ಇನ್ನೂ ಎಷ್ಟು ಮಂದಿ ಇದ್ದಾರೊ ಗೊತ್ತಿಲ್ಲ....."

ಪುಟ ತಿರುವುತ್ತಿದ್ದವನು ಮಾತು ನಿಲ್ಲಿಸಿದ. ಅವನ ಸ್ಥಿರ ದೃಷ್ಟಿ ಯಾವುದರ ಮೇಲೊ ಇತ್ತು. ಕಲ್ಲಾಗಿ ಕುಳಿತಿದ್ದ ಬಣ್ಣದ ಚೂರು ಕಾಗದಗಳ ಹುಚ್ಚ.

ಅವನನ್ನೇ ಕುತೂಹಲದಿಂದ ಗಮನಿಸಿದ್ದ ಇನ್ಸ್‌ಪೆಕ್ಟರ್.

"ಏನಾದ್ರು ವಿಶೇಷ ?.....ಯಾವುದಾದ್ರು ಸುಳಿವು ದೃಷ್ಟಿಗೆ ಬಿತ್ತೆ, ಮಿಸ್ಟರ್ ವಾನಂಬಾಡಿ?"

ಅವನು ತೆರೆದಿದ್ದ ಆಲ್ಬಮ್ ಪುಟಗಳಲ್ಲಿ ಯಾವ ಚೌಕಟ್ಟೂ ಖಾಲಿ ಇರಲಿಲ್ಲ. ಎಲ್ಲವೂ ನೋಟುಗಳಿಂದ ಭರ್ತಿಯಾಗಿದ್ದವು.

"ಏನು ನೋಡ್ತಿದೀರಿ, ಮಿಸ್ಟರ್ ವಾನಂಬಾಡಿ?"

ಅವನನ್ನು ಎಚ್ಚರಗೊಳಿಸುವಂತೆ ಕಾತರದಲ್ಲಿ ಕೇಳಿದ ಅರ್ಥನಾರಿ. ಪ್ರಶ್ನೆ ಪುನರುಚ್ಚರಿಸಿದ ನಬಿ.

ಅನುಭವವಿಲ್ಲದ ಆರು ಕಣ್ಣುಗಳು ಆ ಪುಟದಲ್ಲಿ ಏನನ್ನೂ ಗ್ರಹಿಸಿರಲಿಲ್ಲ.

ಅದೇ ಘಳಿಗೆಯಲ್ಲಿ ವಾನಂಬಾಡಿಯ ತಲೆ ಒಂದು ದೊಡ್ಡ ಕಾರ್ಖಾನೆಯಾಗಿತ್ತು. ಮೇಜಿನ ತಳಭಾಗದಲ್ಲಿ ತೊಡೆಯ ಮೇಲಿದ್ದ ಎಡಗೈ ಉದ್ವೇಗದಿಂದ ಬಿಗಿದು ಗಂಟಾಗುತ್ತಿತ್ತು. ಏರಿದ ಉಸಿರಾಟದಲ್ಲಿ ಎದೆ ಮೆಲ್ಲನೆ ತೂಯುತ್ತಿತ್ತು.

"ಆ ಪುಟದಿಂದ ಯಾವ ನೋಟನ್ನೂ ತೆಗೆದಿಲ್ಲ. ಪ್ರತಿಯೊಂದು ಚೌಕಟ್ಟೂ ತುಂಬಿದೆ.....ಅಲ್ಲವೆ?" ಫಾಸ್ಟರ್ ಮೆಲ್ಲನೆ ಕೇಳಿದ.

ವಾನಂಬಾಡಿ 'ಹೌದು' ಸೂಚನೆಯಲ್ಲಿ ತಲೆ ಅಲುಗಿಸಲು ಅರ್ಧ ನಿಮಿಷ ಹಿಡಿಯಿತು.

"ಹೌದು, ಹಾಗೇ ಇರೋದು, ಪ್ರತಿಯೊಂದು ಚೌಕಟ್ಟೂ ತುಂಬಿದೆ....."

ಎಂದು ನಿಧಾನವಾಗಿ ತಲೆ ಎತ್ತಿ ಮೂವರನ್ನೂ ನೋಡಿದ.

"ಹೇಳಿ" ಉತ್ತೇಜಿಸಿದ ಫಾಸ್ಟರ್.

"ನಿಮ್ಮ ಸಹಾಯಕ್ಕೆ ನನ್ನ ಕರೆಸಿದ್ದು ಪ್ರಯೋಜನವಾಗಬೋದು. ಇನ್ನು ಈ ಆಲ್ಬಮ್‌ನಲ್ಲಿ ಮುಂದಿನ ಪುಟಗಳನ್ನು ತಿರುವಿ ಹಾಕದೆ ಒಂದು ಮುಖ್ಯ ವಿಷಯ ತಿಳಿಸಬಲ್ಲೆ. ಈ ಎರಡು ಪುಟಗಳಲ್ಲಿರೊ ಒಟ್ಟು ಹನ್ನೆರಡು ದೇಶಗಳ ನೋಟುಗಳ ಪೈಕಿ ಎಡಗಡೆ ಪುಟದ ಮಧ್ಯದಲ್ಲಿರೊ ಆ ನೋಟು ಪ್ರಪಂಚದಲ್ಲಿ ಅತ್ಯಂತ ಬೆಲೆ ಬಾಳೊ ನೋಟು"

"ಯಾವ ನೋಟು ಅದು?"

ಮೆರೂನ್ ರಂಗಿನ ನೋಟನ್ನು ಉತ್ಸಾಹದಿಂದ ಗುರ್ತಿಸಿದ್ದ ಫಾಸ್ಟರ್. ಆದರೆ ದೃಷ್ಟಿಯಲ್ಲಿ ಅರ್ಥಶೂನ್ಯತೆ.

"ನಿಮ್ಮ ಕಣ್ಣುಗಳಿಗೆ ಒಂದು ನೋಟಿನಿಂದ ಇನ್ನೊಂದು ನೋಟಿಗೆ ವ್ಯತ್ಯಾಸ ಕಾಣೋದಿಲ್ಲ. ಎಲ್ಲಾ ಬಣ್ಣದ ಕಾಗದಗಳು.....ನಾನು ಹೇಳ್ತಾ ಇರೋದು ಇಲ್ಲಿರೊ ಕುವೈತ್ ನೋಟಿನ ವಿಷಯ. ನಾನು ಊಹಿಸೋ ಹಾಗೆ ಸಭಾಪತಿ ಒಂದು ಕ್ರಮದಲ್ಲಿ ಈ ನೋಟುಗಳ ಸಂಗ್ರಹ ಮಾಡ್ತಿದ್ದ. ಬಹುಶಃ ಅವಕ್ಕೆಲ್ಲಾ ಒಂದು ಕ್ಯಾಟಲಾಗ್ ಇರ್ಬೇಕು.....ಇರಲೇಬೇಕು. ಒಂದು ನಿಮಿಷ ತಾಳ್ರಿ, ನನ್ನ ಊಹೆಯಂತೆ ಆ ವಸ್ತು ಇದೆಯಾ ನೋಡ್ತೀನಿ"

* * *

ವಾನಂಬಾಡಿ ಎದ್ದು ಎದುರು ಗೋಡೆಯ ಕಪಾಟಿನಲ್ಲಿ ಎರಡು

ನಿಮಿಷ ಹುಡುಕಿ ಒಂದು ಉದ್ದನೆಯ ಪುಸ್ತಕ ಎಳೆದು ಪುಟ ತಿರುವಿದ.

"ಇದು ನೋಟುಗಳ ವಿವರ ಇರೋ ಕ್ಯಾಟಲಾಗ್. ಪ್ರಪಂಚದ ಎಲ್ಲಾ ದೇಶಗಳ ನೋಟುಗಳ ಸಂಕ್ಷಿಪ್ತ ವಿವರಣೆ ಇದೆ"

ಎಂದು ಮತ್ತೆ ಪುಟ ತಿರುವಿ ಒಂದು ನಿಮಿಷ ಓದಿ ಹೇಳಿದ.

"ಕುವೈತ್ ದೇಶದ ನಾಣ್ಯ ದಿನಾರ್, ಇಲ್ಲಿ ಹೇಳಿರೋ ಹಾಗೆ ಒಂದು ದಿನಾರ್‌ನ ಅಧಿಕೃತ ಬೆಲೆ ಹದಿನಾರು ರೂಪಾಯಿಗಳು. ಇದು ಹಳೇ ದರ. ಆದರೆ ಈವತ್ತಿನ ಬೆಲೆಯಲ್ಲಿ ದಿನಾರ್‌ಗೆ ನಲವತ್ತೆರಡು ರೂಪಾಯಿಗಳು ..... ಅದು ಅಧಿಕೃತ ಬೆಲೆ. ಮಾರುಕಟ್ಟೆಯಲ್ಲಿ ಅರವತ್ತೈದು ರೂಪಾಯಿಗಳು"

"ನಮಗೆ ದಿನಾರ್ ವಿಷಯ ಗೊತ್ತಿರಲಿಲ್ಲ. ನಾವು ತಿಳಿದಿದ್ದು ಇಂಗ್ಲಿಷ್ ಪೌಂಡು ಬೆಲೆಯೆ ಅಧಿಕ ಅಂತ"

"ಹೆಚ್ಚಾಗಿ ಚಾಲ್ತಿಯಲ್ಲಿರೊ ಅಮೆರಿಕನ್ ಡಾಲರ್, ಇಂಗ್ಲಿಷ್ ಪೌಂಡುಗಳನ್ನೇ ಎಲ್ಲರೂ ಕೇಳಿರೋದು. ಆದರೆ ಅಮೆರಿಕಾ, ಇಂಗ್ಲೆಂಡ್‌ಗಳಲ್ಲೇ ಭಾರಿ ಮಾನ್ಯತೆ ಪಡೆದಿರೊ ಜನಪ್ರಿಯ ನಾಣ್ಯ ಅಂದ್ರೆ ಕುವೈತ್‌ನ ದಿನಾರ್. ಕೊಲ್ಲಿ ರಾಷ್ಟ್ರದ ಎಣ್ಣೆ ರಾಜರ ಪ್ರಭಾವ ಅಷ್ಟೊಂದು ಜೋರಾಗಿದೆ"

"ಇಲ್ಲಿರೋ ಕುವೈತ್ ನೋಟಿನಲ್ಲಿ ಈ ಪ್ರಕರಣವನ್ನ ಸೃಷ್ಟಿಸೋ ಶಕ್ತಿ ಏನಿದೆ?"

"ಈ ನೋಟ್‌ನಲ್ಲಿ ಶಕ್ತಿ ಇದೆಯೋ ಇಲ್ಲವೋ ಹೇಳಲಾರೆ. ಆದರೆ ಇದರ ಮೌಲ್ಯ ಭಾರೀದು. ಇಲ್ಲಿರೋದು ಮೂವತ್ತೇಳು ವರ್ಷಗಳ ಹಿಂದಿನ ಕುವೈತ್ ನೋಟು. ಅದೂ ಸಾವಿರದ ದಿನಾರ್ ಮೌಲ್ಯದ ನೋಟು ಅಲ್ಲಿ ಚಲಾವಣೆಯಲ್ಲಿಲ್ಲ. ಅದನ್ನ ನಲವತ್ತೆಂಟನೇ ಇಸವಿಯಲ್ಲಿ ಹಿಂದಕ್ಕೆ ತೊಗೊಳ್ತು ಸರ್ಕಾರ. ಆದರೆ ಈ ಘಳಿಗೆಗೂ ಮೆರೂನ್‌ಬಣ್ಣದ ಈ ಸಾವಿರ ದಿನಾರ್ ಮೌಲ್ಯದ ಒಂದು ನೋಟಿಗೆ ಒಂದು ಲಕ್ಷ ರೂಪಾಯಿ

ಕೊಡೊ ಷೋಕಿ ಶ್ರೀಮಂತರು ಇದ್ದಾರೆ"

"ಚಲಾವಣೆಯಲ್ಲಿಲ್ಲದ ನೋಟಿಗೆ ಅಷ್ಟೊಂದು ಬೆಲೆ!"

ಉದ್ಗಾರ ಎತ್ತಿದ ಅಧಿಕಾರಿ.

"ಹೇಳಿದೆನಲ್ಲಾ ಅದಕ್ಕೆ ಷೋಕಿ ಸಾಹುಕಾರರು ಇದಾರೇಂತ. ಕುವೈತ್‌ನ ನೋಟು ದ್ರಾಕ್ಷಾರಸದ ಹಾಗೆ. ಹಳೆಯದಾದಷ್ಟೂ ಬೆಲೆ ಏರುತ್ತೆ. ಇಲ್ಲಿರೋ ನೋಟನ್ನ ಖರೀದಿ ಮಾಡೊ ಏಜೆಂಟರು ಈ ದೇಶದಲ್ಲೇ ಸಿಗ್ತಾರೆ"

"ನಮಗೆ ತಮಾಷೆಯಾಗೇ ಕಾಣತ್ತೆ. ಒಂದು ತುಂಡು ಬಣ್ಣದ ಕಾಗದಕ್ಕೆ.....!"

"ನಾನು ಒಂದು ಲಕ್ಷ ಅಂತ ಹೇಳಿದ್ದು ಒಂದು ಸಾಮಾನ್ಯ ಊಹೆಯ ಸಂಖ್ಯೆ. ಆ ಬೆಲೆ ಇನ್ನೂ ಜಾಸ್ತಿ ಇರಬೋದು. ನಾನು ಕೇಳಿದ ಹಾಗೆ ಈ ಮೌಲ್ಯದ ಹಳೇ ನೋಟುಗಳು ಈಗ ಮೂರು ಮಾತರ ಉಳಿದಿವೆ. ಒಂದು ಮಸ್ಕಾಟ್‌ನಲ್ಲಿ, ಮತ್ತೊಂದು ರಿಯಾದ್‌ನಲ್ಲಿ ಸೇರಿವೆ. ಮೂರನೆಯದು ಪ್ರಾಚೀನ ವಸ್ತುಗಳ ಮಧ್ಯೆ ದುಬಾಯ್‌ನಲ್ಲಿ ಹರಾಜಾಗಿತ್ತು. ಬಹುಶಃ ಈ ನೋಟು ಅದೇ ಆಗಿರ್ಬೋದು. ಆದರೆ ಈಗ ನಾನು ಹೇಳಿದ್ದೆಲ್ಲಾ ಒಂದು ಬಹಳ ಮುಖ್ಯವಾದ ಅಂಶದ ಮೇಲೆ ನಿಂತಿದೆ.....ಈ ನೋಟಿಗೆ ಆ ಮೌಲ್ಯ ಇರೋದು.....ಇದು ಅಸಲಿ ಕುವೈತ್ ನೋಟು ಆಗಿದ್ರೆ ಮಾತ್ರ"

ಸಾಮೂಹಿಕ ನಿಟ್ಟುಸಿರು ಬಂತು.

"ಇದು ಸಾಚಾ ನೋಟು ಅಲ್ಲವೆ?"

ಅರ್ಥನಾರಿಯ ನಿರ್ವಿಕಾರ ಪ್ರಶ್ನೆ.

"ಎಲ್ಲಾ ದೇಶದಲ್ಲೂ ಒಂದೇ ಹಣೆಬರಹ. ಸಾಚಾ ನೋಟುಗಳೊಂದಿಗೆ ಖೋಟಾ ನೋಟುಗಳು ತಪ್ಪಿದ್ದಲ್ಲ. ಕುವೈತ್‌ನ ಖೋಟಾ ದಿನಾರ್‌ಗಳೂ ನಮ್ಮ ದೇಶದಲ್ಲಿ ಬೇಕಾದಷ್ಟಿವೆ"

ಹಾಗೆನ್ನುವಾಗ ಅವನಿಗೆ ಹಿಂದಿನ ಅನುಭವದ ನೆನಪಾಗಿ ಎದೆಯಲ್ಲಿ

ನೋವಿನ ಎಳೆ ಕಾಣಿಸಿತು. ಖೋಟಾ ನೋಟು ಖರೀದಿಸಿದ ಕಹಿ ನೆನಪು!

ನಬಿಯ ಮಾತು ಮಧ್ಯೆ ಬಂತು.

"ನೋಟಿಗೋಸ್ಕರವಾಗಿ ಕೊಲೆ ನಡೆದಿಲ್ಲ. ಯಾಕೇಂದ್ರೆ ನೋಟು ಕಳುವಾಗಿಲ್ಲ. ಕೊಲೆ ನೋಟಿನ ಸಲುವಾಗಿ ನಡೆದಿದ್ರೆ ಸಾಚಾ ನೋಟು ಆಲ್ಬಮ್‌ನಲ್ಲಿ ಉಳಿದಿರ್ತಾ ಇರ್ಲಿಲ್ಲ. ಆದ್ದರಿಂದ ಇಲ್ಲಿರೋದು ಒಂದು ಖೋಟಾ ನೋಟು"

ಫಾಸ್ಟರ್ ಪಕ್ಕನೆ ತಜ್ಞನ ಕಡೆ ತಿರುಗಿದ.

"ಮಿಸ್ಟರ್ ವಾನಂಬಾಡಿ, ಈಗ ಹೇಳಿ. ಇದು ಸಾಚಾ ನೋಟೋ, ಅಥವಾ ಖೋಟಾ ನೋಟೋ?"

ನೆಮ್ಮದಿಗೆಟ್ಟ ಮುಖ ಮಾಡಿದ ವಾನಂಬಾಡಿ.

"ಹೇಳೋದಿಕ್ಕೆ ಆಗೋದಿಲ್ಲ. ಬರಿಗಣ್ಣಿನಿಂದ ಎಷ್ಟು ನೋಡಿದರೂ ಅಷ್ಟೆ ಭೂತಗನ್ನಡಿ ಬಳಸಿದರೂ ಅಷ್ಟೆ ವಾಟರ್ ಮಾರ್ಕ್ ಡಿಟೆಕ್ಟರ್‌ನಿಂದಲೇ ಪತ್ತೆ ಮಾಡ್ಬೇಕು"

ಆ ಮೂವರ ಮುಂದಿನ ಪ್ರಶ್ನೆಗಳ ದಾಳಿಗಳನ್ನ ಡೆಯುವಂತೆ ತಾಳ್ಮೆಗೆಟ್ಟು ಕೈ ಎತ್ತಿದ.

"ಈ ನೋಟು ಇನ್ನೂ ಆಲ್ಬಮ್‌ನಲ್ಲಿ ಉಳಿದಿರೋದ್ರಿಂದ, ಮಿಸ್ಟರ್ ನಬಿ ಹೇಳಿದ ಪ್ರಕಾರ ನಿಮ್ಮ ಊಹೆ ಏನೂಂತ ಹೇಳಬಲ್ಲೆ. ಕೊಲೆಯಲ್ಲಿ ನೋಟುಗಳ ಪಾತ್ರ ಯಾವುದೂ ಇಲ್ಲ. ಅವುಗಳನ್ನು ಕದಿಯೋದು ಕೊಲೆಯ ಉದ್ದೇಶ ಆಗಿರ್ಲಿಲ್ಲ. ನೀವು ಖಂಡಿತ ಅಂತಾ ನಿರ್ಧಾರ ತಗೋಬಹುದು ..... ನೋಟಿಗೋಸ್ಕರವಾಗಿಯೇ ಆ ಮನುಷ್ಯ ಬಂದಿದ್ರೆ ಬೆಲೆಬಾಳಬಹುದಾದ ಈ ನೋಟನ್ನು ಇಲ್ಲಿ ಬಿಡ್ತಾ ಇರ್ಲಿಲ್ಲ. ಯಾಕೆ ಬಿಟ್ಟಿದಾನೆ ಅಂದ್ರೆ....."

ಫಾಸ್ಟರ್ ವಾಕ್ಯ ಪೂರೈಸಿದ.

"ಯಾಕೆ ಬಿಟ್ಟಿದಾನೆ ಅಂದ್ರೆ ಇದೊಂದು ಖೋಟಾ ನೋಟು. ಆ ಮನುಷ್ಯ ಸಭಾಪತಿಯನ್ನ ಉಸಿರು ಕಟ್ಟಿ ಸಾಯೋ ಹಾಗೆ ಮಾಡಿದ ಮೇಲೆ ಇದು ಖೋಟಾ ನೋಟು ಅಂತ ತಿಳಿದಿದಾನೆ. ಇದನ್ನ ಒಯ್ಯೋದಿಕ್ಕೆ ಪ್ರಯತ್ನವೇ ಮಾಡ್ಲಿಲ್ಲ"

"ಇರಬೋದು, ನನಗೂ ಬರಿಗಣ್ಣಿನಿಂದ ನೋಡಿ ಏನೂ ಹೇಳೋದಿಕ್ಕೆ ಆಗೋದಿಲ್ಲ"

ವಾನಂಬಾಡಿ ಸುಳ್ಳು ಹೇಳಿದ್ದ. ಬರಿಗಣ್ಣಿನಿಂದ ನೋಡಿಯೇ ಒಂದು ನಿರ್ಧಾರಕ್ಕೆ ಬಂದಿದ್ದ ಅನುಭವಿ. ಸಭಾಪತಿಯ ಆಲ್ಬಮ್‌ನಲ್ಲಿರುವುದು ಸಾಚಾ ಕುವೈತ್ ನೋಟು!

ಅದೇ ಘಳಿಗೆಯಲ್ಲೇ ಅವನಿಗೆ ತನ್ನಲ್ಲಿದ್ದ ನೋಟುಗಳ ಚಿಕ್ಕ ಸಂಗ್ರಹದ ಚಿತ್ರವೂ ತಲೆಯಲ್ಲಿ ಹಾದು ಬಂತು. ಅದರಲ್ಲೂ ಒಂದು ಸಾವಿರದ ಮೌಲ್ಯದ ಕುವೈತ್ ನೋಟು. ಆದರೆ ಅದು ಖೋಟಾ ನೋಟು!

ಎದುರಿನಲ್ಲಿರುವುದು ಸಾವಿರ ದಿನಾರ್ ಆಣೆಗೂ ಸತ್ಯವಾದ ಅಸಲಿ ಕುವೈತ್ ನೋಟು!

ಈ ನೋಟಿಗೆ ಮಧ್ಯದಲ್ಲಿ ಉದ್ದಕ್ಕೂ ಒಂದು ಮಡಿಕೆಯ ಗೆರೆ ಇದೆ. ತನ್ನಲ್ಲಿರುವ ಖೋಟಾ ನೋಟು ಮಡಿಕೆಯೇ ಇಲ್ಲದ ಒಂದು ಹೊಸ ನೋಟು.

"ಅದೇನು ವಾಟರ್ ಮಾರ್ಕ್ ಡಿಟೆಕ್ಟರ್ ಅಂದ್ರಲ್ಲಾ?"

ಅವನ ಮಾಸಲು ಕನಸನ್ನು ಭಂಗಿಸಿದ ಫಾಸ್ಟರ್.

"ಬೆಲೆ ಬಾಳೋ ಅಸಲಿ ನೋಟುಗಳಲ್ಲಿರೋ ಜಲ ಚಿಹ್ನೆಯನ್ನು ಪತ್ತೆ ಮಾಡೋ ಸಾಧಕ. ಕೊಲೆಗಾರ ಈ ನೋಟನ್ನ ಆಲ್ಬಮ್‌ನಿಂದ ತೆಗೆದು ವಾಟರ್ ಮಾರ್ಕ್ ಡಿಟೆಕ್ಟರ್‌ನಲ್ಲಿ ಹಾಕಿ ಪರೀಕ್ಷೆ ಮಾಡಬೇಕಾಗಿತ್ತು. ಆದರೆ ಆಲ್ಬಮ್‌ನಿಂದ ಇದನ್ನ ತೆಗೆಯಲೇ ಇಲ್ಲ"

ವಿಷಯವನ್ನು ಅಲ್ಲಿಗೇ ಮುಕ್ತಾಯ ಮಾಡುವಂತೆ ಕಂಡಿದ್ದ ಫಾಸ್ಟರ್

ವಿಷಯದಲ್ಲಿ ಆಸಕ್ತಗೊಂಡ.

"ನೀವು ಮನಶಾಸ್ತ್ರವನ್ನ ಬಳಸ್ತಾ ಇಲ್ಲ. ಮಿಸ್ಟರ್ ವಾನಂಬಾಡಿ. ನಾವು ಮತ್ತೆ ವಿಷಯಕ್ಕೆ ಭದ್ರವಾಗಿ ನಿಲ್ಲಬೇಕಾಗತ್ತೆ. ಇದು ಅಸಲಿ ನೋಟು ಅಂತ ಭಾವಿಸೋಣ. ಇಂತಾ ನೋಟುಗಳು ಮೂರು ಮಾತ್ರ ಇವೆ ಅಂದ್ರಿ. ಈ ನೋಟನ್ನ ಒಯ್ಯಬಹುದಾದ ಮನುಷ್ಯ ಸುಲಭವಾಗಿ ಲಕ್ಷ ರೂಪಾಯಿ ಪಡೆಯೋದು ಸಾಧ್ಯವೆ? ಇದು ಅಪಾಯಕಾರಿ ನೋಟು. ಇದನ್ನು ಬೇಗ ಗುರುತು ಹಿಡಿಬೋದು. ಮಾರಾಟ ಮಾಡೋವಾಗ ನೋಟುಗಳ ವಲಯದಲ್ಲಿ ಇದೊಂದು ಭಾರಿ ಸುದ್ದಿ ಎಬ್ಬಿಸೋದಿಲ್ಲವೆ? ಒಂದು ರೀತಿಯಲ್ಲಿ ಕೋಹಿನೂರು ವಜ್ರ ಕದ್ದು ಮಾರೋದಿಕ್ಕೆ ಪ್ರಯತ್ನ ಪಟ್ಟ ಹಾಗೆ"

"ನೀವು ಹೇಳಿದ್ದು ಸರಿ. ಆ ಮನುಷ್ಯ ಯಾರೇ ಆಗಿರಲಿ, ಅವನೊಬ್ಬ ಮೂರ್ಖ ಆಗಿರಲಾರ. ಇದನ್ನ ತಗೊಂಡು ಹೋದ್ರೆ ಕೆಂಡವನ್ನು ಉಡಿಯಲ್ಲಿ ಇಟ್ಟುಕೊಂಡ ಹಾಗೆ ಅಂತ ತಿಳಿದೇ ಅವನು ಇದನ್ನ ಬಿಟ್ಟು ಹೋಗಿರ್ಬೇಕು.....ಸಾಚಾ ನೋಟು ಆಗಿದ್ರೆ ಅಂತಾ ತಾಪತ್ರಯ. ಖೋಟಾ ನೋಟು ಆಗಿದ್ರೆ ಚಿಂತೆಯೇ ಇಲ್ಲ. ಅದೆಲ್ಲಾ ತಿಳಿದೇ ಬಿಟ್ಟು ಹೋಗಿದ್ದಾನೆ .....ಮಿಸ್ಟರ್ ಫಾಸ್ಟರ್, ಈ ಕುವೈತ್ ನೋಟು ನೋಡಿ ನಾನು ಸ್ವಲ್ಪ ಹೆಚ್ಚಾಗಿ ಹೇಳಿದ್ದರಿಂದ ನಾವು ಇಷ್ಟೆಲ್ಲಾ ಚರ್ಚೆ ಮಾಡಬೇಕಾಯ್ತು, ಆ ನೋಟು ಮರೆತುಬಿಡೋಣ. ಬೇರೆ ಎಷ್ಟೋ ನೋಟುಗಳು ಇದರಲ್ಲಿವೆ. ದಿನಾರ್ ನೋಟಿಗಿಂತ ಕಡಿಮೆ ಮೌಲ್ಯದ್ದಾಗಿದ್ರೂ ಅವು ಬೆಲೆ ಬಾಳೋ ನೋಟುಗಳೇ"

"ಹೌದು, ಬೆಲೆ ಬಾಳೋ ಬೇರೆ ನೋಟುಗಳನ್ನ ಕೊಲೆಗಾರ ಈ ಆಲ್ಬಮ್‌ಗಳಿಂದ ಒಯ್ದಿದ್ರೆ ಹೆಚ್ಚಲ್ಲ. ಅವನ್ನ ಇಯ್ದು ಮಾರಾಟ ಮಾಡೊದ್ರಿಂದ ಅವನಿಗೆ ಸಿಕ್ಕಿ ಬೀಳೊ ತೊಂದರೆ ಇಲ್ಲ.....ನಾನು ಈಗ ಹೇಳೋದು ಇಷ್ಟೇ."

"ನೀವು ಮೂರು ಆಲ್ಬಮ್‌ಗಳಲ್ಲಿ ಇನ್ನೂ ನಿಧಾನವಾಗಿ, ಆಳವಾಗಿ

ಮೊದಲಿನಿಂದ ಕಡೆವರೆಗೆ ನೋಡಿ ಬೇರೆ ಯಾವ ನೋಟುಗಳು ಕಳುವಾಗಿವೆ ಅನ್ನೋದು ಪತ್ತೆ ಮಾಡಿ"

ವಾನಂಬಾಡಿಯ ದೃಷ್ಟಿ ಮತ್ತೊಮ್ಮೆ ಆ ಪುಟದಲ್ಲಿದ್ದ ಮೆರೂನ್ ರಂಗಿನ ನೋಟು ಸೆಳೆತಕ್ಕೆ ಸಿಕ್ಕಿತು. ದೃಷ್ಟಿಯಲ್ಲೇ ಕಂಪನ. ಎದೆಯಲ್ಲಿ ಏನೋ ತುಂಬಿಕೊಂಡು ಕತ್ತಿನವರೆಗೆ ಏರಿ ಬಂದ ಹಾಗೆ..... ಏಕಾಏಕಿ ತಾನೇ ಹಕ್ಕಿಯ ಹಾಗೆ ಹಗುರವಾದಂತೆ.....ಕಾರಣ ಅವನಿಗೆ ಸಾವಿರ ದಿನಾರ್‌ಗಳ ನೋಟು ಬರೇ ಬಣ್ಣದ ಕಾಗದವಲ್ಲ. ಅದೊಂದು ಸತ್ಯವಾದ ಐಶ್ವರ್ಯದ ಸೀಮೆ.

ಅಯಸ್ಕಾಂತ ಸೆಳೆತ ಹೂಡಿದ್ದ ಆ ನೋಟು ಅವನ ದೃಷ್ಟಿ ಕದಲಿಸಿತು.

ವಾನಂಬಾಡಿ ಏಕಾಏಕಿ ದೃಢ ನಿರ್ಧಾರಕ್ಕೆ ಬಂದಿದ್ದ ! ಯಾರಿಗೂ, ಎಂದೂ ತೋರದಿದ್ದ ಕಿರು ನಗೆಯೊಂದನ್ನು ಇನ್ಸ್‌ಪೆಕ್ಟರ್ ಕಡೆಗೆ ಹಾಕಿದ.

"ಆ ಕೆಲಸ ಮಾಡ್ತೀನಿ, ಇನ್ಸ್‌ಪೆಕ್ಟರ್"

ಎಂದು ಕುರ್ಚಿಯನ್ನು ಮೇಜಿಗೆ ಮತ್ತಷ್ಟು ಸಮೀಪವಾಗಿ ಎಳೆದುಕೊಂಡ.

"ದಯವಿಟ್ಟು ಮಾಡಿ" ಪ್ರತಿ ನಗೆ ತೋರಿದ.

"ಇಂಗ್ಲಿಷ್ ಅಕ್ಷರಗಳ ಕ್ರಮದಲ್ಲಿ ಪ್ರಾರಂಭ ಮಾಡ್ತೀನಿ. ಒಂದು ದೇಶವನ್ನೂ ಬಿಡದ ಹಾಗೆ ಆಲ್ಬಮ್‌ಗಳಲ್ಲಿ ಚೆಕ್ ಮಾಡ್ತೀನಿ. ಅದೇ ಸರಿಯಾದ ರೀತಿ"

"ಓಕೆ"

ವಾನಂಬಾಡಿ ಕ್ಯಾಟಲಾಗ್ ಬಿಚ್ಚಿ ತೋರಿದ.

"ನೋಡಿ, ಇನ್ಸ್‌ಪೆಕ್ಟರ್, ಈ ಕ್ಯಾಟಲಾಗ್‌ನಲ್ಲಿರೋ ದೇಶಗಳ ಪಟ್ಟಿಯಲ್ಲಿ ಕೆಲವಕ್ಕೆ ಪೆನ್ಸಿಲ್‌ನಿಂದ ಸಣ್ಣದಾಗಿ ಗುರುತು ಮಾಡಿದೆ. ಹಾಗೆ ಗುರುತು ಮಾಡಿರೋ ದೇಶಗಳ ನೋಟುಗಳ ಸಂಗ್ರಹಕಾರರು ಈ ಕ್ರಮ ಅನುಸರಿಸುತ್ತಾರೆ. ಅದು ಸುಲಭವೂ ಹೌದು.....ಕ್ಯಾಟಲಾಗ್‌ನಲ್ಲಿರೊ

ಪೆನ್ಸಿಲ್ ಗುರುತು ನೋಡ್ಕೊಂಡು ಆಲ್ಬಮ್‌ನಲ್ಲಿ ಚೆಕ್ ಮಾಡೋದು"

"ಅಷ್ಟೇ ಆದರೆ ನಮ್ಮಲ್ಲಿ ಯಾರಾದ್ರು ಆ ಕೆಲಸ ಮಾಡ್ತಾರೆ. ನಿಮಗೆ ತೊಂದರೆ ಕೊಡಬೇಕಾಗಿಲ್ಲ ನಾವು"

ಉದ್ರೇಕ, ಮಹದಾಸೆಯನ್ನು ಬಿಗಿ ಹಿಡಿದಿದ್ದ ವಾನಂಬಾಡಿ ಒದಗಿ ಬಂದಿದ್ದ ಸನ್ನಿವೇಶದ ಎಳೆಯನ್ನು ಕತ್ತರಿಸಲು ಸಿದ್ಧನಾಗಿರಲಿಲ್ಲ.

"ಆದರೆ ನಿಮಗೆ ಮೂರು ಪಟ್ಟು ವೇಗದಲ್ಲಿ ನಾನು ಆ ಕೆಲಸ ಮಾಡ್ತೀನಿ. ಒಂದೇ ನೋಟಕ್ಕೆ ನೋಟುಗಳ ಜಾತಕ ಓದಿ ಹೇಳೋನು ನಾನು. ನೀವು ಆ ಕೆಲಸಕ್ಕೆ ಕುಳಿತರೆ ಪ್ರತಿ ನೋಟಿನ ಬಣ್ಣ, ಅದನ್ನ ಚಲಾವಣೆಗೆ ಹಾಕಿದ ವರ್ಷ, ಬೆಲೆ ಎಲ್ಲವನ್ನೂ ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕಾಗತ್ತೆ. ಅಂತಾ ಕೆಲಸ ನನಗೆ ಬಹಳ ಸುಲಭ. ಅದು ನನಗೆ ಆಯಾಸದ ಕೆಲಸವೂ ಅಲ್ಲ..... ಇದು ಬೇರೊಬ್ಬನ ನೋಟುಗಳ ಸಂಗ್ರಹವೇ ಆಗಿದ್ರೂ ಅದರ ವಿಷಯದಲ್ಲಿ ಕೆಲಸ ಮಾಡೋದು ನನಗೆ ಸಂತೋಷ. ಅದು ನನ್ನ ಬದುಕಿಗೆ ಹತ್ತಿ ಬಂದದ್ದು. ನನಗೆ ಅನ್ನಿಸುತ್ತೆ ನಾನು ಎರಡು ಸಾರಿ ಕುಳಿತರೆ ಈ ಮೂರು ಆಲ್ಬಮ್‌ಗಳನ್ನ ಮುಗಿಸಿ ಬಿಡಬಲ್ಲೆ"

ಇನ್ಸ್‌ಪೆಕ್ಟರ್‌ನ ಉತ್ತರಕ್ಕೆ ಕಾಯದೆ ವಾನಂಬಾಡಿ ಸ್ವೆಟರ್ ಬಿಚ್ಚಿ ಕುರ್ಚಿಯ ಹಿಂಭಾಗಕ್ಕೆ ಹಾಕಿ ಭೂತಗನ್ನಡಿಯನ್ನು ಕರವಸ್ತ್ರದಿಂದ ಉಜ್ಜಿ ಕಾರ್ಯದಲ್ಲಿ ಮುಳುಗಿ ಹೋದ.

ಮೂವರೂ ಅವನ ಕೆಲಸದಿಂದ ಆಕರ್ಷಿತರಾದವರಂತೆ ಕುತೂಹಲ ದಿಂದ ಕೆಲವು ನಿಮಿಷಗಳ ಕಾಲ ವೀಕ್ಷಿಸಿದರು. ದೃಶ್ಯದ ನೂತನತೆ ಅಷ್ಟೇ ಬೇಗನೆ ಸವೆದು ಹೋಯಿತು.

ವಾನಂಬಾಡಿಯ ಒಂದು ಕೈ ಬೆರಳು ಕ್ಯಾಟಲಾಗ್‌ನಲ್ಲಿದ್ದು ಮತ್ತೊಂದು ಕೈ ಬೆರಳು ಆಲ್ಬಮ್‌ಗಳಲ್ಲಿನ ನೋಟುಗಳ ಮೇಲಿತ್ತು. ದೃಷ್ಟಿ ಕ್ಯಾಟಲಾಗ್ ಹಾಗೂ ಆಲ್ಬಮ್‌ಗಳ ನಡುವೆ ಸರಿದಾಡುತ್ತಿತ್ತು. ಮಧ್ಯೆ ಆಳವಾದ ವೀಕ್ಷಣೆಗೆ

ಭೂತಗನ್ನಡಿಯ ಬಳಕೆ.

ಸೊರ್ರನೆ ಉಸಿರೆಳೆದು ಅವನ ಚಿತ್ತತೆ ಕದಲಿಸಿದ ಫಾಸ್ಟರ್.

"ಎಸ್?"

ತಲೆ ಎತ್ತಿದ ಬಣ್ಣದ ಕಾಗದಗಳ ತಜ್ಞ.

"ನಿಮ್ಮ ವಯಸ್ಸೇನು. ಮಿಸ್ಟರ್ ವಾನಂಬಾಡಿ?"

"ಅರವತ್ತೆರಡು.....ಯಾಕೆ ಕೇಳಿದ್ರಿ?"

"ಕನ್ನಡಕ ಬಳಸೋದಿಲ್ಲವೆ ನೀವು?"

"ಇಲ್ಲ"

"ಫಂಟಾಸ್ಟಿಕ್ ! ಅದ್ಭುತ ವ್ಯಕ್ತಿ ನೀವು"

ಹೊಗಳಿಕೆಗೆ ಕಿಂಚಿತ್ತೂ ಪ್ರತಿಕ್ರಿಯೆ ತೋರದೆ ಕಾರ್ಯದಲ್ಲಿ ತಲೆ ಹೂಡಿದ ವಾನಂಬಾಡಿ.

ಮೂವರ ಆಸಕ್ತಿ ಬೇಗನೆ ಕರಗಿ ಹೋಯಿತು. ಅವರಿಗೂ ತಮ್ಮ ಕೆಲಸಗಳಿಗೆ ಗಮನ ಕೊಡುವುದಿದ್ದು ಒಬ್ಬೊಬ್ಬರೇ ಆ ಸ್ಥಳದಿಂದ ಹೊರಟರು. ಕಡೆಯಲ್ಲಿ ಹೊರಟ ಫಾಸ್ಟರ್ ಅವನತ್ತ ಕತ್ತು ಬಾಗಿಸಿದ.

"ಏನಾದ್ರೂ ವಿಶೇಷ ಗಮನಿಸಿದರೆ ನನ್ನ ಕೂಗಿ. ಮೇಲುಗಡೆ ಇರ್ತೀನಿ. ಇನ್ನೂ ಪ್ರಶ್ನೆ ಮಾಡೋ ಕೆಲಸ ಮುಗಿದಿಲ್ಲ"

ವಾನಂಬಾಡಿ ಮೇಲಕ್ಕೆ ನೋಡದೆ ಹಾಗೆಯೇ ತಲೆ ಆಡಿಸಿದ.

* * *

ಆ ಕೋಣೆಯಲ್ಲಿ ಅವನು ಕಾರ್ಯದಲ್ಲಿ ಏಕಾಗ್ರಚಿತ್ತನೆಂಬ ಭಾವನೆ ಪೊಲೀಸರಿಗೆ ಇದ್ದಿರಬೇಕು. ಆದರೆ ಅವನು ಆ ಭಾವನೆಯನ್ನು ಮರೆತೂ ಹೊಂದಿರಲಿಲ್ಲ. ಅವನ ದೇಹದಲ್ಲಿನ ಪ್ರತಿಯೊಂದು ನರವೂ ಅಂತಹ ಏಕಾಂಗಿತನಕ್ಕಾಗಿ ಹಾತೊರೆದಿತ್ತು.

"ಮೂರ್ಖರು!"

ನಿರ್ದಯವಾಗಿ ತನ್ನಲ್ಲೇ ಆ ಮೂವರನ್ನೂ ಜರಿದ ವಾನಂಬಾಡಿ, ಕ್ಯಾಟಲಾಗ್‌ನಿಂದ ಆಲ್ಬಮ್‌ವರೆಗೆ ಯಾಂತ್ರಿಕವಾಗಿ ಬೆರಳು ಹರಿಸುತ್ತಾ ಮತ್ತೊಮ್ಮೆ ಘೂತ್ಕರಿಸಿದ .....ಹೆಡ್ಡರು!

ನೋಟುಗಳ ತಜ್ಞ ಮಾತ್ರವಲ್ಲ, ನೋಟುಗಳ ವ್ಯಾಪಾರಿ ಎಂಬುದನ್ನು ತಿಳಿದೂ, ತನ್ನ ಮೇಲೆ ಸ್ವಲ್ಪವೂ ಗಮನವಿಡದೆ ಕೋಣೆಯಲ್ಲಿ ದೊಡ್ಡ ಮೊತ್ತದ ಅಮೂಲ್ಯ ನೋಟಿನೊಂದಿಗೆ ಏಕಾಂಗಿಯಾಗಿ ಬಿಟ್ಟು ಹೋದ ಆ ಪೊಲೀಸ್ ಮಂದಿ ನಿಜಕ್ಕೂ ಮುಟ್ಠಾಳರು!

ಅವನು ಅನಿಶ್ಚಿತತೆಯಲ್ಲಿ ತುಸು ಕದಲಿದ. ಪೊಲೀಸ್ ತನ್ನಲ್ಲಿ ಪೂರ್ಣ ನಂಬಿಕೆ ಇಟ್ಟಿರಲಾರರು. ಅವರು ಅರಿವಿದ್ದೂ, ಅರಿವಿಲ್ಲದೆಯೊ ಹಾಗೆ ಇಬ್ಬನನ್ನೇ ಬಿಟ್ಟು ಹೋಗಲು ಕಾರಣವಿರಬೇಕು.....ಛೇ, ತಾನೇಕೆ ಸಂಶಯ, ಊಹೆಗಳಿಗೆ ತೊಡಗಬೇಕು? ಅವರಿಗೆ ಸನ್ನಿವೇಶದ ಅರ್ಥವಾಗಿಲ್ಲ.

ವಾನಂಬಾಡಿ ಕುವೈತ್ ಹೆಸರಿಗೆ ಮೊದಲು ಇದ್ದ ಕೆನ್ಯಾದವರೆಗೆ ತಲುಪಿದ್ದಾಗಿತ್ತು. ಆಗ ಅವನಿಗೆ ರಾತ್ರಿ ಅಧಿಕವಾಯಿತೆನಿಸಿತು. ಸ್ಥಳದಿಂದ ಹೊರಡಬೇಕೆನಿಸಿತು.

ಆಲ್ಬಮ್ ಮುಚ್ಚುವ ಮೊದಲು ಅವನು ಮಾಡಿದ ಕಡೆಯ ಕೆಲಸವೆಂದರೆ, ಕುವೈತ್ ನಂತರದ ಎರಡು ಪುಟಗಳನ್ನು ದಾಟಿ ಪುಟಗಳ ಮಧ್ಯೆ ನೆನಪಿನ ಗುರುತಾಗಿ ಕಾಗದದ ಮಡಿಕೆಯೊಂದನ್ನಿಟ್ಟು ಆ ಮಹತ್ತರ ಸೆಳೆತದ ಕುವೈತ್ ನೋಟನ್ನು ಮತ್ತೊಮ್ಮೆ ನೋಡಿದ ಅದೊಂದು ದೀರ್ಘವಾದ, ಕಾಲಹರಣದ ನೋಟ. ಬಣ್ಣದ ಹುಳುವಿನ ಯಾತನಾಮಯ ನೋಟ!

ಶ್ರೀಮಂತ ಬಣ್ಣದ ಕಾಗದದತ್ತ ಗಂಭೀರವಾಗಿ, ಮಹತ್ತರ ಆಸೆಯಲ್ಲಿ ಪ್ರಶ್ನೆ ಉಸಿರಿದ.

"ನನ್ನಲ್ಲಿರೋದು ಖೋಟಾ.....ನೀನು ಅಸಲಿ ವಸ್ತುವೆ?"

ಅವನು ಬಲ್ಲ.....ಅದು ಅಸಲಿ ನೋಟು. ಅದರೂ ಒಮ್ಮೆ

ಪರೀಕ್ಷಿಸಬೇಕು. ನೋಟಿನ ಸತ್ಯತೆಯನ್ನು ಕಂಡು ಹಿಡಿಯಲು ಇದ್ದುದು ಒಂದೇ ದಾರಿ ಅದರ ಜಲ ಚಿಹ್ನೆಯ ಪರೀಕ್ಷೆ. ಎಲ್ಲಾ ದೇಶಗಳ ದೊಡ್ಡ ಮೌಲ್ಯದ ನೋಟುಗಳಿಗೆ ಯಾವುದಾದರೂ ಜಲ ಚಿಹ್ನೆ ಇದ್ದೇ ಇರುತ್ತದೆ. ಅದು ನೋಡುಗಳ ಸತ್ಯತೆಯ ಏಕೈಕ ಗುರುತು. ಮೂವತ್ತೇಳು ವರ್ಷಗಳ ಹಿಂದೆ ಕುವೈತ್ ಸರ್ಕಾರ ಹಿಂದಕ್ಕೆ ತೆಗೆದುಕೊಂಡ ಸಾವಿರದ ಮೌಲ್ಯದ ನೋಟಿಗೆ ಇದ್ದ ಜಲಚಿಹ್ನೆ ಎಂದರೆ, ನೇರವಾಗಿ ನಿಂತ ಅರ್ಧಚಂದ್ರ. ಅದರ ಪಕ್ಕಕ್ಕೊಂದು ನಕ್ಷತ್ರ.

ಖೋಟಾ ನೋಟಿಗೆ ಜಲಚಿಹ್ನೆ ಇಲ್ಲ. ತನ್ನಲ್ಲಿರುವ ನೋಟು ಖೋಟಾ, ಅದು ತನ್ನಲ್ಲಿಗೆ ಬಂದ ದಿನವೇ ಅದನ್ನು ಪರೀಕ್ಷಿಸಿದ್ದಾಗಿದೆ.

ಫಾಸ್ಟರ್‌ಗೆ ಸಾವಿರ ದಿನಾರ್‌ನ ಸಾಚಾ ಕುವೈತ್ ಕರೆನ್ಸಿಯ ಇಂದಿನ ಬೇಡಿಕೆ ಬೆಲೆಯನ್ನು ತಾನೇ ತಿಳಿಸಿದ್ದಾಗಿದೆ. ಅದು ಸಾಚಾ ನೋಟು ಎಂಬುದು ಸರಿ ಸುಮಾರು ತನ್ನ ದೃಢ ನಿರ್ಧಾರ. ಆ ನಂಬಿಕೆ ಫಾಸ್ಟರ್‌ಗಿಲ್ಲ. ಅದು ಸಾಚಾ ಆಗಿದ್ದಲ್ಲಿ ಅದು ಕಳುವಾಗಿರಬೇಕಿತ್ತೆಂಬುದು ಅವನ ಭಾವನೆ. ಆದರೂ ಅದನ್ನು ಪರೀಕ್ಷಿಸಬೇಕಿತ್ತೆಂಬುದು ಅವನ ಭಾವನೆ.

ವಾನಂಬಾಡಿ ಈಗ ಅತೀವ ತೊಳಲಾಟದಲ್ಲಿದ್ದ. ಕೊಲೆಯಾಗಿರುವ ಸಭಾಪತಿ ಈ ನೋಟನ್ನು ಏನೆಂದು ಭಾವಿಸಿ ಸಂಗ್ರಹಕ್ಕೆ ಸೇರಿಸಿದ್ದ? .....ಸಾಚಾ ನೋಟೆಂದೆ? ಅವನಿಗೂ ಫಾಸ್ಟರ್‌ನಂತೆಯೇ ಆ ಬಗ್ಗೆ ಶಂಕೆ ಇತ್ತೆ?

ಫಾಸ್ಟರ್ ಹಾಗೂ ಅವನ ಇಬ್ಬರು ಸಹೋದ್ಯೋಗಿಗಳು ಈ ನೋಟಿನ ಸತ್ಯತೆಯ ಬಗೆಗೆ ಉತ್ಸುಕರಾಗಿದ್ದಾರೆ. ಆದರೆ ಆ ಭಾವನೆ ಆಡಗಿಸಿದ್ದಾರೆ. .....ಆದರೂ ಏನೋ ಒಂದು ಬಗೆಯ ನಿರ್ಲಕ್ಷ್ಯತೆ. ಕುವೈತ್‌ನ ನೋಟಂತೂ ಅವರ ಗಮನ ಸೆಳೆದಿದೆ. ಅದರ ಭರದಲ್ಲಿ ಅವರಿಗೆ ಸಭಾಪತಿಯ ಕೊಲೆಗಾರ ಯಾರು, ಕೊಲೆಯ ಉದ್ದೇಶವೇನು ಎಂಬ ಪ್ರಮುಖ ಪ್ರಶ್ನೆಗಳೇ ಗೌಣವಾಗಿವೆ.

ಸಭಾಪತಿಯ ಬಳಿ ವಾಟರ್‌ಮಾರ್ಕ್ ಡಿಟೆಕ್ಟರ್ ಇರಲಿಲ್ಲ. ಜೀವವಿಮೆ,

ಉಯಿಲು, ಮಾಡದಂತಹ ಮನುಷ್ಯನಲ್ಲಿ ಆ ಸಾಧಕ ಇರಲಿಲ್ಲ. ಆ ವಿಷಯದಲ್ಲೂ ಅವನು ಹಳೆಯ ಕಾಲದವ.

ವಾನಂಬಾಡಿ ಕುರ್ಚಿಯಿಂದ ಎದ್ದು ತೆರೆದ ಬಾಗಿಲ ದಿಕ್ಕಿಗೆ ಹೆಜ್ಜೆ ಹಾಕಿದವನು ಹಾಗೆಯೆ ನಿಂತು ನಿಶ್ಚಯಿಸಿದ. ಆಲ್ಬಮ್‌ಗಳ ಚೆಕಿಂಗ್ ಮುಂದುವರಿಸಲು ನಾಳೆ ರಾತ್ರಿ ಬರುವಾಗ ಜಲಚಿಹ್ನೆಯ ಪರೀಕ್ಷಕವನ್ನು ತನ್ನೊಂದಿಗೆ ತಪ್ಪದೆ ತರಬೇಕು. ಇಂದಿನ ರಾತ್ರಿಯಂತೆ ನಾಳೆಯ ರಾತ್ರಿಯೂ ಹೀಗೆಯೇ ಕೋಣೆಯಲ್ಲಿ ತನ್ನನ್ನು ಒಂಟಿಯಾಗಿರಲು ಬಿಡುವುದಾದರೆ ಕುವೈತ್ ನೋಟನ್ನು ಆಲ್ಬಮ್‌ನಿಂದ ಸುಲಭವಾಗಿ ತೆಗೆದು ವಾಟರ್ ಮಾರ್ಕ್ ಡಿಟೆಕ್ಟರ್‌ನಲ್ಲಿ ಪರೀಕ್ಷಿಸಿ, ಅವರ ತಿಳಿವಳಿಕೆಗೆ ಬರದಂತೆ ಮತ್ತೆ ಆ ಚೌಕಟ್ಟಿಗೆ ಸೇರಿಸಿಬಿಡುವುದು.

ಮತ್ತೆ ಆ ಚೌಕಟ್ಟಿಗೆ ಸೇರಿಸಿಬಿಡುವುದು! ಹಾಂ, ಅದು ಖೋಟಾ ನೋಟು ಆಗಿದ್ದರೆ ಮಾತ್ರ. ಪರೀಕ್ಷಿಸಿದಾಗ ಅದು ಸಾಚಾ ನೋಟು ಆಗಿದ್ದರೆ ಅದನ್ನು ಆಲ್ಬಮ್‌ನ ಚೌಕಟ್ಟಿಗೆ ಸೇರಿಸಿಬಿಡುವುದೆ?.....ಛೇ, ಅದು ಹಾಗೆಂದ ಪಕ್ಷಕ್ಕೆ ಆ ಮೂವರ ಮುಂದೆಯೆ ಅವರ ಅಪ್ಪಣೆ ಪಡೆದು ಆ ಕೆಲಸ ಮಾಡುವುದು ಹತ್ತು ನಿಮಿಷಗಳ ಕೆಲಸ.

ಅಲ್ಲ, ವಾನಂಬಾಡಿ ಉದ್ದೇಶ ಆ ನೋಟಿನ ಸಾಚಾತನವನ್ನು ಕೇವಲ ಪರೀಕ್ಷಿಸುವುದು ಮಾತ್ರ ಆಗಿರಲಿಲ್ಲ. ಅದಕ್ಕಿಂತಲೂ ಅಧಿಕವಾಗಿ ಮಾಡುವ ಕಾರ್ಯವೊಂದಿತ್ತು !

ಬಾಗಿಲಿಗೆ ಬಂದ ವಾನಂಬಾಡಿ ಏರಿದ ಕಂಠದಲ್ಲಿ ಮೇಲಕ್ಕೆ ಕೂಗಿ ಹೇಳಿದ.

"ಮಿಸ್ಟರ್ ಘಾಸ್ಟರ್! ಇನ್ಸ್‌ಪೆಕ್ಟರ್ ಘಾಸ್ಟರ್! ನಾನು ಮನೆಗೆ ಹೋಗ್ತಿದೀನಿ"

ಘಾಸ್ಟರ್ ದಡದಡ ಮೆಟ್ಟಿಲು ಇಳಿದು ಬಂದ.

"ಏನು, ಮಿಸ್ಟರ್ ವಾನಂಬಾಡಿ? ಸರಿಯಾಗಿ ಕೇಳಿಸ್ಲಿಲ್ಲ. ಏನಾದ್ರು

ಪತ್ತೆ ಹಚ್ಚಿದ್ರಾ?"

ಇನ್ಸ್‌ಪೆಕ್ಟರ್ ಹೊಸ ಸುದ್ದಿಗೆ ಕಾದಿದ್ದ.

"ಇಲ್ಲ ಮನೆಗೆ ಹೋಗ್ತಿದೀನಿ"

"ಆಲ್‌ರೈಟ್. ಇಬ್ಬರೇ ಈ ಕೋಣೆಯಲ್ಲಿ. ಅದೂ ರಾತ್ರಿ ಹೊತ್ನಲ್ಲಿ ಕುಳಿತು ಈ ಕೆಲಸದಲ್ಲಿ ತೊಡಗೋದು ಅಂದ್ರೆ ಮಹಾ ಬೇಸರದ, ಕಷ್ಟದ ಕೆಲಸ.....ಆಲ್ಬಮ್‌ಗಳನ್ನು ನೋಡಿದ್ದಾಯ್ತೆ?"

"ಇನ್ನೂ ಅರ್ಧದಷ್ಟು ಕೆಲಸ ಉಳಿದಿದೆ, ಇವತ್ತಿಗೆ ಇಷ್ಟು ನಾಳೆ ರಾತ್ರಿಗೆ ಪೂರೈಸಿಬಿಡ್ತೀನಿ"

"ಓಕೆ. ಈವತ್ತಿಗೆ ಮಾಡಿಕೊಟ್ಟ ಕೆಲಸಕ್ಕೆ ಥ್ಯಾಂಕ್ಸ್"

"ಅಲ್ಬಮ್‌ಗಳನ್ನು ಹೀಗೆ ಮೇಜಿನ ಮೇಲೆ ರಾತ್ರಿಯೆಲ್ಲಾ ಬಿಟ್ಟಿರ್ತೀರಾ?"

ಹಾಗೆ ಕೇಳುವಾಗ ಆ ಮೂರು ಮಂದಿ ಪೊಲೀಸರು ಅವನ ಮುಂದೆ ಬುದ್ಧಿಹೀನ. ಮಂಕು ಬೊಂಬೆಗಳಂತೆ ಕಾಣಿಸಿದರು. ದಡ್ಡ ಪೊಲೀಸ್ ಮೆದುಳು! ಆ ಬಣ್ಣದ ಚೂರು ಕಾಗದಗಳ ಬೆಲೆ ಎಷ್ಟು ಎಂಬುದು ಆ ಮೂರು ದಪ್ಪ ತಲೆಗಳಿಗೆ ಯಾವತ್ತೂ ಹೊಳೆಯದು!

"ಹಾಗೆ ಮಾಡೋದಿಲ್ಲ. ಎಲ್ಲಾ ಎತ್ತಿಡ್ತೀವಿ"

"ಸಭಾಪತಿ ಅವನ್ನ ಯಾವುದಾದ್ರೂ ಪೆಟ್ಟಿಗೆಯಲ್ಲಿ ರಕ್ಷಿಸಿ ಇಡ್ತಿದ್ದ ಅಂತ ತಿಳಿತೀನಿ"

"ಮನೆಯ ಆಳು ಹೇಳಿದ ರೀತಿಯಲ್ಲಿ ಅವನ್ನ ದೊಡ್ಡ ಮೇಜಿನ ಡ್ರಾಗಳಲ್ಲಿ ಇಡ್ತಿದ್ದ ಅಂತ ತಿಳಿದೆ. ನಾನು ಆ ಮೂರು ಆಲ್ಬಮ್‌ಗಳನ್ನೂ ಮೇಜಿನ ಡ್ರಾಗಳಿಗೆ ಸೇರಿಸಿ ಬೀಗ ಹಾಕಿ, ಬೀಗದ ಕೈ ನನ್ನ ವಶದಲ್ಲಿ ಇಟ್ಕೊಳ್ತೀನಿ. ಈ ಮನೆಯ ಬಾಗಿಲಲ್ಲಿ ಒಬ್ಬ ಪೇದೆ ರಾತ್ರಿಯೆಲ್ಲಾ ಕಾವಲು ಇರ್ತಾನೆ"

"ಈ ಹೊತ್ತಿನವರೆಗೆ ನನಗೆ ಆಲ್ಬಮ್‌ಗಳಲ್ಲಿ ಏನೊಂದೂ ನಿರ್ದಿಷ್ಟವಾಗಿ

ಸಿಕ್ಕಿಲ್ಲ. ನಾಳೆ ದಿನ ಏನಾದರೂ ಪತ್ತೆ ಮಾಡಬೋದು ಅನ್ನೊ ಭರವಸೆ ಇದೆ"

ಅವನು ಆಡಿದ ಕಡೆಯ ಮಾತು ಅವನ ಕಿವಿಗಳಲ್ಲಿಯೇ ಟೊಳ್ಳಾಗಿ, ಅಪ್ರಮಾಣಿಕವಾಗಿ ಮೊಳಗಿತು. ಪೊಲೀಸ್‌ಗಾಗಿ ಈ ದಿನ ಮಾಡಿದ, ನಾಳೆ ಮಾಡಬಹುದಾದ ಕೆಲಸಗಳಲ್ಲಿ ಅವನಿಗೆ ನಿಜಕ್ಕೂ ಆಸಕ್ತಿ ಇರಲಿಲ್ಲ. ನೆಪ ಹೂಡಿ ಮತ್ತೆ ನಾಳೆ ದಿನ ರಾತ್ರಿ ಇಲ್ಲಿಗೆ ಬಂದು ಬೆಲೆ ಬಾಳುವ ಆ ಕುವೈತ್‌ನ ಬಣ್ಣದ ಕಾಗದದ ಚೂರಿನ ಸಾಚಾತನವನ್ನು ಪತ್ತೆ ಹಚ್ಚುವುದರಲ್ಲಿ ಮಾತ್ರ ಅವನ ಆಸಕ್ತಿ ಕೆರಳಿತ್ತು. ಆವೇಗಕ್ಕೆ ಒಳಗಾಗಿತ್ತು ಬಣ್ಣದ ಹುಳು.

ಮರು ದಿನ ನೋಟುಗಳ ವಿನಿಮಯದ ಕಾರ್ಯ ಮಂದವಾಗಿತ್ತು. ವ್ಯಾಪಾರಕ್ಕೆ ಹೆಚ್ಚು ಜನರ ಭೇಟಿ ಇರಲಿಲ್ಲ. ಆದರೂ ಬೇಸರ ಉಂಟು ಮಾಡದಷ್ಟು ಲಾಭ ದೊರೆತಿತ್ತು. ಆ ಲಾಭ, ಗಿರಾಕಿಗಳ ಭೇಟಿ, ನೋಟುಗಳ ಬಗ್ಗೆ ಮಾತು ಯಾವುದರಲ್ಲೂ ಅವನಿಗೆ ಮನಸ್ಸಿರಲಿಲ್ಲ. ವ್ಯವಹಾರ ನಡೆಯುತ್ತಿದ್ದಷ್ಟು ಕಾಲವೂ ಅವನ ತಲೆಯಲ್ಲಿ ಹರಡಿಕೊಂಡಿದ್ದುದು ಕುವೈತ್‌ನ ಮೆರೂನ್ ರಂಗಿನ ಕಾಗದ. ಅದರ ದೃಶ್ಯದೊಂದಿಗೆ ಕಾಡಿದ್ದ ಚಿಂತಾಪೂರ್ವಕ ಜಿಜ್ಞಾಸೆ. ಅದು ಸಾಚಾ ನೋಟು! ಇಲ್ಲವೆ, ಟೊಳ್ಳು ಕಾಗದ?.....ಅದು ಸಾಚಾ ಕಾಗದವಾಗಿದ್ದಲ್ಲಿ ಕೊಲೆಯಾದ ಸಭಾಪತಿಗೆ ಅದು ಯಾವ ರೀತಿಯಲ್ಲಿ ಪ್ರಯೋಜನಕಾರಿಯಾಗಿತ್ತು? ಕೇವಲ ಸಂಗ್ರಹಕಾರನ ಉತ್ಕಟ ಆಸಕ್ತಿಯೆ?

ಆ ರಾತ್ರಿ ಊಟ ಮುಗಿಸಿದ ಮೇಲೆ ವಾನಂಬಾಡಿ ಪೊಟ್ಟಿಅಳಗಪ್ಪನ್ ಬೀದಿಯ ಸಭಾಪತಿಯ ಮನೆಗೆ ನೇರವಾಗಿ ಹೊರಡಲುದ್ಯುಕ್ತನಾಗಲಿಲ್ಲ. ಬಿಲದ ಕೋಣೆಯ ಬೀಗ ತೆಗೆದು ಒಳ ಹೊಕ್ಕು ನೆಲದ ಮಟ್ಟದಲ್ಲಿದ್ದ ಕಬ್ಬಿಣದ ಮುಚ್ಚಳ ಎತ್ತಿ ನೋಟುಗಳ ಕಂತೆಗಳನ್ನು ಒಮ್ಮೆ ನೋಡಿ ಮತ್ತೆ ಮುಚ್ಚಳ ಹಾಕಿದ.

ಕೈಗಳನ್ನು ನಿಧಾನವಾಗಿ ಝಾಡಿಸಿದ. ಗೋಡೆಗೆ ಒರಗಿದ್ದ ಉಕ್ಕಿನ ಬೀರುವನ್ನು ತೆಗೆದು ಅದರ ಮೇಲಿನ ಖಾನೆಯಿಂದ ಹಳೆಯ ಆಲ್ಬಮ್ ಎಳೆದ. ಕೆಲವೇ ವಿದೇಶಿ ನೋಟುಗಳನ್ನು ಒಳಗೊಂಡಿದ್ದ ಸಾಧಾರಣ

ಆಲ್ಬಮ್ ಅದು.

ಬೀರುವಿನ ಬಾಗಿಲು ಮುಚ್ಚಿದಾಗ ಅದರ ಮೇಲಿನ ಕನ್ನಡಿಯಲ್ಲಿ ನೋಡಿದ. ಅರವತ್ತೆರಡರ ವಯಸ್ಸನ್ನು ಯಾವ ವಿಕಾರವೂ ಇಲ್ಲದೆ ತೋರಿತು ಕನ್ನಡಿ.

ಮೊಟಕು ಕೂದಲು, ನೀಳವಾದ ಅಚ್ಚಗಪ್ಪು ಮುಖ, ಬತ್ತಿ ಸುಕ್ಕುಬಿದ್ದ ಕೆನ್ನೆಗಳು, ತುಸು ಅಗಲವಾದ ಕಿವಿಗಳು. ಹೆಂಡತಿ ಸತ್ತ ಮೇಲೆ ಮೂವತ್ತು ವರ್ಷಗಳಿಂದಲೂ ತಾನು ವ್ಯತ್ಯಾಸಗೊಳ್ಳದಂತೆ ಹೀಗೆಯೇ ಕಾಣುತ್ತಿರುವೆ..... ಚಿರಾಯು! ಅದಕ್ಕೆ ಕಾರಣ ತನ್ನನ್ನು ಸದಾ ಉತ್ಸಾದಲ್ಲಿಟ್ಟಿರುವ ವಿದೇಶಿ ನೋಟುಗಳ ವ್ಯಾಪಾರ. ಅದನ್ನು ನಿಲ್ಲಿಸಿದರೆ ತನ್ನ ಸಮಯ ಕಳೆಯುವ ಬಗೆ?.....

ವಾನಂಬಾಡಿಯ ಮುಖದಲ್ಲಿ ಸುಕ್ಕುಗಳು ಆಳವಾದವು. ಮುಖ ತುಸು ಹೊರಳಿತು. ಆಳು ಅಮಾಸೆ ಪ್ರಶ್ನಾರ್ಥಕ ಮುಖ ಮಾಡಿ ಬಾಗಿಲಲ್ಲಿ ನಿಂತಿದ್ದುದು ಕಾಣಿಸಿತು.

ಕೋಪದಿಂದ ಸರ್ರನೆ ಹಿಂದಕ್ಕೆ ತಿರುಗಿ ಬಾಗಿಲವರೆಗೆ ನಡೆದ. ಬಾಗಿಲು ಮುಚ್ಚುವುದನ್ನು ಏಕೆ ಮರೆತೆ?

"ಯಾಕ್ಬಂದೆ? ಬರಬೇಡ ಒಳಗೆ! ನಾನು ಇಲ್ಲಿಗೆ ಬರೋದಿಕ್ಕೆ ಬಿಡೋದಿಲ್ಲಾಂತ ಗೊತ್ತಿದೆ ನಿನಗೆ"

ಬೊಗಳುವಂತಿತ್ತು ದಾಳಿಯ ಸ್ವರ.

ಬೆದರಿ ಹಿಮ್ಮೆಟ್ಟಿದ ಅಮಾಸೆ.

"ತಪ್ಪಾಯ್ತು, ಮೊದಲಾಳಿ. ಎರಡು ಸಾರಿ ಬಾಗಿಲ ಮೇಲೆ ಬೆರಳು ತಟ್ಟಿದೆ. ನಿಮಗೆ ಅದು ಕೇಳಿಸ್ಲಿಲ್ಲ. ನಾನು ಯಾಕೆ ಇಲ್ಲಿಗೆ ಬರಲಿ? ಇನ್ಸ್‌ಪೆಕ್ಟರ್ ಫಾಸ್ಟರ್ ಫೋನ್ ಮಾಡಿದ್ರು. ನೀವು ಇಲ್ಲಿಂದ ಇನ್ನೂ ಹೊರಡದೆ ಇದ್ರೆ ಅವರೇ ಇಲ್ಲಿಗೆ ಬರ್ತಾರೇಂತ ತಿಳಿಸೋದಿಕ್ಕೆ ಹೇಳಿದ್ರು. ಸ್ವಲ್ಪ ಕಾದಿದ್ರೆ ಅವರೇ ಬಂದು ಕರಕೊಂಡು ಹೋಗ್ತಾರಂತೆ"

ವಾನಂಬಾಡಿಯ ದೃಷ್ಟಿಯಿಂದ ಅದು ಪ್ರಾಮುಖ್ಯವಾದ ವಿಷಯ ವಾಗಿರಲಿಲ್ಲ. ಅವನು ಪೊಲೀಸ್ ಇನ್ಸ್‌ಪೆಕ್ಟರನ ವಾಹನದಲ್ಲಿ ಹೋಗುವುದಕ್ಕೆ ಇಷ್ಟಪಡದೆ ಇರಲು ಕಾರಣವಿರಲಿಲ್ಲ. ರಾತ್ರಿಯಲ್ಲಿ ಪೊಟ್ಟಿಅಳಗಪ್ಪನ್ ಬೀದಿಯವರೆಗೆ ತನ್ನ ಕಾರು ಒಯ್ಯುವ ತೊಂದರೆ ಅವನಿಗೆ ತಪ್ಪಿ ಹೋಗಿತ್ತು.

ಅಮಾಸೆ ಹಾಗೆಯೆ ನಿಂತಿದ್ದ. ಯಜಮಾನ ಪೊಲೀಸರಿಗೆ ಸಹಕಾರ ನೀಡುತ್ತಿರುವುದಾದರೂ ಏನೆಂಬ ಅಚ್ಚರಿ. ಪೊಲೀಸರನ್ನೇ ಮನೆಯವರೆಗೆ ಬರುವಂತೆ ಮಾಡಿರುವ ಬಣ್ಣದ ಹುಳು! ಹುಳುವಿನಲ್ಲಿರುವ ವಿಶೇಷತೆ?

ವಾನಂಬಾಡಿ ಆಳಿನ ಮುಖದ ಮೇಲೆಯೇ ಬಾಗಿಲು ರಪ್ಪನೆ ಮುಚ್ಚಿದ. ಕೈಲಿದ್ದ ಆಲ್ಬಮ್ ಭಾರವಾಗಿ ಕಾಣಿಸಿತು. ಅದು ಭಾರತದಲ್ಲಿ ತಯಾರಿಸಿದ ದಪ್ಪನೆಯ ಒರಟು ಆಲ್ಬಮ್.

* * *

ಕುರ್ಚಿ ಹಿಡಿದು ಸಂಗ್ರಹದ ಪುಟಗಳನ್ನು ತಿರುವಿ ಕುವೈತ್‌ನ ಸಾವಿರದ ದಿನಾರ್‌ನ ಮೇಲೆ ದೃಷ್ಟಿ ಹಾಕಿದ. ಖೋಟಾ ನೋಟು! ಅದು ಖೋಟಾ ಎಂಬುದನ್ನು ಚೆನ್ನಾಗಿ ತಿಳಿದ ಮೇಲೆ ಎಷ್ಟೋ ಬಾರಿ ಅದನ್ನು ಏಕೆ ಹರಿದು ತೂರಿ ಬಿಡಬಾರದು, ಬೆಂಕಿಗೆ ಹಾಕಿ ಬಿಡಬಾರದು ಎಂಬ ಯೋಚನೆ ಬಂದಿತ್ತು..... ಅದರಿಂದ ಪಾಠ ಕಲಿತಾಗಿತ್ತು. ಅನುಭವ ಪಡೆದುದಾಗಿತ್ತು. ಅವನ ಸಂಗ್ರಹದಲ್ಲಿ ಈಗ ಅದು ಕೇವಲ ಒಂದು ಪೊಳ್ಳು ಬಣ್ಣದ ಕಾಗದದ ತುಂಡು. ಅದಕ್ಕೆ ಪೈಸಾ ಬೆಲೆ ಇಲ್ಲ.

ಎರಡು ವರ್ಷಗಳ ಹಿಂದೆ ಅದನ್ನು ಬಹರೇನ್‌ನಿಂದ ಬಂದಿದ್ದ ಪ್ರವಾಸಿಯೊಬ್ಬನಿಂದ ಪಡೆದಿದ್ದ. ಅಂದು ಅವನಿಗೆ ಬಿಡುವಿಲ್ಲದಷ್ಟು ವ್ಯವಹಾರ. ಪ್ರವಾಸಿ ಆ ನೋಟಿನ ಮೌಲ್ಯವೇ ತಿಳಿಯದವನಂತೆ ಬೆಪ್ಪನಂತೆ ನಟಿಸಿ, ಅದನ್ನು ಕೊಟ್ಟು ಐದುಸಾವಿರ ರೂಪಾಯಿ ಪಡೆದು ಹೋಗಿದ್ದ. ಐದೇ ನಿಮಿಷಗಳಲ್ಲಿ ವಾನಂಬಾಡಿಗೆ ತನ್ನ ತಪ್ಪಿನ ಅರಿವಾಗಿತ್ತು. ಅನುಭವಿ ಬಣ್ಣದ ಹುಳು ಬಣ್ಣದ ಕಾಗದದ ವಾಸನೆ ಹಿಡಿಯುವದರಲ್ಲಿ ಸೋತುಹೋಗಿತ್ತು. ತತ್‌ಕ್ಷಣದಲ್ಲಿ ಹೊರಬಂದು ಅವನಿಗಾಗಿ ಸುತ್ತಲೂ ಪರದಾಡಿ ನಿರಾಶನಾಗಿದ್ದ.

ಖೋಟಾ ನೋಟು ನೀಡಿದ ಮನುಷ್ಯ ಆ ಜನನಿಬಿಡ ಕಾಶಿಚೆಟ್ಟಿ ಬೀದಿಗಳ ಸಂದುಗಳಲ್ಲಿ ತೂರಿ ಕಣ್ಮರೆಯಾಗಿ ಹೋಗಿದ್ದ.

ಅಂದಿನಿಂದ ಆ ನೋಟು ಅವನಲ್ಲಿಯೇ ಅಪ್ರಯೋಜಕವಾಗಿ ತೂಗಾಡುತ್ತಿತ್ತು. ಅದನ್ನು ಯಾರಿಗೂ ವಿನಿಮಯ ಮಾಡುವಂತಿರಲಿಲ್ಲ.

ಇಂದು ಅದರ ವಿನಿಮಯಕ್ಕೊಂದು ಅವಕಾಶ!

ವಾನಂಬಾಡಿ ದಪ್ಪನೆಯ ಪುಟಕ್ಕೆ ಅಂಟಿದ್ದ ತೆಳುವಾದ ಪಾರದರ್ಶಕ ಹಾಳೆಯ ತುದಿಗೆ ಚಿಮುಟ ಹೂಡಿ ನಯವಾಗಿ ಎತ್ತಿ ಅದನ್ನು ಬೆರಳುಗಳಿಂದ ಹಿಡಿದು ಮೂಲೆಯಿಂದ ಮೂಲೆಯ ಕಡೆಗೆ ಎಳೆದ. ನಂತರ ಚಿಮುಟದಿಂದ ನೋಟನ್ನು ಎತ್ತಿ ಮೇಜಿಗಿರಿಸಿದ.

ಸಭಾಪತಿಯ ಆಲ್ಬಮ್‌ನಲ್ಲಿರುವ ಕುವೈತ್ ನೋಟನ್ನು ನೆನಪಿಗೆ ತಂದುಕೊಂಡ. ಅದರ ಮಧ್ಯೆ ಉದ್ದಕ್ಕೂ ಒಂದು ಮಡಿಕೆ ಇದೆ.

ತನ್ನ ಆಲ್ಬಮ್‌ನಿಂದ ಎತ್ತಿದ ನೋಟನ್ನು ಉದ್ದಕ್ಕೂ ಮಧ್ಯೆ ಮಡಿಸಿ ಎರಡು ಸಾರಿ ಒತ್ತಿ ಮಡಿಕೆಯ ಗೆರೆ ಹಗುರವಾಗಿ ಕಾಣುವಂತೆ ಮಾಡಿದ.

ಉಕ್ಕಿನ ಬೀರುವಿನಿಂದ ವಾಟರ್ ಮಾರ್ಕ್ ಡಿಟೆಕ್ಟರ್ ಹೊರಬಂತು. ಅದೊಂದು ಆರು ಅಂಗುಲ ಚದರದ, ಅರ್ಧ ಅಂಗುಲ ಆಳದ, ಕಪ್ಪು ರಂಗಿನ ಗಟ್ಟಿ ಬೇಕಲೈಟ್‌ನ ತಬಕ. ಅದರಲ್ಲಿ ನೋಟನ್ನು ಮುಖವಡಿಯಾಗಿ ಹರಡಿದ. ಅದರ ಮೇಲೆ ಹತ್ತು ತೊಟ್ಟುಗಳಷ್ಟು ಬೆಂಜೀನ್ ದ್ರವವನ್ನು ನೋಟು ಪೂರ್ತಿಯಾಗಿ ನೆನೆಯುವಂತೆ ಸುರಿದ. ಒದ್ದೆಯಾದ ನೋಟು ಒಂದು ನಿಮಿಷ ಕಳೆದರೂ ಬೇಕಲೈಟ್‌ನ ಹಿನ್ನೆಲೆಗೆ ಯಾವ ನೆರಳಿನಂತಹ ಆಕೃತಿಯನ್ನೂ ಮೂಡಿಸಲಿಲ್ಲ.....ಅದು ಜಲಚಿಹ್ನೆ ಇಲ್ಲದ ಬಂಜೆ ನೋಟು!

ಅವನ ಮುಖದಲ್ಲಿ ಯಾವ ವಿಕಾರವೂ ಇರಲಿಲ್ಲ. ಅದು ನಾಲ್ಕನೆಯ ಸಾರಿ ಅವನು ನಡೆಸಿದ ಪರೀಕ್ಷೆ. ವಾಟರ್ ಮಾರ್ಕ್ ಇಲ್ಲದ, ಸಾವಿರದ ದಿನಾರ್ ಸಂಖ್ಯೆ ತೋರುತ್ತಿದ್ದ ಕುವೈತ್‌ನ ಖೋಟಾ ನೋಟು! ಅದನ್ನು

ಬೀಳ್ಕೊಡುವ ಮೊದಲು ಕಡೆಯ ಬಾರಿಗೆ ತನ್ನ ಚಪಲಕ್ಕಾಗಿ ಪರೀಕ್ಷಿಸಿದ್ದ ವಾನಂಬಾಡಿ.

ತಬಕದಲ್ಲಿದ್ದ ನೋಟನ್ನು ಚಿಮುಟದಿಂದ ಎತ್ತಿ ಮಸಿ ಒತ್ತುವ ಕಾಗದದ ಮೇಲೆ ಹರಡಿ ಅದರ ಮೇಲೆ ಕರವಸ್ತ್ರದಿಂದ ಮೆದುವಾಗಿ ಒತ್ತಿದ. ಬೆಂಜೀನ್ ದ್ರವ ಅರ್ಧ ನಿಮಿಷದಲ್ಲಿ ಆವಿಯಾಗಿ ಬ್ಲಾಟರ್ ಮೇಲೆ ಒಣ ನೋಟು ಕಾಣುತ್ತಿತ್ತು.

ವಾನಂಬಾಡಿ ಎದುರಿನಲ್ಲಿದ್ದ ನೋಟನ್ನು ಮರೆತವನಂತೆ ನಿಂತಿದ್ದ. ಆದರೆ ಅವನು ಮರೆತಿರಲಿಲ್ಲ. ಅವನಲ್ಲಿ ಗಂಭೀರವಾದ ಸಮರವೊಂದು ಸಾಗುತ್ತಿತ್ತು.....

ಇನ್ಸ್‌ಪೆಕ್ಟರ್ ಫಾಸ್ಟರ್ ವಾನಂಬಾಡಿಯ ಮನೆ ಬಾಗಿಲಿನ ಕರೆ ಗುಂಡಿ ಒತ್ತುವ ಗೋಜಿಗೆ ಹೋಗದೆ, ಕಾರಿನಲ್ಲೇ ಕುಳಿತು ಎರಡು ಸಾರಿ ಹಾರನ್ ಮಾಡಿದ.

ವಾನಂಬಾಡಿ ಬ್ಲಾಟರ್ ಮೇಲೆ ನೋಟು ಹಾಗೇ ಉಳಿಸಿ ಹೊರಬಂದ. ಅವನು ಸಮರದಲ್ಲಿ ಗೆಲುವು ಸಾಧಿಸಿದ್ದಾಗಿತ್ತು!

ಇನ್ಸ್‌ಪೆಕ್ಟರ್‌ನ ಕೈ ಕುಲುಕಿ ನಮ್ರವಾಗಿ ಯಾಚಿಸಿದ.

"ಒಂದು ನಿಮಿಷ ಒಳಗೆ ಬಂದು ಒಂದು ಡ್ರಿಂಕ್.....?"

ಫಾಸ್ಟರ್ ನಿಸ್ಸಹಾಯಕನ ತಿಳಿ ನಗೆಯ ಮುಖ ಮಾಡಿದ.

"ಡ್ಯೂಟಿ ಮೇಲಿರುವಾಗ ಡ್ರಿಂಕ್? ನನ್ನ ಬಾಸ್ ಆಶೀರ್ವಾದಮ್ ಹೇಗೇಂತ ಗೊತ್ತಿಲ್ಲ ನಿಮಗೆ. ನಾನು ಇನ್ನೂ ಕೆಲವು ವರ್ಷ ಪೊಲೀಸ್ ಕೆಲಸದಲ್ಲಿ ಇರಬೇಕಲ್ಲವೆ, ಮಿಸ್ಟರ್ ವಾನಂಬಾಡಿ?"

ಅವನಿಗೆ ಒಳ ಬರಲು ಕಾರಿನ ಬಾಗಿಲು ತೆರೆದ. ವಾನಂಬಾಡಿ ಏನೊ ಮರೆತವನಂತೆ ತಟ್ಟನೆ ನುಡಿದ.

"ಒಂದು ನಿಮಿಷ.....ಏನೋ ಮರೆತೆ"

ಮನೆಯೊಳಕ್ಕೆ ಬಂದು ಬಿಲದ ಕೋಣೆ ಹೊಕ್ಕ. ಅವನು ಏನನ್ನೊ

ಮರೆತಿದ್ದುದು ನಿಜ. ಮರೆತಿದ್ದುದು ನಿರ್ದೋಷಿಯಾದ ವಾಟರ್ ಮಾರ್ಕ್ ಡಿಟೆಕ್ಟರ್.

ಅವನು ಎರಡನೆ ಸಾರಿಗೆ ದೊಗಳೆ ಕೋಟು ಧರಿಸಿ ಬಿಲದಿಂದ ಹೊರ ಬಂದಾಗ ಮೇಜಿನ ಮೇಲೆ ವಾಟರ್ ಮಾರ್ಕ್ ಡಿಟೆಕ್ಟರ್ ಇರಲಿಲ್ಲ. ಬ್ಲಾಟರ್ ಮೇಲೆ ಆ ಖೋಟಾ ನೋಟೂ ಇರಲಿಲ್ಲ.

ದುಃಖತಪ್ತ ಜೋಲುಗಣ್ಣುಗಳ ನಾಯಿಯಂತೆ ಮುಖ ಹೊಂದಿದ್ದ ಮನುಷ್ಯ ಸಭಾಪತಿಯ ಮನೆಯ ಬಾಗಿಲು ತೆರೆದ. ಇಬ್ಬರೂ ಪ್ರವೇಶಿಸಿದರು.

ಕಪ್ಪು ಸೀರೆಯುಟ್ಟ, ಎತ್ತರದ, ಗಂಭೀರ ಮುಖದ ಹೆಣ್ಣೊಬ್ಬಳು ಮೆಟ್ಟಿಲು ಇಳಿದು ಬಂದಳು.

"ವಲ್ಲಿಯಮ್ಮ, ಇವರೇ ವಾನಂಬಾಡಿ. ಇವರೂ ನಿಮ್ಮ ತಂದೆಯ ಹಾಗೆ ವಿದೇಶಿ ಕರೆನ್ಸಿಗಳಲ್ಲಿ ಆಸಕ್ತಿ ಹೊಂದಿದೋರು, ನಮ್ಮ ತನಿಖೆ ಕಾರ್ಯದಲ್ಲಿ ತಜ್ಞ ಅಭಿಪ್ರಾಯ ಕೊಡೋದಿಕ್ಕೆ ನಮ್ಮ ಕೋರಿಕೆ ಮೇಲೆ ಬಂದಿದಾರೆ"

ಇನ್ಸ್‌ಪೆಕ್ಟರ್ ವಾನಂಬಾಡಿಯನ್ನು ಸಭಾಪತಿಯ ಮಗಳಿಗೆ ಪರಿಚಯ ಮಾಡಿಕೊಟ್ಟ.

ವಲ್ಲಿಯಮ್ಮ ಆತ್ಮೀಯವಾಗಿ ಅವನತ್ತ ನೋಡಿದಳು. ಅವಳ ತಂದೆ ಹಾಗೂ ವಾನಂಬಾಡಿ ಇಬ್ಬರೂ ಒಂದೇ ಬಗೆಯ ವಸ್ತುವಿನಲ್ಲಿ ಆಸಕ್ತರೆಂಬ ಅಂಶ ಅವನ ಬಗೆಗೆ ಅಭಿಮಾನ, ಗೌರವ ಮೂಡಿಸಿತ್ತು. ಅವಳ ತಂದೆ ವಿದೇಶಿ ನೋಟುಗಳ ಸಂಗ್ರಹಕಾರ. ಅದು ಅವನ ಹವ್ಯಾಸ. ವಾನಂಬಾಡಿ ವಿದೇಶಿ ನೋಟುಗಳನ್ನು ಕೊಳ್ಳುವ, ಮಾರುವ ವ್ಯಾಪಾರಿ. ಅದು ಅವನ ಪೂರ್ಣ ಸಮಯದ ಕಸುಬು. ಆದರೆ ವಿದೇಶಿ ನೋಟುಗಳಲ್ಲಿ ಕೈ ಆಡಿಸಿದ ಇಬ್ಬರೂ ಒಂದೇ ಎಂಬ ಬಂಧುತ್ವದ ಭಾವ ಅವಳಲ್ಲಿ ಉಂಟಾಗಿತ್ತು.

ವಾನಂಬಾಡಿ ನಮ್ರತೆಯಲ್ಲಿ ದುಃಖ ಸೂಚಿಸಿದ.

"ನಾನು ಸಭಾಪತಿನ ನೋಡಿರ್ಲಿಲ್ಲ. ಮೊದಲೇ ನೋಡಿದ್ರೆ ನಮ್ಮಿಬ್ಬರಲ್ಲೂ

ಏನಾದ್ರು ವ್ಯವಾಹಾರ ನಡೆಯಬಹುದಾಗಿತ್ತೊ ಏನೊ.....ಅವರ ವಿದೇಶಿ ಕರೆನ್ಸಿಗಳ ಆಲ್ಬಮ್ ಮಹಾ ಅದ್ಭುತ! ಅದನ್ನ ನೋಡಿದ್ರೆ ಹೇಳಬೋದು ಸಭಾಪತಿ ಒಬ್ಬ ಅಚ್ಚುಕಟ್ಟಿನ, ಶಿಸ್ತಿನ ವ್ಯಕ್ತಿ ಅಂತ.....ಅವರು ಹೋದ ಮೇಲೆ ವಿಧಿ ನನ್ನ ಇಲ್ಲಿಗೆ ಕರೆಸ್ತು"

ಅವಳು ತುಟಿಗಳಿಗೆ ಕರವಸ್ತ್ರ ಒತ್ತಿ ದುಃಖ ತಡೆದಳು.

ಫಾಸ್ಟರ್ ಕೊಲೆ ನಡೆದ ಕೋಣೆಗೆ ನಡೆದು ದೊಡ್ಡ ಮೇಜಿನ ಡ್ರಾಗಳನ್ನು ಎಳೆದು ಮೂರು ಆಲ್ಬಮ್‌ಗಳನ್ನು ತೆಗೆದು ಅವನ ಮೇಜಿಗೆ ತಂದಿರಿಸಿದ.

"ನಿಮ್ಮ ಕೆಲಸ ಮುಂದುವರಿಸಬೋದು" ಎಂದು ಹಜಾರದಲ್ಲಿದ್ದ ವಲ್ಲಿಯಮ್ಮನ ಬಳಿಗೆ ಹೋದ.

ವಾನಂಬಾಡಿ ಮೇಜಿನ ಮುಂದೆ ಕುಳಿತು ಕೋಟಿನ ತೋಳುಗಳ ತುದಿಗಳನ್ನು ಮೇಲಕ್ಕೆ ಮಡಿಚಿ ಕ್ಯಾಟಲಾಗ್ ಹಾಗೂ ಆಲ್ಬಮ್‌ಗಳನ್ನು ಹೊಂದಿಸಿದ. ಹಿಂದಿನ ರಾತ್ರಿ ನಿಲ್ಲಿಸಿದ್ದ, ಕ್ಯಾಟಲಾಗ್‌ನಿಂದ ಆಲ್ಬಮ್‌ವರೆಗೆ ತಾಳೆ ನೋಡುವ ಕೆಲಸವನ್ನು ಮುಂದುವರಿಸಿದ.

ಎರಡು ನಿಮಿಷಗಳಲ್ಲಿ ಕುವೈತ್ ಭಾಗಕ್ಕೆ ಬಂದ. ಮುಖದಲ್ಲಿನ ಸ್ನಾಯುವನ್ನು ವಿಕಾರಗೊಳಿಸದೆ ತೆರೆದಿದ್ದ ಬಾಗಿಲ ಕಡೆಗೆ ಕಣ್ಣುಗಳನ್ನು ಹೊರಳಿಸಿದ.....ಮತ್ತೆ ಕಣ್ಣುಗಳನ್ನು ಆಲ್ಬಮ್ ಮೇಲೆ ಇಳಿಸಿದ.

ಮತ್ತೊಂದು ನಿಮಿಷದ ನಂತರ ದೃಷ್ಟಿ ಸರಿಸಿದಾಗ ಮೈ ಮೆಲ್ಲನೆ ಅದುರಿತು. ನಾಯಿಯ ಜೋಲು ಕಣ್ಣುಗಳ ಅದೇ ಆಳು ಯಾವ ಸೂಚನೆಯೂ ಕೊಡದೆ ನಿಶ್ಶಬ್ದವಾಗಿ ಬಾಗಿಲಲ್ಲಿ ನಿಂತಿದ್ದ! ವಾನಂಬಾಡಿಯ ದೃಷ್ಟಿಯನ್ನು ಎದುರಿಸುತ್ತಲೇ ಕ್ಷಮೆ ಯಾಚಿಸುವವನಂತೆ ಮೆಲ್ಲನೆ ಎರಡು ಸಾರಿ ಕೆಮ್ಮಿದ. ಇಬ್ಬರಲ್ಲೂ ಮಾತಿಲ್ಲ.

ವಾನಂಬಾಡಿ ಎರಡನೆಯ ಬಾರಿಗೆ ತಲೆ ಎತ್ತಿ ಉದ್ರೇಕ ತೋರುಗೊಡದೆ ಅತ್ತ ನೋಡಿದ. ಅವನ ದೇಹದಲ್ಲಿ ವಿದ್ಯುತ್ ಷಾರ್ಟ್ ಸರ್ಕ್ಯೂಟ್ ಉಂಟಾಗಿತ್ತು.

"ಏನು?" ಎದೆಯ 'ದಡದಡ'ಕ್ಕೆ ತಡೆಗೊಟ್ಟು ಕೋಪದಲ್ಲೇ ಕೇಳಿದ.

"ಕ್ಷಮಿಸಿ.....ಏನಾದ್ರು ತಿಂಡಿ ಕಳಿಸೋದಾ ಅಂತ ವಲ್ಲಿಯಮ್ಮ ಕೇಳು ಅಂದ್ರು"

"ಏನೂ ಬೇಡ, ಒಂದು ಲೋಟ ನೀರು ಸಾಕು"

ಅವನಿಗೆ ಸಮಾಧಾನವಾಗಿತ್ತು. ಆಳು ಬೆಳ್ಳಿಯ ಲೋಟದಲ್ಲಿ ನೀರು ತಂದು ಮೇಜಿನ ಮೇಲಿರಿಸಿದ.

ವಾನಂಬಾಡಿಗೆ ಅಷ್ಟು ಸಾಕು. ನೋಟಿನ ಜಲಚಿಹ್ನೆಯ ಪರೀಕ್ಷೆಗೆ ಬೆಂಜೀನ್ ದ್ರವವೇ ಬೇಕೆಂದೇನೂ ಇಲ್ಲ. ನೀರೂ ಆ ಕೆಲಸ ಮಾಡುತ್ತದೆ.

ಆಳು ಲೋಟ ಇರಿಸಿದ ಮೇಲೆ ಆಲ್ಬಮ್ ಕಡೆಗೆ ಒಂದು ಕಿರು ನೋಟ ಹಾಕಿ ಸರಿದುದನ್ನು ವಾನಂಬಾಡಿ ಗಮನಿಸಿದ. ಅವನು ಅತಿ ನಿಧಾನವಾದ, ಮೆಲ್ಲನೆಯ ಹೆಜ್ಜೆ ಸಪ್ಪಳದೊಂದಿಗೆ ಮೆಟ್ಟಿಲು ಏರಿ ಹೋದುದು ಕೇಳಿಸಿತು. ಕೆಲವು ನಿಮಿಷಗಳ ಹಿಂದೆ ವಲ್ಲಿಯಮ್ಮ ಹಾಗೂ ಇನ್ಸ್‌ಪೆಕ್ಟರ್ ಅದೇ ಭಾಗಕ್ಕೆ ಹೋಗಿದ್ದರು.

ಸಮಯ ಹದವಾಗಿತ್ತು. ವಾನಂಬಾಡಿ ತೆರೆದ ಬಾಗಿಲ ದಿಕ್ಕಿಗೆ ಒಮ್ಮೆ ದೃಷ್ಟಿ ಮಿಂಚಿಸಿದ. ಕೋಟಿನ ಎಡ ಪಕ್ಕದ ಜೇಬಿನಿಂದ ವಾಟರ್ ಮಾರ್ಕ್ ಡಿಟೆಕ್ಟರ್ ಹೊರ ಬಂತು. ಅಷ್ಟೇ ಕ್ಷಿಪ್ರ ವೇಗದಲ್ಲಿ ಅದು ಮೇಜಿನ ಅಡಿಯಲ್ಲಿ ಅವನ ತೊಡೆಯ ಮೇಲೆ ಸೇರಿತು.

ಎರಡು ಬೆರಳುಗಳನ್ನು ನೀರಿನಲ್ಲಿ ಅದ್ದಿ ಡಿಟೆಕ್ಟರ್‌ನ ತಳ ಭಾಗಕ್ಕೆ ಸವರಿ ಒದ್ದೆ ಮಾಡಿದ. ಆಲ್ಬಮ್‌ನ ಪುಟದ ಮೇಲಿದ್ದ ತೆಳುವಾದ ಪಾರದರ್ಶಕ ಹೊದಿಕೆಯ ಅಂಚಿಗೆ ಹೂಡಿದ ಚಿಮುಟ ಚುರುಕಾಗಿ ಆಡಿತು. ಬೆರಳುಗಳಿಂದ ಹಿಡಿದ ಹೊದಿಕೆಯ ತುದಿ ಮೂಲೆಯಿಂದ ಮೂಲೆಗೆ ಸರಿದು ಹೋಯಿತು.....ಅದೇ ಚಿಮುಟ ಎಚ್ಚರಿಕೆಯಿಂದ ನೋಟನ್ನು ಮೇಲೆತ್ತಿತ್ತು.....ನೋಟು ಮುಖವಡಿಯಾಗಿ ಡಿಟೆಕ್ಟರ್‌ನ ಹೊಳೆಯುತ್ತಿದ್ದ ತಳ ಭಾಗದಲ್ಲಿ ಹರಡಿಕೊಂಡಿತು.

ಕೈ ಕಂಪಿಸಿತು. ಡಿಟೆಕ್ಟರ್ ತಬಕವನ್ನು ಮೇಜಿನ ಮಟ್ಟಕ್ಕಿಂತ ಮೇಲೆತ್ತಿ ಬೆಳಕಿಗೆ ಹಿಡಿದ. ತಬಕದ ತಳದ ಕಪ್ಪು ರಂಗು ನಿಧಾನವಾಗಿ ಒದ್ದೆಯಾದ ನೋಟಿನಲ್ಲಿ ಕಾಣಿಸಿಕೊಂಡು ಕೊನೆಗೆ ಜಲಚಿಹ್ನೆಯ ಆಕೃತಿಯನ್ನು ಮೂಡಿಸಿತು. ಅತೀವವಾಗಿ ಅವನು ಕಾತರಿಸಿದ ಚಿಹ್ನೆ.....ನೇರವಾಗಿ ನಿಂತ ಅರ್ಧ ಚಂದ್ರ. ಅದರ ಬಲ ಪಕ್ಕಕ್ಕೆ ನಕ್ಷತ್ರ.

ದೃಷ್ಟಿಯನ್ನೆಲ್ಲಾ ಆವರಿಸುವ ಬಣ್ಣ. ಆ ಮೆರೂನ್ ರಂಗಿನ ಕಾಗದ ಸತ್ಯವಾಗಿತ್ತು.....ಅಸಲಿ ಕುವೈತ್ ನೋಟು! ಅದೇ ಪ್ರಪಂಚದಲ್ಲಿ ಉಳಿದುಕೊಂಡಿದ್ದ, ಮೂವತ್ತೇಳು ವರ್ಷಗಳ ಹಿಂದಿನ, ಸಾವಿರ ದಿನಾರ್ ಮೌಲ್ಯದ ಕುವೈತ್ ನೋಟುಗಳಲ್ಲಿ ಮೂರನೆಯದು.

ಜುಂಯ್‌ಗುಟ್ಟಿದ ವಾನಂಬಾಡಿಯ ತಲೆ ಹಿಂದಕ್ಕೆ ನಿಧಾನವಾಗಿ ಸರಿದು ಎತ್ತರವಾದ ಕುರ್ಚಿಯ ಹಿಂಭಾಗಕ್ಕೆ ಮೆಲ್ಲನೆ ಬಡಿಯಿತು. ಕುತ್ತಿಗೆಯ ಸ್ನಾಯುಗಳನ್ನು ಬಿಗಿ ಹಿಡಿದ, ತಲೆಯನ್ನು ಮತ್ತೆ ಮುಂದಕ್ಕೆ ಸರ್ರನೆ ಎಳೆದುಕೊಂಡ.

ನೋಟಿನ ಅಗಾಧ ಮೌಲ್ಯ ಅವನನ್ನು ಆಕರ್ಷಿಸಿತ್ತು. ಅಂತಹ ನೋಟಿನ ಶೋಧನೆಯನ್ನು ನಡೆಸಿದ ತನ್ನ ಸಾಮರ್ಥ್ಯದ ಬಗೆಗೆ ಹೆಮ್ಮೆಯೂ ಉಂಟಾಯಿತು. ಹಿಗ್ಗಿನಿಂದ ಕೂಗಬೇಕಿನಿಸಿತು. ಮನಸ್ಸನ್ನು ಬಿಗಿ ಹಿಡಿದು ಸಮತೋಲನಕ್ಕೆ ತಂದುಕೊಂಡ.

ಇದು ತನ್ನ ಸ್ವತ್ತು! ಎತ್ತಿ ಬಚ್ಚಿಡಬೇಕು. ಯಾವ ಸಜೀವ ಕಣ್ಣುಗಳೂ ಅತ್ತ ಹರಿದಿರಲಿಲ್ಲ. ತನ್ನ ಕಣ್ಣುಗಳಿಗೇ ಎಂತಹದೊ ಶಂಕೆ ಅಳುಕು.

ತಲೆಯಲ್ಲಿ ಚುರುಕುಗೊಂಡಿದ್ದ ವಿಚಾರ ಅವನಿಗೆ ಸ್ಫುಟವಾಗಿ ಹೇಳುತ್ತಿತ್ತು. ಇದು ಸಭಾಪತಿ ಪಡೆದು ಸಂಗ್ರಹಿಸಿದ್ದ ವಸ್ತು. ಈಗ ಸಭಾಪತಿ ಸತ್ತು ಹೋಗಿದ್ದಾನೆ. ತಾನು ಯಾರನ್ನೂ ದರೋಡೆ ಮಾಡುತ್ತಿಲ್ಲ. ವಲ್ಲಿಯಮ್ಮನಿಗೆ ವಿದೇಶಿ ನೋಟುಗಳ ವಿಷಯ ಏನೊಂದೂ ತಿಳಿಯದು. ಆ ಸಂಗ್ರಹದ ಬಗೆಗೆ ಎಳ್ಳಷ್ಟೂ ಆಸಕ್ತಿ ಇಲ್ಲ. ಅದು ತರಬಹುದಾದ ಒಂದು ಲಕ್ಷ ರೂಪಾಯಿಗಳ ಅಗತ್ಯವೂ ಅವಳಿಗಿಲ್ಲ. ಅವಳು ಆಗರ್ಭ

ಶ್ರೀಮಂತನ ಹೆಂಡತಿ.

ಆ ವ್ಯತ್ಯಾಸ ಯಾರಿಗೂ ಗೊತ್ತಾಗುವುದಿಲ್ಲ.....ವ್ಯತ್ಯಾಸ? ಆ ಸಾಚಾ ನೋಟಿನ ಚೌಕಟ್ಟಿಗೆ ಸೇರಿಸುವ ಅಂತಹದೇ ಬೇರೊಂದು ನೋಟು ತೋರಬಹುದಾದ ವ್ಯತ್ಯಾಸ! ಆ ವ್ಯತ್ಯಾಸವನ್ನು ಕಂಡುಹಿಡಿಯಬಲ್ಲ ಸೂಕ್ಷ್ಮಮತಿ ಯಾರು?

ನೋಟು ತನ್ನನ್ನು ಸೇರಬೇಕು. ಅದನ್ನು ಕೆಲವು ದಿನಗಳವರೆಗೆ ಮಾರಾಟ ಮಾಡುವಂತಿಲ್ಲ. ಕೆಲವು ತಿಂಗಳು ಕಳೆದರೂ ಸರಿ. ಅದನ್ನು ಬಚ್ಚಿಟ್ಟು ಕೊಲ್ಲಿ ರಾಷ್ಟ್ರಗಳಿಗೆ ಮಾರುವುದು ಶ್ರಮವಲ್ಲ. ಅವರೆಗೆ ಅದನ್ನು ತನ್ನ ಸಂಗ್ರಹದಲ್ಲಿ ಯಾರೂ ಗಮನಿಸುವುದಿಲ್ಲ.

ಅವನಲ್ಲಿ ಸಮರ ಸಾಗಿತ್ತು.....ಹಿಂದಿನ ರಾತ್ರಿ ಮನೆಯಲ್ಲಿ ಸಾಗಿದ ಸಮರದಂತೆ. ಸಮರದ ಮಧ್ಯೆ ಬಿರುಗಾಳಿ. ಬಿರುಗಾಳಿ ಬೇರೆ ದಿಕ್ಕಿಗೆ ಹಾಯುವಂತೆ ತೋರಿತು. ತಾನು ಕಳ್ಳನಲ್ಲ! ಬದುಕಿನಲ್ಲಿ ಹಿಂದೆ ಇಂತಹ ಕೃತ್ಯ ತಾನು ನಡೆಸಿಲ್ಲ. ವ್ಯವಹಾರದಲ್ಲಿ ಇಂತಹ ಪ್ರಸಂಗವೊಂದು ಸಂಭವಿಸುವುದೆಂದು ಕನಸಿನಲ್ಲೂ ಕಲ್ಪಿಸಿಕೊಂಡಿರಲಿಲ್ಲ.

ವಂಚನೆ! ಇದು ವಂಚನೆಯೆ? ತನ್ನಲ್ಲಿ ಈವರೆಗೆ ಇದ್ದ ಖೋಟಾ ಕುವೈತ್ ನೋಟು ವಂಚನೆಯಿಂದಲೇ ತನ್ನಲ್ಲಿಗೆ ಬಂದದ್ದು. ತಾನು ವಂಚಕನಲ್ಲ.....

ಈ ನೋಟಿನ ಸೆಳೆತಕ್ಕೆ ಒಳಗಾಗುವುದೇಕೆ? ತನ್ನಲ್ಲಿ ಬೆಲೆಬಾಳುವ ಬೇರೆ ವಿದೇಶಿ ನೋಟುಗಳಿವೆ.....ಆದರೆ ಅತಿ ಹೆಚ್ಚಿನ ಹಣ ತರುವ ಯಾವ ನೋಟೂ ಇದರಂತಿಲ್ಲ!

ಸಮರದೊಂದಿಗೆ ಸೆಳೆತ. ಸೆಳೆತದಿಂದ ಹೊರ ಬಂದು ಒಂದು ರೀತಿಯ ಗೆಲುವು ಪಡೆಯಬಹುದಿತ್ತು. ಆದರೆ ಸ್ಥಿತಿ ಅವನನ್ನು ಸೋಲಿಸಿತು.....

ವಾನಂಬಾಡಿ ಬೆಚ್ಚಿ ಜಿಗಿಯುವಂತೆ ಮುಂಬಾಗಿಲಿನ ಗಂಟೆ ತೀಕ್ಷ್ಣವಾಗಿ

ಬಾರಿಸಿತು. ಕರೆಯನ್ನು ಉತ್ತರಿಸಲು ಮನೆಯ ಆಳಿನ ಹೆಜ್ಜೆಗಳು ಮೆಟ್ಟಿಲು ಇಳಿಯತೊಡಗಿದವು.

ಆಲ್ಬಮ್‌ನಲ್ಲಿ ಖಾಲಿಯಾಗಿದ್ದ ಚೌಕಟ್ಟಿನ ಮೇಲೆ ಪಾರದರ್ಶಕ ಪದರ ಅರ್ಧದಷ್ಟು ಅಂಟಿಕೊಂಡಿತ್ತು. ಅದನ್ನು ಪೂರ್ತಿಯಾಗಿ ಹಿಂದಕ್ಕೆ ಎಳೆದು ಸಿದ್ಧವಾಗಿಟ್ಟ.

* * *

ತೆಳು ಹೊರ ಬಾಗಿಲು ತೆರೆಯುತ್ತಿದ್ದ ಶಬ್ದ ಕೇಳಿಸಿತು. ತಡ ಮಾಡುವಂತಿರಲಿಲ್ಲ. ಕಾರ್ಯಕ್ಕೆ ಸರಿಯಾಗಿ ಸಾಕಾಗುವಷ್ಟು ವೇಳೆ ಇತ್ತು. ಕೋಟಿನ ಬಲ ಜೇಬಿಗೆ ಕೈ ಹೂಡಿ ಮನೆಯಿಂದ ತಂದಿದ್ದ, ಒಂದು ಮಡಿಕೆಯಲ್ಲಿದ್ದ ಖೋಟಾ ನೋಟನ್ನು ತೆಗೆದು ಆಲ್ಬಮ್‌ನ ಚೌಕಟ್ಟಿನ ಮೇಲೆ ಸರಿಯಾಗಿ ಹೊಂದಿಸಿ, ಮೇಲಿನ ಪಾರದರ್ಶಕದ ಪದರವನ್ನು ಎಳೆದು ಅದರ ಅಂಚುಗಳನ್ನು ಬೆರಳುಗಳಿಂದ ಒತ್ತಿದ.

ಡಿಟೆಕ್ಟರ್‌ನಿಂದ ಎತ್ತಿದ ಸಾಚಾ ನೋಟನ್ನು ಮೇಲೆ ತರುವುದರಲ್ಲಿ ಅರ್ಥನಾರಿ ಕೋಣೆಯೊಳಕ್ಕೆ ಬಂದಿದ್ದ.

ಆಲ್ಬಮ್‌ನ ತಳದಲ್ಲಿ ಎಡ ಬೆರಳುಗಳಿಂದ ನೋಟನ್ನು ಒತ್ತಿ ಹಿಡಿದಿದ್ದ.

"ಹಲೊ, ಮಿಸ್ಟರ್ ವಾನಂಬಾಡಿ.....ಆಗಲೇ ಬಂದು ಬಿಟ್ಟಿದೀರಿ..... ಗುಡ್.....ಎಲ್ಲಿ ಫಾಸ್ಟರ್?"

"ಮೇಲುಗಡೆ"

ಧ್ವನಿ ಯಾವುದೊ ಬಲದಿಂದ ಬಂದಹಾಗಿತ್ತು.

"ನಾವು ಈ ಕೇಸ್‌ನಲ್ಲಿ ಒಬ್ಬ ಸಂಶಯಿಯನ್ನ ಹಿಡಿದಿದ್ದೀವಿ, ನಿನ್ನೆ ಸಂಜೆಯಿಂದ ಈ ವಲಯದಲ್ಲಿ ಸಂದೇಹ ಬರೊ ರೀತಿಯಲ್ಲಿ ತಿರುಗಾಡ್ತಾ ಇದ್ದನಂತೆ"

ತಜ್ಞನ ಪ್ರತಿಕ್ರಿಯೆಗೆ ಕಾಯದೆ ಏನೊ ಸಾಧಿಸಿದವನಂತೆ ಹೊರ ಹೋಗಿ ಮೆಟ್ಟಿಲುಗಳ ತಳದಲ್ಲಿ ನಿಂತು ಕೂಗಿದ.

"ಫಾಸ್ಟರ್, ಬರ್ತೀಯಾ ಕೆಳಗಡೆ"

ವಾನಂಬಾಡಿ ಎಡಗೈ ಬೆರಳುಗಳಿಂದ ಆಲ್ಬಮ್ ತಳಕ್ಕೆ ಒತ್ತಿ ಹಿಡಿದಿದ್ದ ನೋಟನ್ನು ಹಾಗೆಯೇ ಹಿಡಿದು ಬಾಗಿಲ ದಿಕ್ಕಿಗೆ ದಿಟ್ಟಿಸಿದ. ಕಂಪಿಸುತ್ತಿದ್ದ ಬೆರಳುಗಳಿಗೆ ಜೀವ ಬಂತು. ಕ್ಷಣದಲ್ಲಿ ಒದ್ದೆಯಾದ ನೋಟು ಎಡ ಜೇಬು ಸೇರಿತು. ಮತ್ತೊಂದು ಕ್ಷಣದಲ್ಲಿ ಜಲಚಿಹ್ನೆಯ ಪರೀಕ್ಷಕ ಬಲ ಜೇಬಿಗಿಳಿಯಿತು.

ಫಾಸ್ಟರ್ ಇಳಿದು ಬಂದಿದ್ದ. ಹಜಾರದಲ್ಲಿ ಅವನು ಸಹೋದ್ಯೋಗಿಯೊಂದಿಗೆ ಚರ್ಚಿಸುತ್ತಿದ್ದುದು ಗಟ್ಟಿಯಾಗಿ ಕೇಳುತ್ತಿತ್ತು. ಅರ್ಥನಾರಿ ಸಂಶಯಿಯನ್ನು ತನ್ನೊಂದಿಗೆ ಕರೆತಂದಿರುವುದಾಗಿ ಹೇಳುತ್ತಿದ್ದ. ಅವನ ಲಕ್ಷಣಗಳನ್ನು ವಿವರಿಸುತ್ತಿದ್ದ.

ಫಾಸ್ಟರನ ಕಂಠ ಏರಿತ್ತು!

"ನಿನಗೆ ಹುಚ್ಚು, ಅರ್ಥನಾರಿ! ಹರಕಲು ಬಟ್ಟೆ, ಕೆದರಿದ ತಲೆ. ಗಡ್ಡದ ಮುಖ ಅಂತ ಹೇಳ್ತೀಯ. ಅಂತಾ ವ್ಯಕ್ತಿಯನ್ನು ಸಭಾಪತಿ ಮನೆಯ ಹೊಸಿಲೂ ಮೆಟ್ಟಿಸ್ತಾ ಇರ್ಲಿಲ್ಲ, ಅಂತೋನು ಒಂದು ವೇಳೆ ಒಳಗೆ ಬಂದಿದ್ರೆ ಮನೆಯಲ್ಲಿರೊ ವಸ್ತುಗಳನ್ನೆಲ್ಲಾ ಗುಡಿಸಿಕೊಂಡು ಹೋಗ್ಬಿಡ್ತಿದ್ದ.....ಆತುರ ಬೇಡ. ವಾನಂಬಾಡಿ ಅಭಿಪ್ರಾಯ ಕೊಟ್ಟ ಮೇಲೆ ನಾಳೆಯಿಂದ ಬೇರೆ ಸಂಶಯಿಗಳನ್ನು ಬೇಟೆ ಆಡೋದಿಕ್ಕೆ ಇಳಿಯೋಣ."

"ಈಗ ನಾನು ಕರತಂದಿರೊ ಮನುಷ್ಯನ್ನ ಸ್ವಲ್ಪ ಅಲ್ಲಾಡಿಸಿ ನೋಡು"

"ಸರಿ, ನೀನು ಹಿಡಕೊಂಡು ಬಂದಿರೋ ತಪ್ಪಿಗೆ ಅವನ್ನ ಪ್ರಶ್ನೆ ಮಾಡ್ತೀನಿ. ಆದರೆ ನೀನು ತಪ್ಪು ಮಾಡಿದೀಯ ಅಂತ ಮಾತ್ರ ಖಂಡಿತ ಇಲ್ಲಿಂದಲೇ ಹೇಳಬಲ್ಲೆ"

ಕಣ್ಣಾಲಿಗಳನ್ನು ಜೋಲಿಸಿಕೊಂಡು ವಾನಂಬಾಡಿ ತನ್ನ ಕೆಲಸದಲ್ಲಿ ತೊಡಗಿದ. ಹನ್ನೊಂದೂವರೆಯ ಹೊತ್ತಿಗೆ ಆಲ್ಬಮ್‌ನಲ್ಲಿ ಕಡೆಯ ದೇಶವಾದ ಜಾಂಬಿಯಾ ತಲುಪಿದ. ಕತ್ತು ನೋವು ಬಂದಿತ್ತು. ಕಣ್ಣುಗಳಲ್ಲೂ ಲಘುವಾದ

ಉರಿತ. ನಿಟ್ಟುಸಿರು ಹಾಕಿ ಕುರ್ಚಿಯಲ್ಲಿ ಸೆಟೆದು ಕುಳಿತುಕೊಳ್ಳುವ ಹೊತ್ತಿಗೆ ಫಾಸ್ಟರ್ ತನ್ನ ಸಹೋದ್ಯೋಗಿಯೊಂದಿಗೆ ಹಿಂತಿರುಗಿದ. ಅವರಿಬ್ಬರಲ್ಲಿ ಇನ್ನೂ ಚರ್ಚೆ ನಡೆಯುತ್ತಲೇ ಇತ್ತು.

ಫಾಸ್ಟರ್ ತನ್ನ ನಿಲುವನ್ನು ಸಮರ್ಥಿಸಿಕೊಳ್ಳುತ್ತಿದ್ದ.

"ನಾನು ಹೇಳ್ದೆ, ಅವನು ಸಂಶಯಿ ಅನ್ನಿಸಿಕೊಳ್ಳೋದಿಕ್ಕೂ ಲಾಯಕ್ಕಲ್ಲ ಅಂತ, ಅವನೊಬ್ಬ ದರವೇಸಿ. ನೀನು ತಪ್ಪು ಊಹೆ ಮಾಡ್ದೆ..... ಅದೊಂದು ಫಾಲ್ಸ್ ಅಲಾರಂ ಅಷ್ಟೇ"

ಎಂದವನು ವಾನಂಬಾಡಿಯ ಬಳಿಗೆ ಬಂದ.

"ಹೇಗೆ ನಡೆದಿದೆ, ಮಿಸ್ಟರ್ ವಾನಂಬಾಡಿ?"

ವಾನಂಬಾಡಿ ತಲೆಯ ಹಿಂದಕ್ಕೆ ಆರಾಮವಾಗಿ ಎರಡು ಕೈಗಳನ್ನೂ ಸೇರಿಸಿದ.

"ಈಗ ತಾನೇ ಪೂರೈಸ್ದೆ. ಈ ಮೂರು ಆಲ್ಬಮ್‌ಗಳು ಪೂರ್ಣ ಆರೋಗ್ಯದಿಂದಿವೆ ಅಂತ ಸರ್ಟಿಫಿಕೇಟ್ ಕೊಡಬಲ್ಲೆ. ಕ್ಯಾಟಲಾಗ್‌ನಿಂದ ಒಂದೂ ಬಿಡದೆ ಆಲ್ಬಮ್ ಜೊತೆ ತಾಳೆ ನೋಡ್ದೆ. ಆಲ್ಬಮ್‌ನಿಂದ ಯಾವುದೂ ಮಾಯ ಆಗಿಲ್ಲ, ಒಂದು ರುಪಾಯಿ ಮೌಲ್ಯದ ನೋಟು ಕೂಡಾ ಯಾರೂ ಇಲ್ಲಿಂದ ಎತ್ತಿಲ್ಲ"

"ನಾನೂ ಹಾಗೇ ಭಾವಿಸಿದ್ದೆ"

ಅರ್ಥನಾರಿ ಮಧ್ಯೆ ತನ್ನ ಅಭಿಪ್ರಾಯ ನೀಡಿದ.

"ಆದರೂ ನಾನು ಹೇಳೋದು ಯಾವನೊ ನೋಟುಗಳ ಪಿಚಾಚಿಯೇ ಇಲ್ಲಿಗೆ ಬಂದಿರೋದು ಅಂತ"

ಫಾಸ್ಟರ್ ಜೋರು ನಗೆ ಹಾಕಿದ.

"ನಿನಗೆ ಬುದ್ಧಿ ನೆಟ್ಟಗಿಲ್ಲ, ಅರ್ಥನಾರಿ. ಈಗ ಹೀಗೆ ಹೇಳ್ತೀದಿಯೆ ಆದರೆ ನೀನು ಸಂಶಯಿ ಅಂತ ಕರಕೊಂಡು ಬಂದಿದ್ದು ಒಬ್ಬ ದರವೇಶಿನ"

"ಅವನು ದರವೇಶಿ ಇರಬೋದು. ದರವೇಶಿ ನೋಟಿಗೋಸ್ಕರ ಬಂದಿರಲಾರನೆ? ಬಂದಿದ್ದೋನಿಗೆ ಯಾವುದೊ ಅಡಚಣೆ ಆಗಿ ಹೆದರಿ ತನಗೆ ಬೇಕಾದ್ದನ್ನ ತೊಗೊಳೋದಿಕ್ಕೆ ಕಾಲಾವಕಾಶವಿಲ್ಲದೆ ಹಾಗೇ ಹೊರಟು ಹೋಗಿದಾನೆ"

ಕಾಲಾವಕಾಶವಿಲ್ಲದೆ.....! ವಾನಂಬಾಡಿ ತನ್ನಲ್ಲೇ ವ್ಯಂಗ್ಯದಲ್ಲಿ ನಕ್ಕು ಹೇಳಿಕೊಂಡ.

"ಮೂರ್ಖ ಪೊಲೀಸ್ ಈ ಆಲ್ಬಮ್‌ನಿಂದ ಒಂದು ನೋಟನ್ನ, ಅದೂ ತನಗೆ ಬೇಕಾಗಿರೊ ನೋಟು ಅನ್ನೋದು ಗೊತ್ತಾದ ಮೇಲೆ, ಅದನ್ನ ಎತ್ತಿಕೊಳ್ಳೋದಿಕ್ಕೆ ಎಷ್ಟು ಮಾತ್ರ ಕಾಲಾವಕಾಶ ಬೇಕು?"

ನೋಟು ಎತ್ತಿಕೊಂಡಿದ್ದ ಚಾಣಾಕ್ಷ ಮೇಲೆದ್ದು ಆಕಳಿಸಿದ.

"ಮಿಸ್ಟರ್ ಇನ್ಸ್‌ಪೆಕ್ಟರ್, ಮನೆಗೆ ಹೋಗ್ತೀನಿ. ರಾತ್ರಿಯ ಕೆಲಸ ಬಹಳ ಸುಸ್ತು ಮಾಡತ್ತೆ"

ಪೊಲೀಸ್ ಅಧಿಕಾರಿಯ ಕಾರಿನಲ್ಲಿ ಮನೆಯ ದಾರಿ ಹಿಡಿದ ವಾನಂಬಾಡಿ.

"ನಾನು ಸಾಮಾನ್ಯವಾಗಿ ಬೇರೆಯವರ ವ್ಯವಹಾರದಲ್ಲಿ ಇಲ್ಲದ ಆಸಕ್ತಿವಹಿಸಿ ಅವರಿಗೆ ಕಿರುಕುಳ ಕೊಡೊ ಸ್ವಭಾವದೋನಲ್ಲ....."

ವಾನಂಬಾಡಿ ಡ್ರೈವ್ ಮಾಡುತ್ತಿದ್ದ ಇನ್ಸ್‌ಪೆಕ್ಟರ್ ಮಾತಿನಿಂದಾಗಿ ಪಕ್ಕನೆ ತಿರುಗಿದ. ಫಾಸ್ಟರ್‌ನ ಅನಗತ್ಯವಾದ ಮಾತು ಅದು.

"ನನ್ನ ಹವ್ಯಾಸದ ವಿಷಯಕ್ಕೇ ನೀವು ಹೀಗೆ ಹೇಳಿದ್ದು"

"ನೀವು ಅದನ್ನ ಹವ್ಯಾಸ ಅಂತ ಎಷ್ಟೇ ಹೇಳಿದ್ರೂ ಅದು ನಿಮ್ಮ ಮುಖ್ಯವಾದ ಕಸುಬು ಅಂತ ಚೆನ್ನಾಗಿ ಬಲ್ಲೇ.....ವಿದೇಶಿ ನೋಟುಗಳ ಸಂಗ್ರಹಕ್ಕೆ ಅವಕಾಶ ಇದೆ.....ಅದೂ ಒಂದು ಮಿತಿಯಲ್ಲಿ. ಆದರೆ ವಿದೇಶಿ ನೋಟುಗಳ ವ್ಯಾಪಾರ ಮಹಾಪರಾಧ. ಪೊಲೀಸ್ ಸಾಮಾನ್ಯವಾಗಿ ಅದಕ್ಕೆ ತಲೆ ಹಾಕೋದಿಲ್ಲ. ನೀವುಗಳು ಎಕ್ಸ್ಚೈಸ್ ಇಲಾಖೆಯೋರನ್ನ ಸರಿ ಮಾಡಿ

ಇಟ್ಕೊಂಡಿರ್ತೀರಿ.....ಆದರೂ ನಾನೊಂದು ಮಾತು ಹೇಳ್ತೀನಿ, ವಾನಂಬಾಡಿ. ಅದು ನಿಮಗೆ ಹಿಡಿಸೋದಿಲ್ಲಾಂತಲೂ ಬಲ್ಲೆ"

"ಹೇಳಿ . ಪರವಾಗಿಲ್ಲ"

"ಇನ್ನು ಈ ವಿದೇಶಿ ನೋಟುಗಳ ಕಳ್ಳ ವ್ಯಾಪಾರ ಬಿಟ್ಬಿಡಿ. ನೀವು ಈಗಾಗಲೇ ಸಾಕಷ್ಟು ಹಣ ಮಾಡಿದ್ದೀರಿ. ನಿಮ್ಮನ್ನ ಅವಲಂಬಿಸಿರೊ ಬಂಧುಗಳು ಯಾರು ಇಲ್ಲಾಂತ ಭಾವಿಸ್ತೀನಿ"

"ನೀವು ಹೇಳಿದ್ದು ಸರಿ. ಈ ವ್ಯಾಪಾರ ಖಂಡಿತ ಬಿಟ್ಟು ಬಿಡ್ತೀನಿ"

ವಾನಂಬಾಡಿ ನಿಖರವಾಗಿ ಸುಳ್ಳು ಹೇಳಿದ್ದ. ಅವನು ಬಿಟ್ಟು ಬಿಡುವ ವ್ಯಾಪಾರ ಅಲ್ಲ ಅದು. ಅವನ ಮನಸ್ಸು ತಪ್ಪಿತಸ್ಥನೆಂಬ ಭಾವನೆಯನ್ನು ಸ್ವಲ್ಪವೂ ಹೊಂದಿರಲಿಲ್ಲ. ಎಡ ಜೇಬಿನಲ್ಲಿದ್ದ ಒಂದು ಲಕ್ಷ ಮೌಲ್ಯದ ಬಣ್ಣದ ಕಾಗದ ಅವನನ್ನು ಎಲ್ಲಕ್ಕೂ ಒಂದು ಎತ್ತರವಾದ ಮಟ್ಟದಲ್ಲಿ ಹಿಡಿದಿತ್ತು. ಜೇಬಿನಲ್ಲಿ ಹಗುರವಾಗಿ ಸೇರಿದ್ದರೂ ಅದಕ್ಕೆ ಎಷ್ಟೊಂದು ಭಾರದ ಬೆಲೆ!

"ನೀವು ಕೊಟ್ಟ ಅಭಿಪ್ರಾಯಗಳಿಗೆ ಮತ್ತೆ ಥ್ಯಾಂಕ್ಸ್ ಹೇಳ್ತಿದೀನಿ, ಮಿಸ್ಟರ್ ವಾನಂಬಾಡಿ"

ಮನೆಯ ಮುಂದೆ ಅವನನ್ನು ಇಳಿಸಿದಾಗ ಕೃತಜ್ಞತೆ ಸೂಚಿಸಿದ ಫಾಸ್ಟರ್, ವಾನಂಬಾಡಿ ಅವನಿಗೆ ಸೂಕ್ತ ಬದಲು ಹೇಳಲಾಗದಷ್ಟು ತನ್ನಿಂದಲೇ ಹೊರಗಾದವನಾಗಿದ್ದ. ಒದರುವಂತೆ ಕೈ ಆಡಿಸಿದ.

"ನನಗೂ ಅದೊಂದು ಅದ್ಭುತ ಅನುಭವ! ಅದು ತಪ್ಪಿ ಹೋಗಿದ್ರೆ ನನಗೆ ನಷ್ಟ ಆಗ್ತಿತ್ತು....."

ಅವನು ನಾಲಗೆ ಕಚ್ಚಿದುದನ್ನು ಇನ್ಸ್‌ಪೆಕ್ಟರ್ ಗಮನಿಸಿರಲಿಲ್ಲ. ಆ ಮಾತು ಆಡಬಾರದಿತ್ತು.....ಓ, ಫಾಸ್ಟರ್ ಅದನ್ನು ಅರ್ಥಮಾಡಿ ಕೊಳ್ಳುವಷ್ಟು ಪ್ರಜ್ಞಾವಂತನಲ್ಲ.

ಬಿಲದ ಕೋಣೆ ಹೊಕ್ಕು ದೀಪ ಹೊತ್ತಿಸಿ ಬಾಗಿಲಿನ ಬೀಗ ಹಾಕಿದ.

ಉಕ್ಕಿನ ಬೀರು ತೆಗೆದು ತನ್ನ ಅಗ್ಗದ ಬೆಲೆಯ ಆಲ್ಬಮ್ ಎಳೆದು ಅದರಲ್ಲಿ ಕುವೈತ್‌ನ ಖೋಟಾ ನೋಟು ಇದ್ದ ಪುಟ ತೆರೆದ. ಎಡ ಜೇಬಿನಲ್ಲಿದ್ದ ಸಾಚಾ ನೋಟು ಹೊರಬಂತು. ಎರಡು ಕ್ಷಣ ಅದನ್ನು ಬೆಳಕಿಗೆ ಹಿಡಿದು ನೋಡಿ ಮತ್ತೊಮ್ಮೆ ಉದ್ರೇಕಗೊಂಡ. ಅದು ಬೇಗನೆ ತನ್ನ ಸ್ಥಾನ ಸೇರಬೇಕು.....ಆಲ್ಬಮ್‌ನಲ್ಲಿ ಸ್ಥಾನ ಪಡೆದು ಭದ್ರವಾಯಿತು.....

ಆಲ್ಬಮ್ ಎತ್ತಿ ಒಮ್ಮೆ ಕೈನಲ್ಲಿ ಸಂತಸದಿಂದ ತೂಗಿ ಬೀರುವಿಗೆ ಸೇರಿಸಲು ಹೆಜ್ಜೆ ಸರಿಸಿದಾಗ ಹೊರಗಡೆಯ ಮಸುಕಾದ ಶಬ್ದ ಕಿವಿಗೆ ಬಿತ್ತು!

ಸರಕ್ಕನೆ ತಿರುಗಿ ಮಿಂಚಿನ ವೇಗದಲ್ಲಿ ಬಾಗಿಲು ಸೇರಿ ಅದೇ ಕ್ಷಣದಲ್ಲಿ ಬಾಗಿಲು ಎಳೆದು ಹಾಕಿದ. ಅವನಿಂದ ಒಂದು ಅಡಿಯ ದೂರಕ್ಕೆ ಹೊರಗಡೆ ಆಳು ಅಮಾಸೆ ನಿಂತಿದ್ದ. ಅದೇ ತಾನೆ ಹಜಾರದಿಂದ ಬಾಗಿಲು ತಟ್ಟಲು ಬಂದವನಂತೆ ತೋರಲು ಪ್ರಯತ್ನಿಸಿದ. ವಾನಂಬಾಡಿಗೆ ಅದು ಚೆನ್ನಾಗಿ ಅರ್ಥವಾಗಿತ್ತು.....ಆಳು ಕಳೆದ ಕೆಲವು ನಿಮಿಷಗಳವರೆಗೆ ಬಾಗಿಲ ಬಳಿ ತುದಿಗಾಲಿನಲ್ಲಿ ನಿಂತು ತನ್ನನ್ನು ಬೀಗದ ರಂಧ್ರದ ಮೂಲಕ ನೋಡುತ್ತಿದ್ದ!

ವಿವರ್ಣಗೊಂಡಿದ್ದ ಅವನ ಮುಖವನ್ನು ಗಮನಿಸಿದ.

"ನಾನು ತಿಳಿದೆ ನೀವು ಮಲಗಿಬಿಟ್ರಿ ಅಂತ....."

ಮಾಲು ಸಹಿತ ಸಿಕ್ಕಿ ಬಿದ್ದ ಕಳ್ಳನಂತೆ ಧ್ವನಿಸಿದ.

"ಈ ಹೊತ್ನಲ್ಲಿ ಏನು ಮಾಡ್ತಿದೀಯ ಇಲ್ಲಿ? ನನ್ನ ಮೇಲೆ ಹೊಂಚು ಹಾಕಿದೀಯ!"

ಅಬ್ಬರಿಸಿದ.

ಆಳು ಬೆದರಿ ಕಣ್ಣು ಪದೇ ಪದೇ ಮುಚ್ಚಿದ, ತೆರೆದ.

"ಇಲ್ಲ, ಮೊದಲಾಳಿ. ನಾನು ಬಂದೆ ನಿಮ್ಮನ್ನ ಕೇಳೋದಿಕ್ಕೆ....."

"ಏನು ಕೇಳೋದಿಕ್ಕೆ?"

"ಹೊರಗಡೆ ಬಾಗಿಲಿಗೆ ಬೀಗ ಹಾಕಲೆ ಅಂತ"

ಹಲ್ಲು ಕಚ್ಚಿ ಕತ್ತು ಓರೆ ಮಾಡಿ ಅವನನ್ನು ನುಂಗುವಂತೆ ನೋಡಿದ ಯಜಮಾನ.

"ನನ್ನ ಕೇಳಿ ಯಾವತ್ತು ಹೊರಗಡೆ ಬೀಗ ಹಾಕಿದ್ದೆ? ನನ್ನ ಕೇಳದೆ ನೀನು ಮಾಡ್ತಿದ್ದ ಕೆಲಸ ಅದು. ಕಳ್ಳನ ಹಾಗೆ ಹಾರಿಕೆ ಮಾತು ಆಡ್ತಿದೀಯ .....ಕತ್ತೆ !"

ಹಿಂದಕ್ಕೆ ತಿರುಗಲಿದ್ದವನು ಧ್ವನಿ ತಗ್ಗಿಸಿದ.

"ಅಮಾಸೆ ! ನೀನು ಈ ಸಂದಿನಲ್ಲಿ ನೋಡ್ತಿದ್ದೆ"

ಬಾಗಿಲಿನ ಬೀಗದ ರಂಧ್ರಕ್ಕೆ ಬೆರಳು ಮಾಡಿದ. ಅಮಾಸೆ ಉಗುಳು ನುಂಗಿ ನಕಾರದಲ್ಲಿ ಮುಖ ಅಲುಗಿಸಿದ.

"ಮೊದಲಾಳಿ! ಆಂಡವನ ಆಣೆ ಹಾಗೆ ಮಾಡ್ಲಿಲ್ಲ"

ಅವನ ಕಪ್ಪು ಮುಖವನ್ನು ಅಪ್ಪಳಿಸುವಂತೆ, ಬಾಗಿಲು ಅದುರಿ ಹೋಗುವಂತೆ ದಡಕ್ಕನೆ ಮುಚ್ಚಿದ ಒಡೆಯ. ಹಣೆಯ ಬೆವರು ಒತ್ತಿ ನಿಧಾನವಾಗಿ ಹೆಜ್ಜೆ ಹಿಂದಕ್ಕೆ ಸರಿಸಿ ಆಲ್ಬಮ್ ಬೀರುವಿಗೆ ಸೇರಿಸಿದ..... ಕೈಗಳನ್ನು ನೋಡಿಕೊಂಡ. ಉದ್ರೇಕಗೊಳ್ಳದಿದ್ದರೂ ಅವು ಕಂಪಿಸುತ್ತಿವೆ.

ಉಸಿರು ಏರಿಳಿತದಲ್ಲಿತ್ತು. ಅದೇ ಘಳಿಗೆಯಲ್ಲಿ....ಅಮೂಲ್ಯವಾದ ಬಣ್ಣದ ಕಾಗದವನ್ನು ಆಲ್ಬಮ್‌ಗೆ ಸೇರಿಸುವ ಘಳಿಗೆಯಲ್ಲೇ ತನ್ನನ್ನು ಅವನು ಗಮನಿಸಿದ! ಇಡೀ ವ್ಯವಹಾರದಲ್ಲಿ ತಾನು ಎಚ್ಚರದಪ್ಪಿದ್ದು ಅದೊಂದು ಕ್ಷಣ ಮಾತ್ರ! ಎಷ್ಟೋ ಸಾರಿ ಆ ಬೀಗದ ರಂಧ್ರಕ್ಕೆ ಮುಚ್ಚುವಂತೆ ಕರವಸ್ತ್ರ ಸುತ್ತಬೇಕೆಂದುಕೊಂಡಿದ್ದರೂ ಆ ಕೆಲಸ ಮಾಡಲಾಗಲಿಲ್ಲ.

ವಾನಂಬಾಡಿ ತನ್ನನ್ನು ಸಂತೈಸಿಕೊಂಡ. ಇದು ತನ್ನ ವಿಪರೀತದ ತರ್ಕ. ಅನಗತ್ಯವಾದ ಕಲ್ಪನೆ. ಅಮಾಸೆಯ ಕುರಿತು ಅಪಾಯದ ಚಿಂತನೆಗಳು ಬೇಡ. ಅವನು ಸೌಜನ್ಯ, ರೀತಿಗಳು ತಿಳಿಯದ ಮನುಷ್ಯ. ಓದು, ಬಹರ ತಿಳಿಯದವನು. ನೋಟುಗಳ ವ್ಯವಹಾರಗಳ ಬಗೆಗೆ ಮೊದಲಿನಿಂದ ಅವನಿಗೆ

ತಿರಸ್ಕಾರದ ದೃಷ್ಟಿ. ತಾನು ಬಣ್ಣದ ಕಾಗದಗಳ ಹುಚ್ಚನಂತೆ! ತಾನು ಬಣ್ಣದ ಹುಳುವೆಂದು ಅಂಚೆ ಪೇದೆಗೆ ಹೇಳಿದ್ದನ್ನು ಕೇಳಿಸಿಕೊಂಡಿರುವೆ.....ಅವೆಲ್ಲಾ ನಿಜ. ಆದರೆ ಅಮಾಸೆ ತನ್ನ ಮೇಲೆ ಹೊಂಚು ಹಾಕುವ ಕೆಲಸ ಮಾಡುವವನಲ್ಲ. ರಂಧ್ರದಲ್ಲಿ ಕದ್ದು ನೋಡಿದ್ದರೂ ಅವನಿಗೆ ಅಷ್ಟು ದೂರಕ್ಕೆ ಅದೇನೆಂಬುದು ಅರ್ಥವಾಗಿಲ್ಲ.....ಅದು ಎಂತಹ ವಸ್ತು, ಎಲ್ಲಿಂದ ಬಂತು, ಹೇಗೆ ಬಂತು.....ಓ ಅವನಿಗೇ ಹೊಳೆಯದ ಪ್ರಶ್ನೆಗಳು ತನ್ನನ್ನೇಕೆ ಕಾಡಬೇಕು? ವಿಪರೀತದ ಊಹೆ ತನ್ನದು!

ಆದರೂ ಅಮಾಸೆ ವಿಶ್ವಾಸಕ್ಕೆ ಅಹರ್ನಾದವನಲ್ಲ. ಕಲ್ಪನೆ ಸಂವಾದ ಸೃಷ್ಟಿಸಿತು.

"ಹಿಡಿದ್ಬಿಟ್ಟೆ ಮೊದಲಾಳಿ! ದೀಪ ಹಾಕಿ ಬಾಗಿಲು ಬಿಗಿಸಿ ಭದ್ರವಾಗಿ ಕೂತು ಆ ಕೆಲಸ ಮಾಡ್ದೆ ನೀನು. ಆದರೆ ಆ ಬೆಳಕಿನಲ್ಲಿ ಎಷ್ಟೊಂದು ಚೆನ್ನಾಗಿ ಕಾಣುತ್ತೆ ಅದು! ಬಯಲಲ್ಲಿ ನೀನು ಬತ್ತಲೆ ನಿಂತ ಹಾಗೆ..... .....ನೋಡು, ನಿನ್ನ ಮುಖ ಹೇಗೆ ಕೆಟ್ಹೋಯ್ತು? ನನ್ನ ಯಾವಾಗ್ಲೂ ನಂಬಲಿಲ್ಲ ನೀನು. ಹಾಗೆ ನಂಬದೆ ಇದ್ದೋರು ಮಹಾ ಕಳ್ಳರು.....ಈಗ ನನಗೆ ಸಿಕ್ಕಿ ಹೋದೆ.....ಸಮಯ ಕಾಯ್ತಾ ಇದೀನಿ. ನಾನು ಎಂತೋನು ಅನ್ನೋದು ತೋರಿಸ್ತೀನಿ.....ವಣ್ಣ ಪುಳು!"

"ಏಯ್ .....ಪಿಶಾಚಿ!"

ಜೋರಾಗಿ ಅರಚಿದ ವಾನಂಬಾಡಿ ಬೆಚ್ಚಿ ಎಚ್ಚರಗೊಂಡಿದ್ದ. ಬೆವರು ಧಾರಾಕಾರವಾಗಿತ್ತು.

ಬಲು ಕೆಟ್ಟ ಕಲ್ಪನೆ ! ಅಮಾಸೆ ಅಂತಹವನಲ್ಲ.....

* * *

ಸಭಾಪತಿಯ ಕೊಲೆ ಪ್ರಕರಣದಲ್ಲಿ ವಾನಂಬಾಡಿ ಪೊಲೀಸರ ತನಿಖೆಗೆ ತನ್ನ ವಿಶೇಷ ರೀತಿಯ ತಜ್ಞ 'ಸಹಕಾರ'ವನ್ನು ನೀಡಿ ಸರಿಯಾಗಿ ಒಂದು ವಾರ ಕಳೆಯಿತು. ಆ ಅವಧಿಯಲ್ಲಿ ಪೊಲೀಸರ ತನಿಖೆ ಕಾರ್ಯ ಸ್ವಲ್ಪವೂ

ಮುಂದುವರಿದಿರಲಿಲ್ಲ. ಯಾವುದೊ ಸ್ಥಳೀಯ ಪತ್ರಿಕೆ ತಿಳಿಸಿದಂತೆ ಸಭಾಪತಿಯ ಮಗಳು ವಲ್ಲಿಯಮ್ಮ ಉತ್ತರ ಆರ್ಕಾಟ್‌ಗೆ ಹಿಂತಿರುಗಿದ್ದಳು. ಪ್ರಕರಣ ಮುಗಿದ ಮೇಲೆ ಪೊಟ್ಟಿ ಅಳಗಪ್ಪನ್ ಬೀದಿಯಲ್ಲಿನ ತನ್ನ ತಂದೆಯ ಮನೆಯನ್ನು ಮಾರುವಳೆಂಬ ಸಂಗತಿಯೂ ಇತ್ತು.

ಸಭಾಪತಿಯ ಆಲ್ಬಮ್‌ಗಳ ಬಗ್ಗೆ ಯಾವ ಉಲ್ಲೇಖವೂ ಇರಲಿಲ್ಲ. ವಾನಂಬಾಡಿ ಮೆದು ನಗೆಯ ಮುಖದಲ್ಲಿ 'ಹಾಯ್' ಎಂದ.

ಅದೊಂದು ರೀತಿಯಲ್ಲಿ ಅತಿ ತಣ್ಣನೆಯ, ನಿಶಬ್ದವಾದ ಕೊಲೆ. ಸಾರ್ವಜನಿಕರಲ್ಲಿ ಆಸಕ್ತಿ, ಕುತೂಹಲ ಕೆರಳಿಸಿರಲಿಲ್ಲ. ಪತ್ರಿಕೆಯ ಸಂಪಾದಕರೂ ಅದನ್ನು ಸಜೀವವಾಗಿಡುವ ಪ್ರಯತ್ನ ಮಾಡಿರಲಿಲ್ಲ.

ಪೊಟ್ಟಿ ಅಳಗಪ್ಪನ್ ಬೀದಿಯಲ್ಲಿನ ಸಭಾಪತಿಯ ಮನೆಗೆ ಕಡೆಯ ಸಲ ವಾನಂಬಾಡಿ ಭೇಟಿ ಇತ್ತ ಒಂದು ವಾರಕ್ಕೆ ಸರಿಯಾಗಿ ಆ ದಿನ ಮಧ್ಯಾಹ್ನ ಆಳು ಗಂಭೀರವಾಗಿ ಘೋಷಿಸುವಂತೆ ಹೇಳಿದ.

"ನಿಮ್ಮನ್ನ ನೋಡೋದಿಕ್ಕೆ ಯಾರೊ ಹೊಸ ಮನುಷ್ಯ ಹೊರಗಡೆ ಕಾದಿದ್ದಾನೆ"

"ಯಾರು?"

ಸರಿಯಾದ ಮೂಡ್‌ನಲ್ಲಿರದಿದ್ದ ಒಡೆಯ ಕಣ್ಣು, ಮೂಗು, ಬಾಯಿ ಮೂರನ್ನೂ ಅತಿ ಹತ್ತಿರಕ್ಕೆ ಎಳೆಯುವಂತೆ ಮುಖ ಕಿವಿಚಿದ.

"ಯಾರೂಂತ ಹೇಳ್ಲಿಲ್ಲ"

"ಯಾವುದಾದ್ರೂ ಇಲಾಖೆಯ ಇನ್ಸ್‌ಪೆಕ್ಟರ್?"

"ಹಾಗೆ ಕಾಣ್ಲಿಲ್ಲ"

"ಹೆಸರೂ ಹೇಳಲಿಲ್ಲವೆ?"

"ವಿಚಿತ್ರವಾದ ಹೆಸರು ಹೇಳ್ದ. ಆ ಹೆಸರು ಮರೆತು ಬಿಟ್ಟೆ"

ತಲೆ ಕೆರೆದ ಅಮಾಸೆ. ನಿಮಿಷ ಯೋಚಿಸಿದ ವಾನಂಬಾಡಿ ಎದ್ದು ನಿಂತ.

"ನಾನೇ ನೋಡ್ತೀನಿ"

ವಿಚಿತ್ರ ಹೆಸರಿನವನನ್ನು ನೋಡಲು ಹೊರಬಂದ.

"ನಾನು ಪಿಚಾಂಡಿ....."

ಎನ್ನುತ್ತಾ ಹೊಸಬ ಕೈ ಚಾಚಿದ, ಸುಕ್ಕು ಗಟ್ಟಿದ ನಿರಾಸಕ್ತ ಕೈಯನ್ನು ಆ ಕೈಗೆ ಕೂಡಿಸಿದ ವಾನಂಬಾಡಿ .....ಪಿಚಾಂಡಿ!

"ಪಿಚಾಂಡಿ?"

ಮೆಲ್ಲನೆ ಆ ಹೆಸರು ಪ್ರತಿಧ್ವನಿಸಿದ. ಅಂತಹ ಹೆಸರು ಎಂದೂ ಎಲ್ಲೂ ಕೇಳಿಲ್ಲ. ಅಗತ್ಯವಿಲ್ಲವಾದರೂ ಭೇಟಿಯಾಗಲೇಬೇಕು, ಮಾತಾಡಲೇಬೇಕು. ಅದು ವ್ಯಾಪಾರಿಯ ಧರ್ಮ. ಈ ವ್ಯಾಪಾರ ಸಾಕು ಮಾಡುವೆನೆಂದು ಇನ್ಸ್‌ಪೆಕ್ಟರ್ ಫಾಸ್ಟರ್‌ಗೆ ಹೇಳಿದ್ದಾಗಿದೆ. ಈಗಿರುವ ಗಿರಾಕಿಗಳೇ ಸಾಕು. ಹೊಸ ಗಿರಾಕಿಗಳು ಬೇಡ.

ವಾನಂಬಾಡಿ ಆ ಮನುಷ್ಯನನ್ನು ನೋಡಿದ. ವಿಚಿತ್ರ ಹೆಸರಿನಂತೆಯೇ ಆಸಕ್ತಿ ಹುಟ್ಟಿಸುವ ಆಕಾರ, ಲಕ್ಷಣ.

ದಪ್ಪನೆಯ ಹೊಟ್ಟೆಯ ಕುಳ್ಳು ಮನುಷ್ಯ. ರಕ್ತ ಚಿಮ್ಮಿಸುವ ಕೆಂಪು ರಂಗಿನ, ಮಗುವಿನ ಮುಖ. ಚೂಪಾಗಿ ಇಳಿದ ತೆಳುವಾದ ಹೋತದ ಗಡ್ಡ. ಕಪ್ಪು ದಾರದಿಂದ ಎದೆಯ ಮೇಲೆ ಇಳಿ ಬಿದ್ದ ಕನ್ನಡಕ, ದೊಗಳೆ ತುಂಡು ಕೋಟು, ದೊಗಳೆ ಪ್ಯಾಂಟು.

"ವ್ಯಾಪಾರದೊಂದಿಗೆ ನಿಮ್ಮನ್ನ ನೋಡೊ ಸಂತೋಷವೂ ಸೇರಿಸಿ ಕೊಂಡು ಬಂದಿದೀನಿ"

ಎಂದು ನಗೆ ಮುಖದಲ್ಲಿ ಮಾತು ಪ್ರಾರಂಭಿಸಿದ ಪಿಚಾಂಡಿ, ವಾನಂಬಾಡಿಯ ಸಂಶಯದ, ಉತ್ಸಾಹರಹಿತ ಮುಖ ನೋಡಿ ಹತಾಶನಾಗದೆ ಅದೇ ಸ್ತರದಲ್ಲಿ ಮುಂದುವರಿಸಿದ.

"ನೀವು ನನ್ನ ಗುರುತಿಸೋದಿಕ್ಕೆ ಸಾಧ್ಯವಿಲ್ಲ.....ಯಾಕೆ ಅಂದ್ರೆ ನೀವು ನನ್ನ ಇದೇ ಮೊದಲು ನೋಡ್ತಿರೋದು. ಆದರೂ ನಾನು ಈಗಾಗಲೇ

ಎಷ್ಟೋ ವರ್ಷಗಳಿಂದ ನಿಮ್ಮೊಂದಿಗೆ ವ್ಯವಹಾರ ಮಾಡಿದೀನಿ. ನಿಮ್ಮನ್ನ ನೋಡಲಿಲ್ಲ. ಪತ್ರ ಬರೀಲಿಲ್ಲ ಅಷ್ಟೆ.....ನಾನು ಕೊಚಿನ್‌ನಲ್ಲಿ ವಿದೇಶಿ ನೋಟುಗಳ ವ್ಯವಹಾರ ನಡೆಸೋನು. ನನ್ನ ಏಜೆಂಟ್ ಬಲ್ಯಾಯ ನಿಮ್ಮಲ್ಲಿಗೆ ಬರ್ತಾ ಇರ್ತಾನೆ"

ವಾನಂಬಾಡಿಯ ಕಣ್ಣುಗಳು ಮಿಂಚಿದವು. ಆದರೆ ಮುಖದ ತಳಭಾಗ ತುಸು ಬಿಗಿದಿತ್ತು. ಪಿಚಾಂಡಿಯ ಪರಿಚಯವಿಲ್ಲವಾದರೂ ಅವನ ಕಡೆಯ ಏಜೆಂಟ್ ಬಲ್ಯಾಯ ಸಾಕಷ್ಟು ವ್ಯಾಪಾರ ನಡೆಸಿರುವುದು ನಿಜ.

ಇಬ್ಬರೂ ಮತ್ತೊಮ್ಮೆ ಕೈ ಕುಲುಕಿದರು.

"ಹಾಂ, ಹಾಂ.....ನಾನು ಶ್ರಮದಿಂದ ಸಂಪಾದಿಸಿದ ಹಣದ ಭಾಗವನ್ನ ಸುಲಭವಾಗಿ ಪಡೀತಾ ಇರೊ ಮನುಷ್ಯ ನೀವೇನಾ! ಬನ್ನಿ ಒಳಗೆ"

ಎಂದು ಅಪರೂಪದ ವಿನೋದದ ಧಾಟಿಯ ಮಾತು ಹಾಕಿ ಅವನನ್ನು ಒಳಕ್ಕೆ ಕರೆದೊಯ್ದು, ಡ್ರಾನಿಂದ ಎಳೆದ ಸಿಗರೇಟು ಪ್ಯಾಕ್ ಅವನತ್ತ ಚಾಚಿದ.

"ನೀವು?"

ಸಿಗರೇಟ್ ಎತ್ತಿಕೊಂಡವ ಕೇಳಿದ.

"ನಾನು ಸೇದೋದಿಲ್ಲ.....ಸೇದಿಸ್ತೀನಿ"

ಗಹಗಹಿಸಿದ ವಾನಂಬಾಡಿ ನೇರವಾಗಿ ವ್ಯವಹಾರಕ್ಕೆ ಇಳಿದ.

"ಈ ಗಲೀಜು ಕೊಂಪೆವರೆಗೆ ಬರೋದಿಕ್ಕೆ ಕಾರಣ?"

"ಖರೀದಿ ಮಾಡೋದಿಕ್ಕೆ ಬಂದಿದೀನಿ"

ಮೊನಚಾಗಿ ಉತ್ತರಿಸಿದ ಲಕ್ವ ಪಾರಿವಾಳದಂತಹ ಕುಳ್ಳು ಮನುಷ್ಯ. ವಾನಂಬಾಡಿ ಕೆಳ ದವಡೆಯನ್ನು ಸಡಿಲಗೊಳಿಸಲು ಪ್ರಯತ್ನಿಸಿದರೂ ಅದು ಬಿಗಿತದಿಂದ ಇಳಿಯದು.

"ನೀವು ಕೊಚಿನ್‌ನಿಂದ ಇಲ್ಲಿಗೆ ಖರೀದಿ ಮಾಡೋದಿಕ್ಕೆ ಬಂದ್ರಾ? ಸಾಮಾನ್ಯವಾಗಿ ನಾವು ಅಲ್ಲಿಗೆ ಬರಬೇಕಲ್ಲವೆ?"

"ಆದರೆ ಇದೊಂದು ವಿಶೇಷ ರೀತಿಯ ಸಂದರ್ಭ, ಅವಕಾಶ.....ಮತ್ತೆ ಅವಕಾಶ ಬರೋದಿಲ್ಲ"

ವಾನಂಬಾಡಿಗೆ ಮುಂದಿನ ಮಾತು ಕೇಳುವ ತವಕ, ಪಿಚಾಂಡಿ ನಾಚಿಕೆಯಲ್ಲಿ, ಹಿಂಜರಿತದಲ್ಲಿ ಮಾತು ಬಿಡಿಸಿದ.

"ನಾನು ಹೀಗೆ ಈ ಕೆಲಸಕ್ಕೆ ಬರಬಾರದು ಅನ್ನೋದುನನಗೆ ಗೊತ್ತು. ನೀವೂ ನನ್ನ ಹಾಗೇ ಒಬ್ಬ ನೋಟುಗಳ ವ್ಯಾಪಾರಿ ಅನ್ನೋದು ತಿಳಿದೂ ಈ ಕೆಲಸಕ್ಕೆ ಇಳಿದಿದೀನಿ. ಹೇಗೇ ಇರಲಿ, ನಾನೂ ನಿಮ್ಮ ಹಾಗೆ ಒಂದು ವ್ಯಾಪಾರ ನಡೆಸೋನು.....ಬಿಸಿನೆಸ್ ! ನೀವು ಒಂದು ವಿದೇಶಿ ನೋಟಿಗೆ ಒಂದು ಲಕ್ಷ ಕೊಡೋದಿಕ್ಕೆ ಸಿದ್ಧರಾಗಿಲ್ಲ ಅಂತ ನನ್ನಲ್ಲೇ ಅಂದುಕೊಂಡು, ಹೀಗೆ ಕೇಳೋದು ತಪ್ಪಲ್ಲ ಅಂತ ಸೀದಾ ನಿಮ್ಮಲ್ಲಿಗೆ ಬಂದಿದ್ದೀನಿ....."

ಬಿಗಿಯಾಗುತ್ತಿದ್ದ ವಾನಂಬಾಡಿಯ ಮುಖದ ಸ್ನಾಯುಗಳು ಈಗ ಬಿಗಿ ಶಿಲೆಯಂತಾದವು. ಒಂದು ಲಕ್ಷದ ವಿದೇಶಿ ನೋಟು! ಅಂತಹ ನೋಟು ಸದ್ಯದಲ್ಲಿರುವುದು ಒಂದೇ.....

ವಾನಂಬಾಡಿ ಕೇಳಲಾಗದ ಪ್ರಶ್ನೆಯನ್ನು ಎದುರಿನವ ಸ್ಫುಟವಾಗಿ ಕಂಡುಕೊಂಡಿದ್ದ.

"ಹಾಂ. ನೀವು ಊಹಿಸಿ ಬಿಟ್ರಿ!"

ಗೆಲುವಿನ ಉಲಿತದ ಸ್ವರದಲ್ಲಿ ಕುಳ್ಳ ಹೊಸ ಉತ್ಸಾದಲ್ಲಿ ಮುಂದುವರಿಸಿದ.

"ಸಭಾಪತಿಯ ಸಂಗ್ರಹದಲ್ಲಿರೊ ಪ್ರಸಿದ್ಧವಾದ, ಹಳೇ ಕುವೈತ್ ನೋಟು....."

"ಅಂತಹದೊಂದು ನೋಟು ಇದೆಯಾ?"

ಎದೆ ಬಡಿತಕ್ಕೆ ತಡೆಕೊಟ್ಟು ನಾಟಕದ ನುಡಿ ಹೊರ ಹಾಕಿದ.

"ಇದೆ. ಅದನ್ನ ಕೊಳ್ಳೋದಿಕ್ಕೆ ಈಗೊಬ್ಬ ಗಿರಾಕಿ ಬೊಂಬಾಯಿನಲ್ಲಿ ಸಿಕ್ಕಿದ್ದಾನೆ. ತಕ್ಷಣದಲ್ಲಿ ನನಗೆ ಒಂದು ಲಕ್ಷ ಐವತ್ತು ಸಾವಿರ ಕೊಡೋದಿಕ್ಕೆ

ಸಿದ್ಧವಾಗಿದಾನೆ.....ಸಭಾಪತಿ ಅದಕ್ಕೆ ಐವತ್ತು ಸಾವಿರ ಕೊಟ್ಟಿದ್ದ. ನೀವು ಅದನ್ನ ಒಂದು ಲಕ್ಷಕ್ಕೆ ಪಡೆಯೋದಾದ್ರೆ ಐವತ್ತು ಸಾವಿರದ ಲಾಭ ತಳ್ಳಿ ಹಾಕೋದೇನೂ ಅಲ್ಲ. ಅದರಲ್ಲಿ ನಿಮಗೆ ಹದಿನೈದು ಸಾವಿರ ಕೊಟ್ಟರೂ ಆಯ್ತು.

ವಾನಂಬಾಡಿಯ ನಾಲಗೆ ತುಟಿಗಳ ಮಧ್ಯೆ ಹರಿದಾಡಿತು.

"ಅದು ಸಾಚಾ ನೋಟು ಅಂತ ನಿಮಗೆ ಹೇಗೆ ಗೊತ್ತು?"

ಅವನು ಅಸ್ಪಷ್ಟವಾಗಿ ಗೊಣಗಿದ. ಅವನ ಬಾಯಿ ಒಣಗಿತ್ತು.ನಾಗರ ಕಿವಿಯು ಕುಳ್ಳ ಅದನ್ನು ಸ್ಪಷ್ಟವಾಗಿ ಕೇಳಿಸಿಕೊಂಡು ಸೊರ್ರನೆ ಉಸಿರೆಳೆದುಕೊಂಡ.

"ನನಗೆ ಹೇಗೆ ಗೊತ್ತು? ಹೇಗೆ ಅಂದ್ರೆ ನಾನೇ ಅದನ್ನ ಅವನಿಗೆ ಮಾರಿದ್ದು"

"ನೀವೇ ಮಾರಿದ್ದು?" ಬೆರಗಾಗಿದ್ದ ವಾನಂಬಾಡಿ.

"ನಾನೇ ಅಂದ್ರೆ ನನ್ನ ಏಜೆಂಟ್ ಮೂಲಕ ಮಾರಿದ್ದು. ಕಳೆದ ಇಪ್ಪತ್ತು ವರ್ಷಗಳ ಅನುಭವದಲ್ಲಿ ನಾನು ಸಾಚಾ ಅಲ್ಲದ ಯಾವ ವಿದೇಶಿ ನೋಟೂ ಕೊಂಡಿಲ್ಲ ಮತ್ತು ಮಾರಾಟ ಮಾಡಿಲ್ಲ.....ನಮ್ಮ ಏಜೆಂಟ್ ಆ ನೋಟನ್ನ ದುಬಾಯ್‌ನಿಂದ ತಂದಿದ್ದ."

"ಸರಿ, ನಿಮಗೆ ಗೊತ್ತೆ ಸಭಾಪತಿ ಈಗ ಬದುಕಿಲ್ಲಾಂತ"

"ಗೊತ್ತು, ಅವನ ಕೊಲೆ ಆಯ್ತು ಅಂತ ತಿಳಿದೆ. ಅದಕ್ಕೇ ನಿಮ್ಮಲ್ಲಿಗೆ ಬಂದಿದ್ದು ನಾನು"

ಎದೆ ಮತ್ತೆ ತಮಟೆಯಾಯಿತು.

"ಅಂದರೆ ನನ್ನ ಮೂಲಕ....."

"ಹೌದು, ಅದೇ ಪ್ರಯತ್ನ ನನ್ನದು. ಸಭಾಪತಿಯ ಸಂಗ್ರಹದಲ್ಲಿ ಆ ನೋಟು ಇದ್ದಿದ್ದು ನಿಮಗೆ ಗೊತ್ತಿರಬೋದು. ಆದರೆ ಅದನ್ನ ಅವನಿಂದ ಪಡೆಯೊ ಪ್ರಯತ್ನ ಖಂಡಿತ ಮಾಡಿರಲಾರಿರಿ ನೀವು. ಯಾಕೆ ಗೊತ್ತೆ?

ಒಂದು ಸಾರಿ ಖೋಟಾ ಕುವೈತ್ ನೋಟು ಪಡೆದು ನಷ್ಟ ಮಾಡಿಕೊಂಡಿರೋರು ನೀವು. ಸುಟ್ಟುಕೊಂಡ ಮಗು ಬೆಂಕಿಗೆ ಹೆದರತ್ತೆ....."

ಖಿಲ್ಲನೆ ತರಂಗಗಳಲ್ಲಿ ನಗೆ ಹಾಕಿದ ಪಿಚಾಂಡಿ.

"ಓ, ಅದೂ ಗೊತ್ತಿದೆ ನಿಮಗೆ!"

ಈ ಸಾರಿ ವಾನಂಬಾಡಿಯ ಮುಖ ನಿಸ್ತೇಜಗೊಳ್ಳಲಿಲ್ಲ. ಯಾವ ರೀತಿಯಲ್ಲೂ ತನ್ನನ್ನು ವಂಚಿಸಿಕೊಳ್ಳಲಿಲ್ಲ. ಎರಡನೆಯ ಆಘಾತಕ್ಕೆ ವಿರೋಧವಾಗಿ ನಿಂತ ಮೊದಲನೆಯ ಆಘಾತ ಅವನನ್ನು ಘಾಸಿಗೊಳ್ಳದಂತೆ ರಕ್ಷಿಸಿತ್ತು.

ವಾನಂಬಾಡಿ ದೃಢವಾಗಿ ನಿಶ್ಚಯಿಸಿಕೊಂಡ. ಈ ಕುಳ್ಳನನ್ನು ಉಳಿಸಿದರೆ ತನಗೆ ಅಪಾಯ! ಇವನು ಸಾಯಲೇಬೇಕು! ಸಾವಿರ ದಿನಾರ್ ಮೌಲ್ಯದ ಹಳೆಯ ಕುವೈತ್ ನೋಟನ್ನು ಸಭಾಪತಿಗೆ ಮಾರಿದವನು ಇವನು! .....ತಾನು ಸಾವಿರದ ಸಂಖ್ಯೆಯ ಖೋಟಾ ಕುವೈತ್ ನೋಟನ್ನು ಕೊಂಡು ಮೋಸ ಹೋದೆ ಎಂಬುದನ್ನೂ ಇವನು ತಿಳಿದಿದ್ದಾನೆ.

ಮೈ ಕೊಡವಿ ಎಚ್ಚರಿಕೆಯ ಸ್ಥಿರ ಭಾವದಲ್ಲಿ ಕೇಳಿದ.

"ನೀವು ಇನ್ನೂ ಸಭಾಪತಿಯ ನೋಟಿನ ಸಂಗ್ರಹ ನೋಡಿಲ್ಲವೆ?"

ಪ್ರಶ್ನೆ ಹಾಕುವುದರೊಂದಿಗೇ ಅವನಿಗದು ನಿಶ್ಚಯ. ಪಿಚಾಂಡಿ ಆ ಸಂಗ್ರಹ ನೋಡಿಲ್ಲ. ಹಾಗೆ ನೋಡಿದ್ದಿದ್ದರೆ ಅಲ್ಲಿ ಖೋಟಾ ನೋಟು ಕಂಡು ಈ ಹೊತ್ತಿಗೆ ಬೊಬ್ಬೆ ಹಾಕಿ ದಾಂಧಲೆ ಮಾಡಿಬಿಟ್ಟಿರುತ್ತಿದ್ದ.

ನೋಡಿಲ್ಲ.....ಆದರೆ ನಾಳೆ ದಿನ ಅದನ್ನ ನೋಡೋದಿಕ್ಕೆ ಇನ್ಸ್‌ಪೆಕ್ಟರ್ ಫಾಸ್ಟರ್ ಜೊತೆ ಒಂದು ಅಪಾಯಿಂಟ್‌ಮೆಂಟ್ ತೊಗೊಂಡಿದೀನಿ. ಆಸ್ತಿಯೆಲ್ಲಾ ಇತ್ಯರ್ಥ ಆಗೋವರೆಗೆ ನಾನು ಅದನ್ನ ಕೊಳ್ಳೋದಿಕ್ಕೆ ಆಗೋದಿಲ್ಲಾಂತಲೂ ಬಲ್ಲೆ. ಆದರೆ ಸಭಾಪತಿಯ ಮಗಳಿಂದ ಅದನ್ನ ಪಡೆಯೋದಿಕ್ಕೆ ನಾನು ಪ್ರಥಮ ಅರ್ಹತೆಯನ್ನಂತೂ ಪಡೆಯಬಹುದಲ್ಲ.

ಆಕೆಯಿಂದ ಮಾತು ತೊಗೊಬೋದು"

ವಾನಂಬಾಡಿ ಕಟು ನಿರ್ಧಾರ ಕೈಗೊಂಡಿದ್ದಾಗಿತ್ತು. ಈ ವಿಪತ್ಕಾರಿ ಮನುಷ್ಯನನ್ನು ಉಳಿಯಗೊಡುವಂತಿಲ್ಲ!

"ಈ ರಾತ್ರಿ ನನ್ನ ಮನೆಗೆ ಯಾಕೆ ಊಟಕ್ಕೆ ಬರಬಾರದು ನೀವು? ನನ್ನಲ್ಲಿರೊ ವಿದೇಶಿ ನೋಟುಗಳನ್ನ ನಿಮಗೆ ತೋರಿಸ್ತೀನಿ"

ಬದುಕಿನಲ್ಲಿ ಯಾರಿಗೂ ಊಟಕ್ಕೆ ಆಹ್ವಾನ ನೀಡದ ವಾನಂಬಾಡಿ ಅವನಿಗೆ ನಗೆ ಮುಖದಲ್ಲಿ ಕರೆ ನೀಡಿದ. ಅವನೂ ಅದಕ್ಕೆ ಸಿದ್ಧನಾಗಿದ್ದ.

ಪಿಚಾಂಡಿ ತೃಪ್ತಿಯಿಂದ ಪ್ರತಿಕ್ರಿಯೆ ತೋರಿದ.

"ತುಂಬಾ ಸಂತೋಷದ ವಿಷಯ. ಊಟಕ್ಕಿಂತಲೂ ನಿಮ್ಮ ನೋಟುಗಳ ಸಂಗ್ರಹ ನೋಡೋದಿಕ್ಕೆ ಕಾತರವಾಗಿದೀನಿ. ಎಷ್ಟು ಹೊತ್ತಿಗೆ ಬರ್ಬೇಕು?"

"ಆ ತೊಂದರೆ ತೊಗೊಬೇಡಿ. ನಾನೇ ಬಂದು ನಿಮ್ಮನ್ನ ಕರೆದೊಯ್ತೀನಿ. ಎಲ್ಲಿ ಇಳ್ಕೊಂಡಿದೀರಿ?"

"ಕೊನ್ನೂರ್ ಹೈರೋಡ್‌ನ ಹೋಟೆಲ್ ಪಾಂಡ್ಯನ್‌ನಲ್ಲಿದೀನಿ. ನಿಮ್ಮ ಆತಿಥ್ಯಕ್ಕೆ ತುಂಬಾ ಥ್ಯಾಂಕ್ಸ್. ಇನ್ನು ನಾನು ನಿಮ್ಮ ವೇಳೆ ಹೆಚ್ಚಾಗಿ ತೊಗೊಳೋದಿಲ್ಲ"

"ಆರೂವರೆಗೆ ಸರಿಯಾಗಿ ನಿಮ್ಮ ಹೋಟೆಲಿಗೆ ಬಂದು ಕರೆದೊಯ್ತೀನಿ"

ಎಂದು ಏನೊ ನೆನಸಿಕೊಂಡು ಕೇಳಿದ.

"ನಿಮಗೆ ಮದ್ರಾಸ್ ಸಿಟಿಯ ಪರಿಚಯ ಚೆನ್ನಾಗಿದೆಯೇ, ಮಿಸ್ಟರ್ ಪಿಚಾಂಡಿ?"

ಪಿಚಾಂಡಿ ಸಣ್ಣನೆಯ ಮೊಲದ ಹಲ್ಲುಗಳ ಸಾಲನ್ನು ಪ್ರದರ್ಶಿಸಿದ.

"ಇಲ್ಲ, ಈ ಸಿಟಿಯಲ್ಲಿ ಏನೊಂದೂ ಗೊತ್ತಿಲ್ಲ ನನಗೆ. ಇದು ಎರಡನೆ ಸಾರಿ ನಾನು ಇಲ್ಲಿಗೆ ಬರ್ತಿರೋದು. ಒಂದು ರಸ್ತೆಯ ಪರಿಚಯವೂ ಇಲ್ಲ"

ಪಿಚಾಂಡಿಯನ್ನು ಕಳುಹಿಸಿಕೊಟ್ಟ ವಾನಂಬಾಡಿ ಡೆಸ್ಕ್ ಹಿಂದಿನ

ಕುರ್ಚಿಯಲ್ಲಿ ಧೊಪ್ಪನೆ ಕುಸಿದು ಕುಳಿತು ತಲೆಗೆ ಕೈಗಳನ್ನು ಹಚ್ಚಿದ.

ಪಿಚಾಂಡಿ! ಬದುಕಿನ ಹಾದಿಯಲ್ಲಿ ಏಕದಂ ಕಾಣಿಸಿಕೊಂಡ ಮುಳ್ಳು. ಈ ಮುಳ್ಳನ್ನು ಹಾದಿಯಿಂದ ಕಿತ್ತೊಗೆಯಲೇಬೇಕು. ಈ ಭಯಂಕರ ಹುಳುವನ್ನು ಹೊಸಕಿಹಾಕಲೇಬೇಕು.

ವಾನಂಬಾಡಿ ಗೊಣಗಿದ.....ಶಪಿಸಿದ.....ಹುಚ್ಚೆದ್ದು ಮೈ ಅದುರಿಸಿದ.

ಅವನು ಅಗಾಧ ಭಯದ ಭೂತದ ಹಿಡಿತದಲ್ಲಿದ್ದ. ಬೆಟ್ಟದ ಗಾತ್ರದಲ್ಲಿ ಮೈ ಮೇಲೆ ಕುಸಿದಿತ್ತು ಆ ಭಯ. ಒಳ ದನಿ ನೋಟಿನ ಚೌರ್ಯದ ಬಗೆಗೆ ಕಾಡುತ್ತಿರಲಿಲ್ಲ. ಈಗ ತಾನು ಸಿಕ್ಕಿರುವ ಸ್ಥಿತಿ ಎಂತಹುದು? ಅದು ಊಹೆಗೂ ಬಂದಿರಲಿಲ್ಲ. ಸಭಾಪತಿಯನ್ನು ತಾನೇ ಕೊಲೆ ಮಾಡಿರುವ ವ್ಯಕ್ತಿ ಎನಿಸಿಕೊಳ್ಳಬಹುದಾದ ಅತಿ ಕ್ಲಿಷ್ಟ, ಭಯಾನಕ ಪರಿಸ್ಥಿತಿ! ಅವನಲ್ಲಿದ್ದ ನೋಟನ್ನು ಪಡೆಯುವ ಸಲುವಾಗಿ ನಡೆಸಿದ ಕೊಲೆ!

ಸಭಾಪತಿಯ ನೋಟನ್ನು ತಾನು ಒಯ್ದಿರುವೆನೆಂಬುದು ಶೀಘ್ರದಲ್ಲಿ ಬೆಳಕಿಗೆ ಬರುತ್ತದೆ. ಆ ನೋಟನ್ನು ಸಭಾಪತಿ ಕೊಲೆಯಾದ ಮರುದಿನ ರಾತ್ರಿ ಅವನ ಮನೆಯಿಂದ ಒಯ್ದೆನೆಂದು, ಕೊಲೆಗೆ ಒಂದೆರಡು ರಾತ್ರಿಗಳ ಮೊದಲು ಒಯ್ದಿಲ್ಲವೆಂದು ಸಾಧಿಸುವುದಾದರೂ ಹೇಗೆ?....ಆ ರಾತ್ರಿ ತನ್ನ ಬಿಲದ ಕೋಣೆಯಲ್ಲಿ ಬಹು ಹೊತ್ತಿನವರೆಗೆ ನೋಟುಗಳನ್ನು ನೋಡುತ್ತಾ ಕುಳಿತಿದ್ದೆ. ಯಾರೂ ಆ ಬಗ್ಗೆ ಸಾಕ್ಷಿ ನುಡಿಯುವುದಿಲ್ಲ. ಸಾಕ್ಷಿ ನುಡಿಯಬಲ್ಲ ಒಂದೇ ಒಂದು ಸಜೀವ ವಸ್ತುವೆಂದರೆ ತನ್ನ ಮನೆಯ ಆಳು ಅಮಾಸೆ, ವಿಶ್ವಾಸಾರ್ಹನಲ್ಲದ, ಕ್ಷುಲ್ಲಕ, ಶಿಥಿಲ ಸಾಕ್ಷಿ ಎನಿಸಿಕೊಳ್ಳಬಹುದಾದ ಅವನಿಂದ ತನಗೇನೂ ಪ್ರಯೋಜನವಿಲ್ಲ.....

ಡೆಸ್ಕ್ ಮೇಲೆ ಪೆನ್ಸಿಲ್‌ನಿಂದ ಅರ್ಥವಿಲ್ಲದ ಗೆರೆಗಳನ್ನು ಎಳೆಯುತ್ತಾ ವಾನಂಬಾಡಿ ಕಟು ನಿರ್ಧಾರವನ್ನು ಪುನರುಚ್ಚರಿಸಿದ ಪಿಚಾಂಡಿ ಸಾಯಲೇ ಬೇಕು!.....ಸಾಯಿಸುವ ಬಗೆ? ಅವನು ತನಗಿಂತಲೂ ಬಲಶಾಲಿ..... ಮತ್ತೇ?

ಪಿಚಾಂಡಿಯನ್ನು ಕೊಲ್ಲಬಹುದಾದ ವಿಧಾನ ತಲೆಯಲ್ಲಿ ಮಿಂಚಿತು. ಆತುರ, ಗಾಬರಿ. ತಲ್ಲಣಗಳ ಮಧ್ಯೆ ಹೊಳೆದ ಸುಲಭವಾದ ವಿಧಾನ.

ಒಡನೆ ಕಾರಿನ ಯಂತ್ರ ಶಬ್ದ ಮಾಡಿತು. ಪಾಂಡಿ ಬಜಾರಿನ ಹಳೆಯ ಮನೆಯ ಮುಂದೆ ನಿಂತಿತು. ಅವನಿಗಿದ್ದ ಬೆರಳೆಣಿಕೆಯ ಆತ್ಮೀಯರಲ್ಲಿ ಹಳೆಯ ಕಾಲದ ಆ ಗುಳಿಗೆ ಪಂಡಿತನೂ ಒಬ್ಬ.

ಪಿಚಾಂಡಿಗೆ ವಿಷ ಗುಳಿಗೆಗಳ ಪ್ರಯೋಗ! ಅವನ ರಾತ್ರಿಯ ಊಟಕ್ಕೆ ಅದನ್ನು ಬಳಸಿದರೆ ಹಾದಿ ಮುಳ್ಳಿನ ನಿರ್ನಾಮ. ಪ್ರಯೋಗಿಸಿದರೆ ಅದನ್ನು ಅವನು ಒಡನೆ ಕಂಡುಹಿಡಿಯಲಾರನೆ? ಮರಣಿಸಿದ ಮೇಲೆ ಅವನ ದೇಹವನ್ನು ಒಯ್ಯುವುದು ಹೇಗೆ? ಆಳು ಅಮಾಸೆ ಈ ರಾತ್ರಿ ಮನೆಯಿಂದ ದೂರವಾಗಿರಬೇಕು. ಕತ್ತಲು ಚೆನ್ನಾಗಿ ಏರಿ, ಬೀದಿ ನಿರ್ಜನವಾದ ಮೇಲೆ ಮೃತ ದೇಹವನ್ನು ಕಾರಿನಲ್ಲಿ ರಾಯಪುರಂ ಕಡೆಗೆ ಸಾಗಿಸಿ ಸಮುದ್ರ ಸೇರಿಸಿದರಾಯ್ತು. ಅದೆಲ್ಲವೂ ಯೋಚಿಸಿದಷ್ಟು ಸುಲಭವಲ್ಲ..... ಆದರೂ ಹೇಗೊ ಮುಗಿಸಿಬಿಡಬಹುದು. ಮೊದಲು ಆ ಧೂಮಕೇತು ಕಣ್ಮರೆ ಯಾಗಬೇಕು.

"ದತ್ತೂರ ಇಲ್ಲ. ನಾಳೆ ಸಂಜೆಗೆ ತರಿಸಿಕೊಡ್ತೀನಿ"

ಪಂಡಿತ ನಿಸ್ಸಹಾಯಕನಂತೆ ಕೈಹಿಸುಕುತ್ತಾ ಹೇಳಿ ನಿರಾಶೆಗೊಳಿಸಿದ.

ದತ್ತೂರ ಎಂದರೆ ದತ್ತೂರಿ ಗಿಡದ ಹೂ ಬೀಜಗಳಿಂದ ತಯಾರಿಸಿದ ವಿಷ. ಅದು ಮಂದ ವಿಷ. ಅದಕ್ಕಾಗಿ ನಾಳೆ ಸಂಜೆಯವರೆಗೆ ಕಾಯಲೂ ಸಾಧ್ಯವಿಲ್ಲ. ನಾಳೆ ಬೆಳಗಾಗುವುದರಲ್ಲಿ ತನ್ನ ಕುರಿತು ಸಾಕಷ್ಟು ಅತಂತ್ರಗಳಾಗುವುದು ನಿಶ್ಚಯ.

"ಮತ್ತೆ ಕಣಕ್ಕಲಿ.....?"

ಅದು ಬಿಳಿ ಗಣಗಲೆ ಹೂಗಿಡದ ಕಾಂಡದಿಂದ ಬರುವ ವಿಷ.

"ಅದು ಈಗ ಯಾರೂ ಬಳಸೋದಿಲ್ಲ"

ಪಂಡಿತನ ಉತ್ತರ ಯೋಜನೆಯನ್ನು ಬುಡಮೇಲು ಮಾಡಿತ್ತು.

ಪಿಚಾಂಡಿ ವಿಷಪ್ರಾಶನದಿಂದ ಪಾರಾಗಿದ್ದ.

* * *

ಕಾರು ಹಿಂದಕ್ಕೆ ಸಾಗಿತು. ಮತ್ತೆ ತಲೆಯಲ್ಲಿ ಚಕ್ರ ಭ್ರಮಣ..... . ಮಗುವಿನ ಮುಖದ ವಿಪತ್ಕಾರಿಯನ್ನು ಕೊಲ್ಲುವ ಬಗೆ?

ರಂಗಿನ ಹುಳುವಿಗೆ ಕೃತ್ರಿಮ ಮೆದುಳು. ಕ್ಷಣಗಳಲ್ಲಿ ಮಿಂಚಿತು. ಮತ್ತೊಂದು ದಾರಿ. ಅದು ಅವನನ್ನು ಒಂದು ರೀತಿಯಲ್ಲಿ ಸುರಕ್ಷಿತವಾಗಿಡ ಬಲ್ಲ ಮಾರ್ಗ. ಯೋಜನೆ ತಲೆ ತೂರಿದೊಡನೆ ಅದು ಎಳೆಗಳಲ್ಲಿ ಕಾರ್ಯ ರೂಪಿಸಿತು.

ಕಾಶಿಚೆಟ್ಟಿ ಬೀದಿಯ ಹಿಂದಿನ ತನ್ನ ಮನೆಯಿಂದ ಕೊನ್ನೂರು ಹೈರೋಡಿನ ಪಾಂಡ್ಯನ್ ಹೋಟೆಲಿಗೆ ಸುಮಾರು ಐದು ಮೈಲಿಗಳು. ಪಶ್ಚಿಮಕ್ಕೆ ಸಾಗಿ ಅಲ್ಲಿಂದ ಉತ್ತರಕ್ಕೆ ಏರಿ ಆ ಸ್ಥಳ ತಲುಪುವುದು ಸಾಧಾರಣ ಮಾರ್ಗ. ಆದರೆ ಅಲ್ಲಿಂದ ಅವನೊಂದಿಗೆ ಹಿಂತಿರುಗುವಾಗ ಅದೇ ಮಾರ್ಗದಲ್ಲಿ ಬರುವಂತಿಲ್ಲ. ಕೊನ್ನೂರು ಹೈವೇನಿಂದ ದಕ್ಷಿಣಕ್ಕೆ ಚಲಿಸಿ ತಾಂಬರಂ ರಸ್ತೆ ಸೇರಲು ಹತ್ತು ಮೈಲಿಗಳಷ್ಟಾದರೂ ಸಾಗಬೇಕು.....ಅದೇ ಹಾದಿಗಳಲ್ಲೇ ಹಿಂತಿರುಗಬೇಕು. ತನ್ನ ಭೀಕರ ಅತಿಥಿ ಮದ್ರಾಸ್ ನಗರಕ್ಕೆ ಹೊಸಬ. ಅವನಿಗೆ ದೂರದ ವ್ಯತ್ಯಾಸ ಕಾಣುವುದಿಲ್ಲ. ತಾಂಬರಂ ಕಡೆಯ ನಿರ್ಜನ ರಸ್ತೆಗೆ ಬಂದಾಗ ಪ್ರಶ್ನೆ ಬಂದೀತು. ಅದಕ್ಕೊಂದು ಉತ್ತರ ನೀಡುವುದು ಕಷ್ಟವಲ್ಲ. ವೆಲಚೇರಿ ಬಡಾವಣೆಯ ನಂತರದ ತಾಂಬರಂ ರಸ್ತೆಯಲ್ಲಿ ಬಲ ಪಕ್ಕಕ್ಕೆ ದಿಬ್ಬದ ರಸ್ತೆ. ಅದು ತನ್ನ ಕಾರ್ಯಕ್ಕೆ ಹೇಳಿ ಮಾಡಿಸಿದಂತಹ ತಾಣ. ಸಂಜೆ ಅಲ್ಲಿಗೆ ಬರುವ ಹೊತ್ತಿಗೆ ಆರೂ ಮುಕ್ಕಾಲು ಆಗಿರುತ್ತದೆ. ಆಗ ಅಲ್ಲಿ ವಾಹನಗಳ ಸಂಚಾರ ಅತಿ ಕಡಿಮೆ.....ಅಲ್ಲಿ ತನ್ನ ಅತಿಥಿ ಕೊನೆಗಾಣುತ್ತಾನೆ!

ಅದು ಸುಲಭವಲ್ಲದಿದ್ದರೂ ಕಷ್ಟದ ಕ್ರಮವಲ್ಲ. ದಿಬ್ಬದ ರಸ್ತೆಯ ಮೇಲು ತುದಿ ಸೇರಿದಾಗ ಕಾರು ನಿಲ್ಲಿಸಿ, ಗೇರ್ ಹಾಕಿ ಯಾವುದೊ

ಕಾರಣ ಹೇಳಿ ಕೆಳಗಿಳಿಯುವುದು. ಬಾಗಿಲು ಮುಚ್ಚಿದ ಮೇಲೆ ಕ್ಷಣದಲ್ಲಿ ಅದನ್ನು ಲಾಕ್ ಮಾಡಿ ಗೇರ್ ಎಳೆದು ನ್ಯೂಟ್ರಲ್‌ಗೆ ತರುವುದು. ಹಿಂದಕ್ಕೆ ತಗ್ಗಿಗೆ ಸರಿಯುವ ಕಾರಿಗೆ ಕೈಗಳಿಂದ ಒತ್ತಡ ಕೊಟ್ಟು ಮತ್ತಷ್ಟು ವೇಗಕ್ಕೆ ತರುವುದು.

ಪಿಚಾಂಡಿ ಹೊರಬರಲು ಸಾಧ್ಯವಿರುವುದಿಲ್ಲ. ಹಿಂದಕ್ಕೆ ಚಲಿಸಿದ ಕಾರು ಅಡ್ಡಾದಿಡ್ಡಿಯಾಗಿ ಸರಿದು ರಸ್ತೆಯ ಎಡಬಲಗಳ ಉಕ್ಕಿನ ಅಡ್ಡ ಕಂಬಿಗಳಿಗೆ ಘರ್ಷಿಸಿ ಉರುಳಿ ಹೋಗುತ್ತದೆ. ಪಿಚಾಂಡಿ ನಜ್ಜುಗುಜ್ಜಾಗಿ ಹೋಗುತ್ತಾನೆ.....ಆಮೇಲೆ ತಾನು ತಪ್ಪಿಸಿಕೊಳ್ಳಲು ದಾರಿ ಯಾವುದಾದರೂ ಹುಡುಕುವುದು ಕಷ್ಟವಲ್ಲ.

ಮೆದುಳು ಹೊರಳಿತು. ದೀರ್ಘವಾದ ರಸ್ತೆಯಲ್ಲಿ ಹಿಂತಿರುಗಲು ಪಿಚಾಂಡಿ ಒಪ್ಪದಿದ್ದರೆ?.....ದಿಬ್ಬದ ರಸ್ತೆಯಲ್ಲಿ ಕಾರಿನಿಂದ ತಾನು ಇಳಿದು ಗೇರ್ ನ್ಯೂಟ್ರಲ್‌ಗೆ ತರುವುದನ್ನು ಅವನು ತಡೆದರೆ? ಪಿಚಾಂಡಿಗೆ ಕಾರು ಚಲಾಯಿಸುವುದು ತಿಳಿಯದೆ?.....ಅವನು ಅರಿಚಿದರೆ ಪಕ್ಕದಲ್ಲಿ ಸಾಗಿ ಹೋಗುವ ವಾಹನದವರು ನಿಲ್ಲುವುದಿಲ್ಲವೆ?.....

ಓ. ಇಂತಹ ಪ್ರಶ್ನೆಗಳಿಂದ ಯೋಜನ ಕೆಡುವುದು ಬೇಡ. ಇದು ಬಿಟ್ಟರೆ ತನಗೆ ಪಿಚಾಂಡಿಯನ್ನು ಕೊನೆಗಾಣಿಸುವ ಬೇರೆ ಮಾರ್ಗವೆ ಇಲ್ಲ.....ಪಿಚಾಂಡಿ ಕೊನೆಗಾಣಲೇಬೇಕು!.....

ಯೋಜನೆ ಹೂಡುತ್ತಿದ್ದ ವಾನಂಬಾಡಿ ಎಡ ಬೆರಳು ಬಲವಾಗಿ ಕಡಿದಿದ್ದ.

"ಸರಿಯಾದ ಯೋಜನೆ!"

ತನ್ನಲ್ಲೇ ಹಿಗ್ಗಿ ಉಬ್ಬಿ ಮೊರೆಗುಟ್ಟಿತು ಬಣ್ಣದ ಹುಳು. ಅದು ಹೇಳಿ ಕೇಳಿ ವ್ಯಾಪಾರಿ. ಚತುರ ವ್ಯಾಪಾರಿಯಂತೆ ಕ್ಷಿಪ್ರ ತೀರ್ಮಾನ ತೆಗೆದು ಕೊಳ್ಳುವ ಶಕ್ತಿಯುಳ್ಳದ್ದು. ಈ ಬಾರಿ ತೆಗೆದುಕೊಳ್ಳುವ ತೀರ್ಮಾನ ಏನನ್ನು ಸೃಷ್ಟಿಸುವುದೆ!

ಸಂಜೆ ಆರೂವರೆಗೆ ಹತ್ತು ನಿಮಿಷಗಳು ಉಳಿದಂತೆ ವಾನಂಬಾಡಿ ಕೊನ್ನೂರು ಷಾಂಡ್ಯನ್ ಹೋಟೆಲಿಗೆ ಸಮೀಪವಾದ. ಜನ ಸಂಚಾರವಿಲ್ಲದ ಅಡ್ಡ ಬೀದಿಯಲ್ಲಿ ಕಾರು ನಿಲ್ಲಿಸಿದ. ಯೋಜನೆ ವ್ಯವಸ್ಥಿತವಾಗಿತ್ತು. ಡಿಕಿಯಲ್ಲಿದ್ದ ಸ್ಪ್ಯಾನರ್ ಎತ್ತಿ ಕಾರಿನ ಎಡ ಪಕ್ಕದ ಬಾಗಿಲಿನ ಕಡೆಗೆ ಬಂದ.....ಎಡಬಲ ನೋಡಿದ. ನಸುಕು ಹತ್ತುತ್ತಿದ್ದ ಸಂಜೆ. ದೂರದಲ್ಲಿ ಕಾಣುತ್ತಿದ್ದ ಒಂದೆರಡು ವಾಹನಗಳು ಸಮೀಪಿಸಿದ ವಾಹನವೊಂದು ಹಾದು ಹೋಗಲು ಕಾದು ನಿಂತ. ಮತ್ತೊಮ್ಮೆ ದಿಟ್ಟಿಸಿದಾಗ ಎರಡೂ ಪಕ್ಕಗಳಿಗೆ ನಿರ್ಜನವಾದ ಬೀದಿ.

ವಾಹನವನ್ನು ದುರಸ್ತಿಗೊಳಿಸಲು ಪ್ರಯತ್ನಿಸಿ ವಿಫಲನಾದ. ತಾಳ್ಮೆಗೆಟ್ಟ ಚಾಲಕನಂತೆ ಬಾಗಿಲ ಹೊರ ಪಿಡಿಯ ಮೇಲೆ ಸ್ಪ್ಯಾನರ್‌ನಿಂದ ಒಂದೇ ಸಮನೆ ಬಾರಿಸಿದ. ಪಿಡಿ ಮತ್ತೆ ತಿರುಗಿಸಲಾಗದಂತೆ ವಕ್ರ ಕೋಣಕ್ಕೆ ಬಾಗಿ ನಿಂತಿತು. ಒಳಗಿನಿಂದಲೂ ಅದು ನಿಷ್ಕ್ರೀಯವಾಯಿತು.

ಕಾರಿನೊಳಕ್ಕೆ ಬಂದ ವಾನಂಬಾಡಿ ಬಾಗಿಲಿನ ಒಳಪಿಡಿಯನ್ನು ಮೆಲ್ಲನೆ ಮೇಲಕ್ಕೆ ತಟ್ಟಿ ಸಮನಾಗಿ ನಿಲ್ಲಿಸಿದ. ತೆಳುವಾದ ಬೆರಳೂ ಅದನ್ನು ಹಿಡಿಯದಂತಾಯಿತು. ಈಗ ಅತಿಥಿ ಕೂಡುವ ಮುಂಭಾಗದ ಸೀಟಿನ ಎಡ ಪಕ್ಕದ ಬಾಗಿಲು ಪೂರ್ಣವಾಗಿ ಅಲುಗಾಡದಂತಾಗಿತ್ತು.

ಮತ್ತೆ ಹತ್ತು ನಿಮಿಷಗಳು ಕಳೆಯುವುದರಲ್ಲಿ ವಾನಂಬಾಡಿ ಪಾಂಡ್ಯನ್ ಹೋಟೆಲಿನ ಹೊರ ಭಾಗದ ಪೋರ್ಟಿಕೊ ಮೂಲಕ ಪಿಚಾಂಡಿಯನ್ನು ಅತ್ಯಂತ ಪ್ರಾಮುಖ್ಯ ವ್ಯಕ್ತಿಯಂತೆ ವಿನಯಪೂರ್ವಕವಾಗಿ ಕಾರಿನತ್ತ ಕರೆದೊಯ್ಯುತ್ತಿದ್ದ.

ಅದು ಹಾಗೆಯೇ, ಅದರಲ್ಲಿ ಅಚ್ಚರಿಯೇನೂ ಇಲ್ಲ. ವಾನಂಬಾಡಿ ಅತಿ ಗಂಭೀರ, ಸಿಡುಕಿನ ವ್ಯಕ್ತಿ ನಿಜ. ಅವನು ಇಚ್ಛೆಪಟ್ಟಾಗ, ಮನಸ್ಸು ಮಾಡಿದಾಗ ಬಹು ನಮ್ರ, ವಿನಯವಂತ ವ್ಯಕ್ತಿ!

"ಕ್ಷಮಿಸಿ, ಮಿಸ್ಟರ್ ಪಿಚಾಂಡಿ, ಈಗ ನೀವು ಬಲಗಡೆ ಬಾಗಿಲಿನಿಂದಲೇ ಒಳಗೆ ಹೋಗ್ಬೇಕು. ವೀಲ್ ತಳದಲ್ಲಿ ಸರಿದುಕೊಂಡು ಹೋಗೋದು ಸ್ವಲ್ಪ ಕಷ್ಟವೇ.....ಇಲ್ಲಿಗೆ ಬರ್ತಾ ಇದ್ದಾಗ ಯಾವುದೊ ಟ್ರಕ್ ನನ್ನ ಕಾರಿನ

ಎಡ ಭಾಗಕ್ಕೆ ಉಜ್ಜಿಕೊಂಡುಹೋಯ್ತು. ಬಾಗಿಲಿನ ಪಿಡಿ ಉಜ್ಜಿ ಹೋಯ್ತು"

ಮುಖ ಓರೆ ಮಾಡಿ ಅತಿ ವಿನಯದಲ್ಲಿ ಯಾಚಿಸಿದ. ಪಿಚಾಂಡಿ ಕಾರಿನ ಎಡ ಭಾಗದ ಮೇಲೆ ದೃಷ್ಟಿ ಹರಿಸಿ ಅನುಕಂಪದ ಮುಖ ಮಾಡಿದ.

"ನಿಮ್ಮ ಅದೃಷ್ಟ ಚೆನ್ನಾಗಿತ್ತು. ಎಲ್ಲಾ ಸರಿಯಾಗಿದೆ. ಪಿಡಿ ಮಾತ್ರ ಜಜ್ಜಿದ"

ಆ ಮಾತು ವಾನಂಬಾಡಿಗೆ ವ್ಯಂಗ್ಯದಂತೆ ತಟ್ಟಿತು. ಉಗುಳು ನುಂಗಿ ಹುಂಗುಟ್ಟಿದ.

"ಪರವಾಗಿಲ್ಲ. ಈ ಕಡೆಯಿಂದಲೇ ಹೋಗೋದು"

ಕುಳ್ಳ ಕ್ರೀಡಾ ಮನೋಭಾವದ ಪ್ರತಿಕ್ರಿಯೆ ತೋರಿದ. ಗುಂಡನೆಯ ಚಿಕ್ಕ ಮನುಷ್ಯ ತನ್ನ ಮೋಟು ಕಾಲುಗಳನ್ನು, ಪೀನ ದೇಹವನ್ನು ವೀಲ್ ಅಡಿಯಲ್ಲಿ ಕಷ್ಟದಿಂದ ಹೊರಳಿಸುತ್ತಾ ಮುಂದಿನ ಸೀಟಿನ ಎಡ ಪಾರ್ಶ್ವಕ್ಕೆ ಸರಿದುದನ್ನು ತೃಪ್ತಿಯಿಂದ ಗಮನಿಸಿದ ವಾನಂಬಾಡಿ.

ಪಿಚಾಂಡಿ ಎಡಬಲಗಳಲ್ಲಿ ತಪ್ಪಿಸಿಕೊಳ್ಳಲಾಗದಂತೆ ಇಕ್ಕಟ್ಟಿನಲ್ಲಿ ಭಾರವಾಗಿ ಸೇರಿಹೋಗಿದ್ದ!

"ನೀವು ಡ್ರೈವ್ ಮಾಡ್ತೀರಾ?"

ಅತಿಥಿ ಕಾರಿನೊಳಗೆ ಸೇರಿದ ಮೇಲೆಯೇ, ಕಾರು ಸ್ಟಾರ್ಟ್ ಮಾಡುತ್ತಾ ಕೇಳಿದ ವಾನಂಬಾಡಿ.

ಕುಳ್ಳ ನಾಚಿಕೆಯಲ್ಲಿ 'ಖೊಹ್' ಎಂದು ನಕ್ಕ.

"ಓ, ಮಿಸ್ಟರ್ ವಾನಂಬಾಡಿ! ಅದು ಯಾಕೊ ನನಗೆ ಡ್ರೈವಿಂಗ್ ಕಲಿಯೊ ಅಗತ್ಯವೇ ಬರ್ಲಿಲ್ಲ. ಇದು ಕೇಳಿ ನಿಮಗೆ ಆಶ್ಚರ್ಯ ಆಗ್ಬೋದು"

"ಹಾಗೇನಿಲ್ಲ. ನಾನೂ ಡ್ರೈವಿಂಗ್ ಕಲಿತದ್ದು ಈಚೆಗೆ"

ಅದು ಸುಳ್ಳು. ಮೂವತ್ತು ವರ್ಷಗಳ ಹಿಂದೆ ಅವನಲ್ಲಿ ಸೇರಿದ ಮಾರಿಸ್ ಮೈನರ್‌ನೊಂದಿಗೆ ಡ್ರೈವಿಂಗ್ ಅವನು ಕಲಿತಾಗಿತ್ತು.

ಪಿಚಾಂಡಿಗೆ ಕಾರು ಡ್ರೈವಿಂಗ್ ತಿಳಿಯದು! ಮತ್ತಷ್ಟು ತೃಪ್ತಿಗೊಂಡ ವಾನಂಬಾಡಿ ಗಡಿಯಾರ ನೋಡಿದ. ಆರು ಗಂಟೆ ನಲವತ್ತು ನಿಮಿಷಗಳು, ಸರಿಯಾದ ವೇಳೆ.....!

ಕಾರು ಸಿಟಿಯ ಪೂರ್ವಕ್ಕೆ ಸಾಗಿ ಅಲ್ಲಿಂದ ದಕ್ಷಿಣಕ್ಕೆ ತಿರುಗಿತು. ಜನ, ವಾಹನಗಳ ಸಂಚಾರ ಹೆಚ್ಚಿತ್ತು. ಕಾರಿನ ವೇಗ ಒಂದೇ ಗತಿಯಲ್ಲಿತ್ತು.

ಕಾರು ಹಳದಿ ರೇಖೆಯನ್ನು ಒಂದು ಬಳಸು ಹಾಕಿ ಮತ್ತೆ ಹಿಂದಕ್ಕೆ ಸರಿಯಿತು. ಪಿಚಾಂಡಿ ಅರ್ಥವಾಗದವನಂತೆ ಪಕ್ಕಗಳಿಗೆ, ಹಿಂದಕ್ಕೆ ನೋಡಿದ.

ಕಾರು ಅರವತ್ತು ಕಿಲೋಮಿಟರ್ ವೇಗದಲ್ಲಿ ಸರಿದಿತ್ತು. ಎಡಬಲಗಳಲ್ಲಿ ವಾಹನ. ಜನರಿಗೆ ಎಲ್ಲಿಗೂ ಹೋಗುವ ಧಾವಂತ.

ವಾನಂಬಾಡಿ ಎಡಪಕ್ಕದವನ ಮನಸ್ಸನ್ನು ಹಿಡಿದಿಡಲು ನೋಟುಗಳ ಬಗೆಗೆ ಮಾತು ತೆಗೆದಿದ್ದ. ಪರಿಸ್ಥಿತಿ ಯಾಚಿಸಿದಾಗ ಸೊಗಸಾಗಿ, ಚತುರತೆಯ ಮಾತುಗಳನ್ನಾಡುವ ಮನುಷ್ಯ ಅವನು. ಅಷ್ಟೇ ಸಹನೆಯಿಂದ ಮತ್ತೊಬ್ಬನ ಮಾತುಗಳಿಗೆ ಓಗೊಡುವವನೂ ಹೌದು.

ಎರಡೂ ಪಕ್ಕಗಳ ಅಂಗಡಿಗಳ ಕಡೆ ದೃಷ್ಟಿ ಮಿಂಚಿಸಿ ಒಂದೇ ಗತಿಯಲ್ಲಿ ಸಾಗುತ್ತಾ ಹೇಳಿದ.

"ನನ್ನ ನೋಟುಗಳ ಸಂಗ್ರಹ ಅಷ್ಟೇನೂ ಭಾರಿಯಾದ್ದಲ್ಲ"

"ಆದರೆ ವ್ಯಾಪಾರ ಭಾರಿಯಾದದ್ದು"

ಪಿಚಾಂಡಿ ಅವನಲ್ಲಿ ನಗೆ ಹೊರಡಿಸಿದ.

"ಈ ವ್ಯಾಪಾರದಲ್ಲಿ ತೊಡಗಿ ಬರೇ ಇಪ್ಪತ್ತು ವರ್ಷ ಆಗಿರೋದು"

"ನೀವು ಯಾವಾಗಲೂ ಬಿಸಿ ಇರ್ತೀರಿ ಅಂತ ಕೇಳಿದೀನಿ"

"ಅಷ್ಟೇನೂ ಅಲ್ಲ. ಈ ಎಂಟು ದಿನಗಳಿಂದ ಮಾತ್ರ ವ್ಯಾಪಾರ ಕಡಿಮೆ ಇದ್ದರೂ ಯಾವುದೋ ಕೆಲಸವಲ್ಲದ ಕೆಲಸಗಳು. ಎಷ್ಟು ಬಿಸಿ ಅಂದ್ರೆ ನಾನು ಎಂಟು ದಿನದಿಂದ ಒಂದು ಚುಟ್ಟಾ ಕೂಡ ಸೇದಿಲ್ಲ"

ಎಂಟು ದಿನಗಳ ಆ ಬಿಗು ಏನೆಂದು ಹೇಳಲಾರ. ಕುಳ್ಳ ಮೆಲ್ಲನೆ ಲೊಟ್ಟೆ ಹಾಕಿದ.

"ಆದರೆ ಈ ವ್ಯಾಪಾರದ ಮುಂದೆ ಮತ್ತೊಂದಿಲ್ಲ. ಅಲ್ಲಾವುದ್ದೀನನ ಅದ್ಭುತ ದೀಪ ಇಟ್ಟುಕೊಂಡ ಹಾಗೆ. ಶ್ರೀಮಂತನಾಗೋದಿಕ್ಕೆ ಅದೇ ಮೊಟಕು ಹಾದಿ.....ಆದರೆ ಎದೆ ಗಟ್ಟಿ ಇರ್ಬೇಕು"

"ಹೌದು, ಎದೆ ಮಾತ್ರ ವಿಪರೀತ ಗಟ್ಟಿ ಇರ್ಬೇಕು"

ಗಟ್ಟಿ ಮಾಡಿಕೊಂಡಿದ್ದ ಎದೆಯನ್ನು ಸವರಿದ.

ಗಡಿಯಾರ ಆರು ಐವತ್ತು ತೋರಿಸಿತು. ಸರಿಯಾದ ವೇಳೆಗೆ ಹೊಂದಿಕೊಂಡು ಸಾಗುತ್ತಿದೆ ವಾಹನ. ಇನ್ನು ಹತ್ತು ಹದಿನೈದು ನಿಮಿಷಗಳಲ್ಲಿ ಪಕ್ಕದಲ್ಲಿರುವ ವಿಪತ್ಕಾರಿಯ ಮೃತ್ಯು!

ಬಲಗೈ ವೀಲ್‌ನಿಂದ ತೆಗೆದು ಪಕ್ಕದ ಬಾಗಿಲ ಪಿಡಿಯ ಮೇಲೆ ಆಡಿಸಿದ. ಆ ಪಿಡಿ ಸರಿಯಾಗಿದೆ.

ಕಾರು ಆವಡಿ ನ್ಯೂ ರೋಡ್‌ನಿಂದ ನುಂಗಬಾಕಂ ಟ್ಯಾಂಕ್ ರಸ್ತೆಯಲ್ಲಿ ಸಾಗುವಾಗ ಪಿಚಾಂಡಿ ಚಾಲಕನ ಕಡೆ ಪ್ರಶ್ನಾರ್ಥಕವಾಗಿ ನೋಡಿದ. ಪ್ರಶ್ನೆ ಹಾಕಲಿಲ್ಲ. ಆದರೂ ಬಳಸು ರಸ್ತೆಯಲ್ಲಿ ಸಾಗುತ್ತಿರುವೆನೆಂಬುದು ಅರಿವಾಗಿತ್ತು.

ಮಾಂಬಲಂ, ಸೈದಾಪೇಟೆ ದಾಟಿ ಮೌಂಟ್ ರೋಡ್‌ಗೆ ಇಳಿದಾಗ ತಡೆಯದೆ ಶಂಕೆ ಮುಂದಿಟ್ಟ.

"ಹೊಟೇಲಿನಿಂದ ನಿಮ್ಮ ಮನೆಗೆ ಬಂದಾಗ, ಹೋದಾಗ ಈ ರಸ್ತೆಗಳಲ್ಲಿ ಬರಲೇ ಇಲ್ಲ....."

"ಹೌದು, ಮಿಸ್ಟರ್ ಪಿಚಾಂಡಿ. ಇದು ಮಾಮೂಲಿ ಮಾರ್ಗ ಅಲ್ಲ. ಸ್ವಲ್ಪ ಬಳಸು ರಸ್ತೆಯಲ್ಲಿ ಬರ್ತಾ ಇದೀವಿ. ಇನ್ನು ನಾಲ್ಕು ಮೈಲಿ ದೂರದಲ್ಲಿ ಒಂದು ಮೋಟಾರ್ ಇದೆ. ಅದನ್ನ ತೊಗೊಂಡು ಹೋಗ್ಬೇಕು"

"ನಿಮ್ಮ ಮನೆಗೆ ನೀರು ಸರಿಯಾಗಿ ಹತ್ತೋದಿಲ್ಲವೆ?"

"ಇದು ನನ್ನ ಮನೇದಲ್ಲ. ಬೇರೆಯೋರ ಸ್ವತ್ತು. ಬೇರೆಯೋರ ಕೆಲಸ"

ವೆಲಚೇರಿಯಿಂದ ತಾಂಬರಂ ರಸ್ತೆಯಲ್ಲಿ ಸಾಗಿದಾಗ ಪಿಚಾಂಡಿ ಉಸಿರೆಳೆದುಕೊಂಡ. ಎರಡು ಪಕ್ಕಗಳಲ್ಲೂ ಬಟಾ ಬಯಲು. ದೂರ ದೂರಕ್ಕೆ ಮನೆಗಳು. ರಸ್ತೆಯಲ್ಲಿ ಒಂದು ದೀಪವೂ ಇಲ್ಲ.

ಕಾರು ರಸ್ತೆಯಿಂದ ಬಲಕ್ಕೆ ತಿರುಗಿ ಯಾವುದೊ ಸಣ್ಣ ತೋಟದ ಪಕ್ಕದಲ್ಲಿ ಚಲಿಸಿ ದಿಬ್ಬದ ರಸ್ತೆ ಏರತೊಡಗಿತು. ವಾನಂಬಾಡಿ ತಲುಪಲಿದ್ದ ತಾಣ ಸಮೀಪಿಸುತ್ತಿತ್ತು.

ಉದ್ರೇಕ ಒತ್ತಿಡಲು ವಾನಂಬಾಡಿ ಮತ್ತೆ ವಿದೇಶಿ ನೋಟುಗಳ ಮಾತು ತೆಗೆದಿದ್ದ. ಸಭಾಪತಿಯ ವಿಷಯ ಬಂದಾಗ ಪಿಚಾಂಡಿ ಅವನ ನೋಟುಗಳ ಸಂಗ್ರಹದ ಬಗ್ಗೆ ಮೆಚ್ಚಿಗೆಯಿಂದ ಹೇಳಿದ.

"ನಿಮ್ಮ ನೋಟುಗಳ ಸಂಗ್ರಹ ಅಂತಾ ಭಾರಿಯಾದ್ದಲ್ಲ ಅಂತ ಹೇಳಿದ್ರಿ, ಮಿಸ್ಟರ್ ವಾನಂಬಾಡಿ. ಆದರೆ ಸಭಾಪತಿಯ ಸಂಗ್ರಹ ಬಹಳ ಭಾರಿಯಾದ್ದು, ಅಮೂಲ್ಯವಾದ್ದು. ಅವನಲ್ಲಿರೊ ಹಿತ್ತಾಳೆ ಕಟ್ಟುಗಳ ಆ ಮೂರು ಅಮೆರಿಕನ್ ಆಲ್ಬಮ್‌ಗಳು! ಬೆಲೆ ಕಟ್ಟಿದೋರು ಯಾರು? ಕನಿಷ್ಠ ಐವತ್ತು ಲಕ್ಷ ರೂಪಾಯಿ ಆಗಬೋದು. ಎರಡನೇ ನಂಬರಿನ ಆಲ್ಬಮ್‌ನಲ್ಲಿರೊ ಬ್ರಿಟನ್ ನೋಟುಗಳ ಒಟ್ಟು ಬೆಲೆಯೇ....."

ಪಿಚಾಂಡಿ ತುಟಿಗಳನ್ನು ಬಿಗಿಸಿ ವಾಕ್ಯವನ್ನು ಪೂರೈಸದೆ ಹಾಗೆಯೇ ನಿಲ್ಲಿಸಿಬಿಟ್ಟ. ಚಾಕುವಿನಿಂದ ಏಕಾಏಕಿ ಕತ್ತರಿಸಿದಂತೆ ಮಾತು ಮಧ್ಯ ಗಾಳಿಯಲ್ಲಿ ತೂಗಾಡಿತು.

ವಾನಂಬಾಡಿ ಉಸಿರು ತಡೆದು ಮೈಯೆಲ್ಲಾ ಬಿಗಿಸಿದ. ಕುತ್ತಿಗೆಯ ಹಿಂದಿನ ಒರಟು ಕೂದಲುಗಳು ನಿಮಿರಿ ನಿಂತವು.

ಎಡ ಪಕ್ಕದಲ್ಲಿ ಕುಳಿತಿರುವ ಮನುಷ್ಯ ಸಭಾಪತಿಯ ವಿದೇಶಿ ನೋಟುಗಳ ಸಂಗ್ರಹವನ್ನು ನೋಡಿದ್ದಾನೆ! ಆ ನೋಟುಗಳ ಒಟ್ಟು ಬೆಲೆಯನ್ನು ಹೇಳಬಲ್ಲ.....ಸಭಾಪತಿಗೆ ಬ್ರಿಟನ್ ನೋಟುಗಳೊಂದಿಗೆ ಆ ಸಾಚಾ

ಕುವೈತ್ ನೋಟನ್ನು ಮಾರಿದವನೂ ಇವನೇ! .....ಅವನಿಗೂ ಮಾತು ನಾಲಗೆಯಿಂದ ಜಾರಿತೆಂಬುದು ಅರಿವಾಗಿ ಅದನ್ನು ಅರ್ಧಕ್ಕೇ ನಿಲ್ಲಿಸಿಬಿಟ್ಟ ! ಅರ್ಧವಾಕ್ಯದಲ್ಲೇ ತನ್ನನ್ನು ಬಯಲು ಮಾಡಿಕೊಂಡ!

ಪಿಚಾಂಡಿ ಸಭಾಪತಿಯ ನೋಟುಗಳ ಸಂಗ್ರಹವನ್ನು ಚೆನ್ನಾಗಿ ನೋಡಿದ್ದಾನೆ. ಮಧ್ಯಾಹ್ನ ತನ್ನ ಮನೆಗೆ ಬಂದಿದ್ದಾಗ ಅವನ ಸಂಗ್ರಹವನ್ನು ನೋಡಿಲ್ಲವೆಂದು ಸುಳ್ಳು ಹೇಳಿದ್ದ! ಏಕೆ ಹಾಗೆ ಹೇಳಿದ? ಪಿಚಾಂಡಿ ಸಾಮಾನ್ಯನಲ್ಲ.....ಮಗುವಿನ ಮುಖದ ಪಿಶಾಚಿ! ಪಿಚಾಂಡಿ ಮಧ್ಯಾಹ್ನ ಹಾಗೇಕೆ ಹೇಳಿದ?.....ಅರ್ಥವಾಯಿತು..... ಅಂದರೆ ಅದು ಕೊಡುವ ಅರ್ಥ ಒಂದೇ. ಪಿಚಾಂಡಿ ವಿದೇಶಿ ನೋಟುಗಳ ವ್ಯಾಪಾರಿಯಲ್ಲ, ಸಂಗ್ರಹಕಾರನೂ ಅಲ್ಲ....ಅವನು ಪೊಲೀಸ್ ಇಲಾಖೆಯ ಗೂಢಚಾರ! ತನ್ನನ್ನು ಹಿಡಿಯಲು ಗಾಳ ಹಾಕಿ ಕಾಯುತ್ತಿರುವ ಷಿಕಾರಿ! ತನ್ನ ಮೇಲೆ ಹೊಂಚುಹಾಕಲು ಇನ್ಸ್‌ಪೆಕ್ಟರ್ ಫಾಸ್ಟರ್‌ನಿಂದ ನೇಮಿತನಾದ ರಹಸ್ಯಾಧಿಕಾರಿ.

ಅಂದರೆ ತಾನು ಈಗಾಗಲೇ ಸಂಶಯ ಆಗಿಬಿಟ್ಟಿರುವೆ! ಪೊಲೀಸರ ಹದ್ದು ಕಣ್ಣುಗಳು ತನ್ನ ಮೇಲೆ ನೆಟ್ಟಿವೆ.

ಕಾರು ದಿಬ್ಬ ಏರುತ್ತಿತ್ತು.

ಅದು ಕ್ಷಣದಲ್ಲಿ ಪರಿಸ್ಥಿತಿ, ಯೋಜನೆ ಎಲ್ಲವನ್ನೂ ಬದಲಿಸಿತು.

ಪಿಚಾಂಡಿ ಸಾಯುವಂತಿಲ್ಲ! ಅವನು ಸಾಯಲೇಬಾರದು! ಈ ಕ್ಷಣದಲ್ಲೂ, ಪ್ರತಿ ಹೆಜ್ಜೆಯಲ್ಲೂ ತಾನು ಅವನ ಕಣ್ಗಾವಲಿನಲ್ಲಿದ್ದೇನೆ. ಈವರೆಗೆ ಸಾಗಿದ್ದೆಲ್ಲವೂ ಒಂದು ಜಾಲ. ಪೊಲೀಸ್ ಹೂಡಿದ ಜಾಲ...

ಈಗ ತಾನು ಪಿಚಾಂಡಿಗಾಗಿ ಹೂಡಿದ್ದ ಯೋಜನೆಯಲ್ಲಿ ತೊಡಗಿದರೆ ಆಗುವುದೇನು?.....ಯಾವ ರೀತಿಯಲ್ಲೂ ತನಗೆ ಸಂಬಂಧಿಸದ ಸಭಾಪತಿಯ ಕೊಲೆಯಲ್ಲಿ ಖಚಿತವಾದ ಪ್ರಥಮ ಸಂಶಯಿ ಆಗುತ್ತೇನೆ! ಸಭಾಪತಿಯ ಸಂಗ್ರಹದಲ್ಲಿದ್ದ ಸಾವಿರ ದಿನಾರ್‌ಗಳ ಸಾಚಾ ಕುವೈತ್‌ನೋಟಿನ ಚೌರ್ಯದ ಆರೋಪ ತನ್ನ ಮೇಲೆ ಜಿಗಿದು ಕಚ್ಚಿಕೊಳ್ಳುತ್ತದೆ. ಅದೇ ನೋಟಿಗಾಗಿಯೇ

ಸಭಾಪತಿಯ ಕೊಲೆ! ಅವೆರಡನ್ನೂ ಸಂಬಂಧಿಸುವ ಪಿಚಾಂಡಿಯ ಕೊಲೆಯ ಆಪಾದನೆಯೂ ತನ್ನ ಮೇಲೆ ಕುಸಿಯುತ್ತದೆ.... ಒಂದಲ್ಲ, ಮೂರು ಆರೋಪಗಳು! ಈಗಿನ ಪರಿಸ್ಥಿತಿಯನ್ನು ಕ್ಷಣಗಳಲ್ಲಿ ಬದಲಾಯಿಸದಿದ್ದರೆ ತಾನೇ ಕೈಗಳಿಗೆ ಕೋಳ ಹಾಕಿಕೊಂಡು ಪೊಲೀಸರಿಗೆ ತನ್ನನ್ನು ಒಪ್ಪಿಸಿಕೊಳ್ಳುವ ಆರೋಪಿಯಾಗಿಬಿಡುತ್ತೇನೆ.....

ಏಕಾಏಕಿ ಪಕ್ಕದಲ್ಲೇ ಸರಕ್ಕನೆ ಹೊರಳಿ ಮುಂದೆ ಬಂದ ಯಾವುದೊ ವಾಹನದ ಬಾಲದ ಕೆಂಪು ದೀಪದ ಎದುರಿನಲ್ಲಿ ಮಿನುಗಿತು.

ತಲೆಯಲ್ಲಿ ಭಯ, ಅಪಾಯದ ಚಿಂತೆ, ಬದಲಿಸಿದ ತುರ್ತು ನಿರ್ಧಾರ ಎಲ್ಲವನ್ನೂ ಒಂದುಗೂಡಿಸಿಕೊಂಡಿದ್ದ ವಾನಂಬಾಡಿ ಚಕ್ಕನೆ ಬ್ರೇಕ್ ಒತ್ತಿದ. ಸಾಕಷ್ಟು ವೇಗದಲ್ಲಿದ್ದ ಕಾರು ಕರ್ಕಶವಾದ ಶಬ್ದ ಹೊಮ್ಮಿಸಿತು. ಆ ರಭಸಕ್ಕೆ ವಾನಂಬಾಡಿ ಒತ್ತಡ ಕುಗ್ಗಿಸುವ ಯತ್ನದಲ್ಲಿ ಸೀಟಿನಲ್ಲಿ ಎದ್ದು ನಿಂತ. ಇಬ್ಬರೂ ಪಕ್ಕಗಳಿಗೆ ಹೊರಳಿದರು. ಜಿಗಿದರು. ಉಜ್ಜಿದರು.

ಕಾರು ಪಕ್ಕಕ್ಕೆ ಸ್ಕಿಡ್ ಆಗಿ ನೆಲವನ್ನು ಉಳುವಂತೆ ರಸ್ತೆಯನ್ನು ಆಳವಾಗಿ ಗೀರುತ್ತಾ ಪಕ್ಕದಲ್ಲಿದ್ದ ಕಬ್ಬಿಣದ ರಕ್ಷಣೆಯ ದಪ್ಪ ಕಂಬಿಗಳಿಗೆ ತಾಕದೆ ಇಳಿಜಾರಿನ ಕಡೆಗೆ ಮುಖ ಮಾಡಿ ನಿಂತಿತು. ಸ್ಕಿಡಿಂಗ್‌ನಿಂದ ಬಲವಾಗಿ ಸವೆದ ಹಿಂದಿನ ಚಕ್ರವೊಂದು ಬುಸುಗುಟ್ಟಿತು. ಸಿಳ್ಳು ಹಾಕುವಂತೆ ಗಾಳಿಯನ್ನು ಹೊರಹೊಮ್ಮಿಸಿತು.

ಕಾರು ನಿಂತಿದ್ದುದು ದಿಬ್ಬದ ತುಟ್ಟ ತುದಿ.

"ಹಾಗೆ ಏಕದಂ ಬ್ರೇಕ್ ಒತ್ತಬಾರದಿತ್ತು. ನೀವು.....ಓ ಗಾಡ್! ಏನಾಯ್ತೊ?"

ಬೆದರಿದ ಪಿಚಾಂಡಿ ಆಕ್ಷೇಪಿಸುವ ಧ್ವನಿಯಲ್ಲಿ ಕಂಪಿಸುತ್ತಾ ಹೇಳಿದ.

"ನಾನು ಏನೋ ಯೋಚನೆ ಮಾಡ್ತಿದ್ದೆ. ಆ ಗಾಡಿ ಸೂಚನೆ ಕೊಡದೆ ಓವರ್‌ಟೇಕ್ ಮಾಡಿಬಿಡ್ತು"

ಕತ್ತಲು ಏರುತ್ತಿತ್ತು. ದೀಪವಿಲ್ಲದ ರಸ್ತೆ, ಸುಂಯ್‌ಗುಡುವ ಗಾಳಿ.

ತೊಡೆಗಳಿಗೆ ಬೇಸರದಿಂದ ಕೈಗಳನ್ನು ಬಾರಿಸಿ ಹ್ಯಾಂಡ್ ಬ್ರೇಕ್ ಹಾಕಿದ ವಾನಂಬಾಡಿ ತನ್ನ ಪಕ್ಕದ ಬಾಗಿಲು ತೆರೆದು ಕೆಳಗಿಳಿದ. ಕಾಲುಗಳು ಕಂಪಿಸುತ್ತಿದ್ದವು.

"ಹಿಂದಿನ ಚಕ್ರ ಏನಾಯ್ತೊ ನೋಡ್ತೀನಿ"

ಉಮ್ಮಳಿಸಿದ ಉಸಿರಿನಲ್ಲಿ ಹೇಳಿದ. ಅದು ಪಿಚಾಂಡಿಗೆ ಕೇಳಿರಲಿಕ್ಕಿಲ್ಲ.

* * *

ವಾನಂಬಾಡಿ ಹಿಂದಿನ ಚಕ್ರದ ಬಳಿ ಚಕಲಮಕಲ ಹಾಕಿ ಕುಳಿತು ಸಮೀಪದಿಂದ ನೋಡಿದ. ಟೈರು ಚಪ್ಪಟೆಯಾಗಿತ್ತು. ಅದನ್ನೇ ನೋಡುತ್ತಾ ಕುಳಿತ. ಅವನಿಗೆ ಲಘುವಾಗಿ ತಲೆ ಸುತ್ತುತ್ತಿದೆ ಎನಿಸಿತು.ಅಲ್ಲ, ಯಾವುದೊ ಅಸ್ಥಿರತೆ. ಕಣ್ಣು ದೃಷ್ಟಿಯನ್ನು ಟೈರಿನ ಮೆಲೆ ಸರಿಯಾಗಿ ಹೊಂದಿಸಲಾಗಲಿಲ್ಲ.....

ಅದು ದೃಷ್ಟಿ ದೋಷವಲ್ಲ. ಚಪ್ಪಟೆಯಾದ ಟೈರಿನ ಚಕ್ರ ಅವನಿಂದ ಆಚೆಗೆ ಹೊರಳುತ್ತಿದೆ. ಮೆಲ್ಲನೆ ಸರಿದ ಚಕ್ರ ಕ್ಷಣಗಳಲ್ಲಿ ವೇಗವಾಗಿ ಚಲಿಸುತ್ತಿದೆ!

ವಾನಂಬಾಡಿ ಚೀತ್ಕಾರದೊಂದಿಗೆ ಎದ್ದು ನಿಂತ. ಸಂಭವಿಸಿದ್ದೇನೆಂಬುದು ತತ್‌ಕ್ಷಣದಲ್ಲಿ ಅರ್ಥವಾಗಿತ್ತು. ಕಾರಿನಿಂದ ಹೊರಬರಲು ಯತ್ನಿಸುತ್ತಿದ್ದ ಪಿಚಾಂಡಿ ವೀಲ್ ಅಡಿಯಲ್ಲಿ ತನ್ನ ದಪ್ಪನೆಯ ಶರೀರವನ್ನು ಹೊರಳಿಸುತ್ತಾ, ತಲೆ ಎತ್ತಿ ಹಿಂದಕ್ಕೆ ನೋಡಿ ನಿಸ್ಸಹಾಯಕನಂತೆ ಕೈಗಳನ್ನಾಡಿಸುತ್ತಿದ್ದ. ಅವನು ಏನೊ ಮಾಡಿದ್ದ.....ದಪ್ಪ ಶರೀರದವ ಹೊರಬರಲು ಯತ್ನಿಸಿದಾಗ ಹ್ಯಾಂಡ್‌ಬ್ರೇಕ್ ಅಲುಗಾಡಿಸಿದ್ದ.....ಇಲ್ಲವೆ, ಗೇರ್ ಮೇಲೆ ಕೈ ಆಡಿಸಿ ಅದನ್ನು ನ್ಯೂಟ್ರಲ್‌ಗೆ ತಂದಿದ್ದ. ಎರಡನ್ನೂ ಮಾಡಿ ವಾಹನವನ್ನು ಚಲನೆಗೆ ಬರುವಂತೆ ಮಾಡಿದ್ದ.

ಇಳಿಜಾರು ರಸ್ತೆ ಕಾರನ್ನು ವೇಗವಾಗಿ ಕೆಳಕ್ಕೆ ಒಯ್ಯುತ್ತಿತ್ತು.

"ಬ್ರೇಕ್! ಬ್ರೇಕ್!.....ಪಿಚಾಂಡಿ, ಬ್ರೇಕ್ ಒತ್ತು !"

ವಾನಂಬಾಡಿ ತಲೆಗೆ ಕೈಯಿಟ್ಟು ಅರಿಚಿದ. ಆದರೆ ಪಿಚಾಂಡಿ ಆ

ಕೆಲಸ ಮಾಡಲಾಗಲಿಲ್ಲ. ಅವನು ತನ್ನ ಪೀನ ದೇಹವನ್ನು ವೀಲ್ ಅಡಿಯಲ್ಲಿ ಹೊರಳಿಸಿ ಹೊರಬರಲಾಗಲಿಲ್ಲ.

ಕಾರು ವೇಗವಾಗಿ ಇಳಿಯುತ್ತಿತ್ತು. ವಾನಂಬಾಡಿ ಏನೂ ಮಾಡುವಂತಿರಲಿಲ್ಲ. ಕೈ ಕೈ ಹಿಸುಕುತ್ತಾ ನಿಂತ.

ಉಹುಂ, ಪಿಚಾಂಡಿ ಸಾಯುವಂತಿಲ್ಲ. ಅವನು ಉಳಿಯಲೇಬೇಕು. ಅವನ ಉಳಿವಿನೊಂದಿಗೆ ತನ್ನ ಉಳಿವು.

ವಾನಂಬಾಡಿ ಮತ್ತೊಮ್ಮೆ ಕಿರಿಚಿ ಹೇಳಿದ್ದು ಕಾರಿನವರೆಗೆ ತಲುಪಲಿಲ್ಲ.

ವಾನಂಬಾಡಿ ಪ್ರಾರ್ಥಿಸಿದ. ಚಲಿಸಿ ಹೋಗುತ್ತಿರುವ ಕಾರು ಪಕ್ಕದ ರಕ್ಷಣೆಯ ಕಂಬಿಗಳಿಗೆ ಘರ್ಜಿಸಿ ನಿಂತುಬಿಟ್ಟರೆ ಸಾಕು. ಅದೊಂದು ನಿರರ್ಥಕ ಪ್ರಾರ್ಥನೆ. ಎಂದೂ ಪ್ರಾರ್ಥನೆ ಮಾಡದವ ಆ ಬಣ್ಣದ ಕಾಗದಗಳ ಹುಚ್ಚ.

ಪಾರ್ಶ್ವವಾಯು ತಾಕಿದವನಂತೆ, ಕಾಲುಗಳನ್ನು ಕದಲಿಸಲಾಗದೆ ದಿಬ್ಬದ ರಸ್ತೆಯ ಮಧ್ಯೆ ಕಂಬವಾಗಿ ನಿಂತಿದ್ದ.

"ಅಯ್!"

ಉಳಿದಿದ್ದ ಆಸೆಯಲ್ಲಿ ಉಮ್ಮಳಿಸಿದ, ಕಾರು ಅಡ್ಡಾದಿಡ್ಡಿಯಾಗಿ ಹೊರಳಿ ವೇಗ ಏರಿಸಿತು. ರಕ್ಷಣೆಯ ಕಂಬನಿಗಳ ಕಡೆಗೆ ಸರಿದು ಅವನನ್ನು ಉದ್ರೇಕಿಸಿತು.....ಆದರೆ ಕಂಬಿಗಳಿಗೆ ತಾಕದೆ ಮತ್ತೆ ರಸ್ತೆಯಲ್ಲಿ ಸಾಗಿತು.

ಪಿಚಾಂಡಿ ಹತಾಶ ರೀತಿಯಲ್ಲಿ ಹೊರಬರುವ ಪ್ರಯತ್ನ ನಡೆಸಿದ್ದು ಚೆನ್ನಾಗಿ ಕಾಣಿಸಿತು. ಅವನ ಒಂದು ಕಾಲು ತೆರೆದ ಬಾಗಿಲ ಮೂಲಕ ಹೊರಕ್ಕೆ ಚಾಚಿತ್ತು. ಆದರೆ ಸ್ಥೂಲವಾದ ತನ್ನ ಹಿಂಭಾಗವನ್ನು ಹೊರಳಿಸಲು ಸಾಧ್ಯವಾಗಿರಲಿಲ್ಲ.

ವಾನಂಬಾಡಿ ಅವನ ಒಂದೊಂದು ಹತಾಶ ಪ್ರಯತ್ನದ ಚರ್ಯೆಯನ್ನೂ ಅತೀವ ನಿರಾಶನಾಗಿ ನೋಡುತ್ತಿದ್ದ.

ಕಾರು ಕಬ್ಬಿಣದ ಕಂಬಿಗಳಿಗೆ ಜೋರು ಶಬ್ದದೊಂದಿಗೆ ಬಾರಿಸಿತು. ಕಾರು ಅಲ್ಲಿ ಸ್ಥಗಿತಗೊಳ್ಳಲಿಲ್ಲ. ಕಬ್ಬಿಣದ ಕಂಬಿಗಳು ಮುರಿದು ತೂರಿ

ಬಿದ್ದವು. ಎಡ ಪಕ್ಕಕ್ಕೆ ಹೊರಳಿದ ಕಾರು ತಗ್ಗಿಗೆ ಉರುಳಿತು.....ಹೃದಯ ಕ್ರಿಯೆ ನಿಲ್ಲಿಸುವಂತೆ ಪಿಚಾಂಡಿಯ ಭಯಂಕರ ಚೀತ್ಕಾರ ಕೇಳಿಸಿತು.

ವಾನಂಬಾಡಿಯೂ ಚೀತ್ಕರಿಸಿದ. ಬಾಗಿಲಿನ ಹೊರಕ್ಕೆ ಅರ್ಧ ಕಾಣುತ್ತಿದ್ದ ದೇಹದೊಂದಿಗೆ ಕಾರು ಮತ್ತಷ್ಟು ಉರುಳಿ ಕಡೆಗೊಮ್ಮೆ ಚಕ್ರಗಳನ್ನು ಆಕಾಶಕ್ಕೆ ತೋರುತ್ತಾ ಸ್ಥಗಿತಗೊಂಡಿತು.

ವಾನಂಬಾಡಿ ತಗ್ಗಿಗೆ ಇಳಿದು ಅನಾಹುತದ ದೃಶ್ಯ ನೋಡುವ ಅಗತ್ಯವೇ ಇರಲಿಲ್ಲ. ನಜ್ಜುಗುಜ್ಜಾಗಿ, ರಕ್ತಸಿಕ್ತವಾಗಿ, ವಿಕೃತಗೊಂಡ ಮೃತ ದೇಹದ ಭೀಕರ ನೋಟವನ್ನು ನಿಂತಲ್ಲಿಯೇ ಕಲ್ಪಿಸಿಕೊಂಡ.....

"ಡ್ರಿಂಕ್.....ಒಂದು ಡ್ರಿಂಕ್ ತಗೊಂಡು ಬಾ"

ಆಟೋರಿಕ್ಷಾದಿಂದ ಇಳಿದು ಮನೆಯೊಳಕ್ಕೆ ಧಾವಿಸಿದ ವಾನಂಬಾಡಿ ಹುಚ್ಚನಂತೆ ಅಬ್ಬರಿಸಿ ಆಣತಿ ಕೊಟ್ಟ.

ಸೇವಕ ಅಮಾಸೆ ಬಾಗಿಲು ತೆರೆಯಲು ಒಂದು ನಿಮಿಷದಷ್ಟು ದೀರ್ಘ ವಿಳಂಬ ಮಾಡಿ ಯಜಮಾನನನ್ನು ರೊಚ್ಚಿಗೆಬ್ಬಿಸಿದ್ದ. ವಾನಂಬಾಡಿ ಆವರೆಗೆ ಒಂದು ಕ್ಷಣವನ್ನೂ ವ್ಯರ್ಥ ಮಾಡಿರಲಿಲ್ಲ. ಇನ್ನೊಂದು ಕ್ಷಣವೂ ವ್ಯರ್ಥವಾಗುವಂತಿರಲಿಲ್ಲ. ಎಲ್ಲಕ್ಕೂ ಮೊದಲು ಅವನು ಸಾವಿರ ದಿನಾರ್‌ಗಳ ಮೌಲ್ಯದ ಆ ಸಾಚಾ ಕುವೈತ್ ನೋಟನ್ನು..... ಆ ತುಚ್ಛ, ಅಪಾಯಕಾರಿ ನೋಟನ್ನು ಸುಟ್ಟು ಹಾಕಬೇಕು! ಮೊದಲು ಮಾಡಲು ಈಗ ಅವನು ಹಾತೊರೆದಿದ್ದ.

ಅಪಘಾತ ನಡೆದು ಹೋಗಿತ್ತು. ಅದು ನಡೆಯಲೆಂದು ಮೊದಲು ಅವನೇ ಕಾತರಿಸಿದ್ದ. ನಂತರ ಅದು ಸಂಭವಿಸಬಾರದೆಂದು ಹಾರ್ದಿಕವಾಗಿ ನಿರ್ಧರಿಸಿದ್ದ.....ಆದರೆ ಅದು ಸಂಭವಿಸಿತು!

ಆಳು ದೊಡ್ಡ ಗ್ಲಾಸ್ ತುಂಬಾ ಬ್ರಾಂದಿ ತುಂಬಿಕೊಟ್ಟ. ವಾನಂಬಾಡಿ ಎರಡೇ ಗುಟುಕುಗಳಲ್ಲಿ ಹೀರಿ ಹಾಕಿದ.

"ಆಕ್ಸಿಡೆಂಟ್!" ಉಬ್ಬಸ ಹಾಕಿದ.

"ಎಲ್ಲಿ? ಯಾವ ಆಕ್ಸಿಡೆಂಟ್?"

ನಿರಾಸಕ್ತ ಆತುರ ತೋರದೆ ಕೇಳಿದ.

"ನನ್ನ ಕಾರು ಜಜ್ಜಿ ಹೋಯ್ತು. ನಾನು ಮನೆಗೆ ಊಟಕ್ಕೆ ಕರಕೊಂಡು ಬರ್ತಾ ಇದ್ದ ಮನುಷ್ಯ....."

"ಇನ್ನೊಂದು ಗ್ಲಾಸ್ ತೊಗೊಳಿ."

ಅಮಾಸೆಯ ಧ್ವನಿಯಲ್ಲಿ ಆ ಮನುಷ್ಯನಿಗೆ ಏನಾಯಿತೆಂದು ಕೇಳುವ ಆತಂಕ, ಕಳಕಳಿ ಇರಲಿಲ್ಲ.

ಒಡೆಯನ ಉತ್ತರಕ್ಕೆ ಕಾಯದೆ ಗ್ಲಾಸ್ ಭರ್ತಿ ಮಾಡಿದ. ಅವನ ಕಣ್ಣುಗಳಲ್ಲಿನ ಅದೇ ಹಿಂದಿನ ಕಠಿಣತೆ.

ವಾನಂಬಾಡಿಗೆ ನಿಜಕ್ಕೂ ಇನ್ನೊಂದು ಗ್ಲಾಸ್ ಬ್ರಾಂದಿ ಬೇಕಿತ್ತು. ಆದರೆ ಅದಕ್ಕೂ ಮೊದಲು ಬಿಲದ ಕೋಣೆ ಸೇರಿ ಆ ನೋಟನ್ನು ನಾಶ ಪಡಿಸಬೇಕಾಗಿತ್ತು.

ಬಿಲದ ಬಾಗಿಲು ತೆಗೆದು ಜೋರಾಗಿ ಸರಿಸಿದ. ಅದರಲ್ಲಿ ಆಗಲೇ ದೀಪ ಹೊತ್ತಿತ್ತು! ವಾನಂಬಾಡಿ ಬಾಗಿಲಲ್ಲೇ ನಿಂತುಬಿಟ್ಟ.....ಫಾಸ್ಟರ್ ಕುರ್ಚಿಯಲ್ಲಿ ಕುಳಿತು ಅವನಿಗಾಗಿ ಕಾಯುತ್ತಿದ್ದ!

ಇನ್ಸ್‌ಪೆಕ್ಟರ್‌ನನ್ನು ಒಳಗೆ ಬಿಟ್ಟವರು ಯಾರು? .....ಓ, ಓ ಅಮಾಸೆ ತನ್ನ ಶತ್ರು!

"ನಿಮಗೆ ಗೊತ್ತೆ ನಾನು ಇಲ್ಲಿಗೆ ಯಾಕೆ ಬಂದಿದೀನಿ ಅಂತ....."

ಎನ್ನುತ್ತಾ ಇನ್ಸ್‌ಪೆಕ್ಟರ್ ವಾನಂಬಾಡಿಯ ಬಳಿಗೆ ಬಂದು ಅವನ ಕೋಟು ತೋಳಿನ ತುದಿ ಹಿಡಿದ.

ವಾನಂಬಾಡಿ ತನ್ನ ಐಚ್ಛಿಕ ಕ್ರಿಯೆಗಳೆಲ್ಲಾ ನಿರ್ಜೀವಗೊಂಡಂತೆ ತನ್ನಿಂದ ಹೊರಗಾಗಿದ್ದ. ಈಗ ಅವನು ನಟನೆ ಮಾಡಲಿಲ್ಲ. ಆಟಗಳೆಲ್ಲಾ ಹಳೆಯದಾಗಿದ್ದವು.

"ನೀವು ಭಾವಿಸ್ತಿರೋದು ನಾನು ಸಭಾಪತಿಯ ಕೊಲೆ ಮಾಡ್ದೆ ಅಂತ....."

"ಹಾಂ?" ಏರಿಸಿದ ಹುಬ್ಬು ಮತ್ತೆ ಇಳಿಸಿದ ಫಾಸ್ಟರ್.

"ಆದರೆ ಆ ಕೆಲಸ ನಾನು ಮಾಡ್ಲಿಲ್ಲ.....ಯಾಕೆ ಹಾಗೆ ನೋಡ್ತಿದೀರಿ?.....ಆಲ್‌ರೈಟ್, ನಾನು ಸತ್ಯ ಸಂಗತಿ ಹೇಳಿಬಿಡ್ತೀನಿ. ಸಭಾಪತಿಯ ಆಲ್ಬಮ್‌ನಿಂದ ಆ ಸಾಚಾ ಕುವೈತ್ ನೋಟನ್ನ ತೊಗೊಂಡು ನನ್ನ ಖೋಟಾ ನೋಟು ಅಲ್ಲಿಗೆ ಸೇರಿಸ್ದೆ. ಯಾವತ್ತು? ನಿಮಗೆ ಸಹಾಯ ಮಾಡೋದಿಕ್ಕೆ ನಾನು ಅಲ್ಲಿಗೆ ಹೋದೆನಲ್ಲಾ ಅದರ ಮರು ದಿನ ರಾತ್ರಿ ಆ ಕೆಲಸ ನಡೆಸಿದ್ದು.....ಸಭಾಪತಿಯನ್ನು ನಾನು ಕೊಲ್ಲಲಿಲ್ಲ....."

ವಾನಂಬಾಡಿ ಇನ್ಸ್‌ಪೆಕ್ಟರ್‌ನ ಮೌನವನ್ನು ಗಮನಿಸಿ ತನ್ನ ಹಿಂದೆ ನಿಂತಿದ್ದ ಸೇವಕನ ಕಡೆ ತಿರುಗಿ ಯಾಚಿಸುವವನಂತೆ ಹೇಳಿದ.

"ಅಮಾಸೆ, ಹೇಳು.....ಇನ್ಸ್‌ಪೆಕ್ಟರ್‌ಗೆ ಹೇಳು. ನೀನು ಬಾಗಿಲಿನ ಬೀಗದ ರಂಧ್ರದಲ್ಲಿ ನೋಡ್ತಾ ನನ್ನ ಮೇಲೆ ಗೂಢಚರ್ಯೆ ನಡೆಸ್ತಾ ಇದ್ದೆ.....ನಾನು ಯಾವ ದಿನ ರಾತ್ರಿ ಈ ಕೋಣೆಗೆ ಬಂದು ನನ್ನ ಆಲ್ಬಮ್‌ಗೆ ಆ ನೋಟನ್ನ ಸೇರಿಸ್ದೆ ಅನ್ನೋದನ್ನ ಫಾಸ್ಟರ್‌ಗೆ ಹೇಳು"

"ಆಗಲೇ ಹೇಳ್ದೆ, ಮೊದಲಾಳಿ. ಅದೇ ಅವರು ಇಲ್ಲಿಗೆ ಬಂದಾ ಕೇಳಿದ ಮೊದಲನೆ ಪ್ರಶ್ನೆ. ಅದು ನಡೆದಿದ್ದು ಒಂಭತ್ತು ರಾತ್ರಿಗಳ ಹಿಂದೆ. ಈವತ್ತು ಶುಕ್ರವಾರ. ಅದು ನಡೆದಿದ್ದು ಒಂಭತ್ತು ದಿನಗಳ ಹಿಂದೆ ಬುಧವಾರ"

"ಹಾಂ, ಅದೇ ಬುಧವಾರ ರಾತ್ರಿ ಸಭಾಪತಿ ಕೊಲೆ ಆದದ್ದು" ಗಟ್ಟಿಯಾಗಿ ಗೊಣಗಿದ ಫಾಸ್ಟರ್.

ಮುಳುಗಿ ಹೋಗಿದ್ದ ವಾನಂಬಾಡಿ, ಅತೀವ ಆಘಾತ, ವೇದನೆಯಲ್ಲಿ ಗೋಳಾಡಿದ.

"ಇಲ್ಲ! ಇಲ್ಲ!! ಅಮಾಸೆ ಸುಳ್ಳು ಹೇಳ್ತಿದಾನೆ. ಅವನು ಮರೆತು ಬಿಟ್ಟಿದಾನೆ.....ಅವನಿಗೆ ನಿಜವಾಗಿ ಒಳ್ಳೇ ಜ್ಞಾಪಕ ಶಕ್ತಿ ಇದ್ದರೂ ಹಾಗೆ

ಸುಳ್ಳು ಹೇಳ್ತಿದಾನೆ.....ಅವನಿಗೆ ಮೊದಲಿನಿಂದ ನನ್ನ ಮೇಲೆ ತಿರಸ್ಕಾರ. ನನ್ನ ವಿದೇಶಿ ನೋಟುಗಳ ವ್ಯಾಪಾರದ ಮೇಲೆ ತಿರಸ್ಕಾರ..... ನಾನು ಬಣ್ಣದ ಕಾಗದಗಳ ಹುಚ್ಚನಂತೆ.....ನನ್ನ ಬಣ್ಣದ ಹುಳು ಅಂತ ಮರೆಯಲ್ಲಿ ಕೂಗ್ತಾನೆ.....ಅವನಿಗೆ ನಿಜವಾಗಿ ಗೊತ್ತಿದೆ ಕಳೆದ ವಾರ ಇದೇ ದಿನದ ರಾತ್ರಿ ನಾನು ಹಾಗೆ ಮಾಡಿದ್ದು ಅಂತ.....ನಾನು ಸಭಾಪತಿಯ ನೋಟು ತಂದು ಇಲ್ಲಿ ಸೇರಿಸಿದ್ದು ಕಳೆದ ಶುಕ್ರವಾರ ರಾತ್ರಿ!"

ವಾನಂಬಾಡಿ ಪುನರ್ವಿಚಾರಣೆಗಾಗಿ ಪ್ರಾರ್ಥಿಸುವ ಖೈದಿಯಂತೆ ಹುಚ್ಚು ಹುಚ್ಚಾಗಿ ಬೇಡಿದ.

"ಮಿಸ್ಟರ್ ಫಾಸ್ಟರ್, ನೀವು ನನಗೆ ಸಭಾಪತಿಯ ಮನೆಗೆ ಬರೋದಿಕ್ಕೆ ಫೋನ್ ಮಾಡಿದ ಆ ಮೊದಲನೆ ರಾತ್ರಿ ತಪ್ಪು ವಿಳಾಸದ ಮನೆಗೆ ಹೋಗಿದ್ದೆ.....ಪೊಟ್ಟಿ ಅಳಗಪ್ಪನ್ ಬೀದಿಗೆ ಬದಲು ಅಳಗಪ್ಪನ್ ಬೀದಿಗೆ.....ನಾನು ಸಭಾಪತಿಯ ಮನೆಗೆ ಅದಕ್ಕಿಂತಲೂ ಮೊದಲು ಭೇಟಿ ಕೊಟ್ಟಿರಲಿಲ್ಲ ಅನ್ನೋದನ್ನ ಅದು ರುಜುವಾತುಪಡಿಸೋದಿಲ್ಲವೆ?"

ಫಾಸ್ಟರ್ ಗಂಭೀರತೆಯಿಂದ ಸರಿದಿರಲಿಲ್ಲ.

"ಹಾಗೇನಿಲ್ಲ. ಅದು ಹಾಗೆ ರುಜುವಾತುಪಡಿಸೋದಿಲ್ಲ. ನೀವು ಅಳಗಪ್ಪನ್ ಬೀದಿಯ ಮನೆಗೆ ಹೋಗಿದ್ದೆ ಅನ್ನೊ ಹೇಳಿಕೆ ನಿಮ್ಮದೊಂದು ಮುನ್ನೆಚ್ಚರಿಕೆಯ, ಚಾತುರ್ಯದ ನಾಟಕ ಆಗಿರ್ಬೋದು. ಬಹಳ ಮಂದಿ ಹತ್ಯಾಕಾರಿಗಳು ಅಂತಹ ಹೇಳಿಕೆ ಸೃಷ್ಟಿಸಿಕೊಳ್ತಾರೆ.....ಈ ಸಿಟಿಗೆ ಹೊಸಬ ಅನ್ನಿಸಿಕೊಂಡ ಪಿಚಾಂಡಿಯೇ ಸ್ವಲ್ಪವೂ ತಪ್ಪು ಮಾಡದೆ ಸರಿಯಾಗಿ ಆ ಸಭಾಪತಿಯ ವಿಳಾಸಕ್ಕೆ ಹೋಗಿದ್ದ.....ಸರಿ, ಪಿಚಾಂಡಿ ಎಲ್ಲಿ ಈಗ? ಅವನ ಬಗ್ಗೆ ನಿನ್ನೆಯೇ ವಿಚಾರಿಸ್ದೆ. ಅವನು ಹೇಳಿದ ಹಾಗೆ ನಿಜವಾಗಿ ಅವನು ಸಭಾಪತಿಯ ಆ ಕುವೈತ್ ನೋಟು ಕೊಳ್ಳೋದಿಕ್ಕೆ ಬಂದಿದ್ದ..... ನಿಮ್ಮಲ್ಲಿಗೂ ಬಂದಿದ್ದ"

"ಅಂದರೆ .....ಅಂದರೆ ಅವನು ನಿಮ್ಮ ಗೂಢಚಾರ ಅಲ್ಲ?"

ಪೂರ್ತಿಯಾಗಿ ಮೋಸ ಹೋಗಿದ್ದ ವಾನಂಬಾಡಿ ನೋವು,

ಅಚ್ಚರಿಯಲ್ಲಿ ಪೆಚ್ಚಾಗಿ ಕೇಳಿದ.

"ಛೇ, ನಮ್ಮ ಗೂಢಚಾರ ಯಾಕೆ ಆಗ್ತಾನೆ. ನಿಮ್ಮ ಹಾಗೆ ಅವನೂ ಒಬ್ಬ ವಿದೇಶಿ ಕರೆನ್ಸಿಗಳ ವ್ಯಾಪಾರಿ.....ಎಲ್ಲಿ ಈಗ ಆ ಪಿಚಾಂಡಿ?"

ಥರಥರ ಕಂಪಿಸಿದ ವಾನಂಬಾಡಿ.

"ನನ್ನೊಂದಿಗೆ ಕಾರಿನಲ್ಲಿ ಬರ್ತಿದ್ದಾಗ ಅವನಿಗೆ ಆಕ್ಸಿಡೆಂಟ್ ಆಗಿ ಬಿಡ್ತು"

"ಎಲ್ಲಿ?"

"ತಾಂಬರಂ ರೋಡ್ ಪಕ್ಕದ ದಿಬ್ಬ ಏರುವಾಗ ಕಾರು ಇಳಿಜಾರಿಗೆ ಹರಿದುಬಿಡ್ತು"

"ಅವನು ಸತ್ತು ಹೋದ?"

"ಸತ್ತು ಹೋದ

"ಅದೇ ಕಾರಿನಲ್ಲಿದ್ದೋರು ನೀವು ಸುರಕ್ಷಿತವಾಗಿದೀರಿ! ನೀವು ಯಾಕೆ ಅವನ್ನ ಕಾರಿನಲ್ಲಿ ಕರಕೊಂಡು ಹೋಗ್ತಿದ್ರಿ?"

"ಕರಕೊಂಡು ಬರ್ತಿದ್ದೆ.....ನನ್ನ ಮನೆಗೆ.....ರಾತ್ರಿಯ ಊಟಕ್ಕೆ"

"ಎಲ್ಲಿಂದ?"

"ಕೊನ್ನೂರು ಹೈರೋಡಿನ ಪಾಂಡ್ಯನ್ ಹೊಟೇಲಿನಿಂದ"

"ಕೊನ್ನೂರು ಹೈರೋಡ್‌ನಿಂದ ನೀವಿರೊ ಕಾಶಿಚೆಟ್ಟಿ ಬೀದಿಯ ಮನೆಗೆ?.....ತಾಂಬರಂ ರೋಡ್‌ನಲ್ಲಿ ಯಾಕೆ ಬಂದ್ರಿ? ತಾಂಬರಂ ರೋಡ್ ಕಡೆಯಿಂದ ಬರೋದು ನಿಮಗೆ ಯಾವತ್ತಿನಿಂದ ಮೊಟಕು ಹಾದಿ ಆಯ್ತು?.....ನೀವು ಈ ಕೋಣೆಗೆ ಬಂದ ಕೂಡ್ಲೆ ನಿಮ್ಮನ್ನ ಕೇಳ್ದೆ. ನಾನು ಯಾಕೆ ಇಲ್ಲಿಗೆ ಬಂದಿದೀನಿ ಗೊತ್ತೆ ಅಂತ. ನೀವಾಗಿ ನನ್ನ ಮುಂದೆ ಸತ್ಯ ಸಂಗತಿ ತೋಡಿ ಹಾಕಿದ್ರಿ"

"ಆದರೆ ಸತ್ಯವಾಗಿ ನಾನು ಕೊಲೆಗಾರ ಅಲ್ಲ"

ಧ್ವನಿ ಕಂಪಿಸಿದ.

"ನಾನು ಇಲ್ಲಿಗೆ ಬಂದಿದ್ದು ಪಿಚಾಂಡಿ ಬಗ್ಗೆ ವಿಚಾರಿಸೋದಿಕ್ಕೆ. ಆ ಪಿಚಾಂಡಿ ಸಭಾಪತಿಯ ನೋಟು ಕೊಳ್ಳೋದಿಕ್ಕೆ ನಿಮ್ಮ ಸಹಾಯ ಕೇಳೋದಿಕ್ಕೆ ಬಂದಿದ್ದನೆ ಅಂತ....ಆದರೆ ಇಲ್ಲಿಗೆ ಬಂದ ಮೇಲೆ ನನಗೆ ತಿಳಿದಿದ್ದು? ಕೈಬಿಡಬೇಕಾಗಿದ್ದ ಪ್ರಕರಣದ ಮೇಲೆ ಭಾರಿ ಫ್ಲಾಡ್ ಲೈಟ್ ಬಿತ್ತು!.....ಮಿಸ್ಟರ್ ವಾನಂಬಾಡಿ, ಈಗ ನಾನು ಎಲ್ಲಾ ಪ್ರಾರಂಭ ಮಾಡಬೇಕು. ಸರಿಯಾಗಿ ಉತ್ತರ ಕೊಡ್ತೀರಲ್ಲ?"

ಪೂರ್ತಿಯಾಗಿ ಚೇತನ ಕಳೆದುಕೊಂಡಿದ್ದ. ಪರಿಸ್ಥಿತಿಯ ಬಲಿ ಆಗಿದ್ದ ಬಣ್ಣದ ಹುಚ್ಚನ ನಡು ಹಿಡಿದು ಬಾಗಿಲಿನಿಂದ ಹೊರಕ್ಕೆ ಕರೆದೊಯ್ಯುತ್ತಾ ಫಾಸ್ಟರ್ ಗೊರಗಿದ.

"ಕೇವಲ ಒಂದು ಚೂರು ಬಣ್ಣದ ಕಾಗದಕ್ಕಾಗಿ!"

"ಆದರೆ ನಾನು ಸಭಾಪತಿನ ಕೊಲ್ಲಲಿಲ್ಲ!"

ಚೇರಿದ ವಾನಂಬಾಡಿ.

"ಆದರೆ ಆ ಕೊಲೆಗೆ ಒಂದು ಉದ್ದೇಶ ಹೊಂದಿರೊ ವ್ಯಕ್ತಿ. ಉದ್ದೇಶ ಹೊಂದಿದ್ದ ವ್ಯಕ್ತಿ ಅಂದರೆ ನೀವೊಬ್ಬರೇ! ನೀವು ಕೊಲೆ ಮಾಡಲಿಲ್ಲ ಅಂದ್ರೆ ಮತ್ತೆ ಯಾರು ಮಾಡಿದ್ರು?"

ಫಾಸ್ಟರ್ ಖಚಿತ ನಿರ್ಧಾರ ತಳೆದು ಕೇಳಿದ.

"ಯಾರು ಮಾಡಿದ್ರು? ಸಭಾಪತಿಯ ಕೊಲೆಗೆ ಒಂದೇ ಉದ್ದೇಶ. ಅವನಲ್ಲಿದ್ದ ವಿದೇಶಿ ನೋಟುಗಳನ್ನು ಪಡೆಯುವುದು.....ಹೌದು, ಸಭಾಪತಿಯನ್ನು ಆ ಉದ್ದೇಶದಿಂದ ಕೊಲೆ ಮಾಡಬಹುದಾದವರು ಯಾರು?"

ಕೋವಿಯ ಹೊಡೆತಕ್ಕೆ ಸಿಕ್ಕಿದ ಪ್ರಾಣಿಯಂತೆ ವಿಕೃತ ಸ್ವರದಲ್ಲಿ ಚೀತ್ಕರಿಸಿದ ವಾನಂಬಾಡಿ.

* * *